



ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

ಸಂಚಿಕೆ
೧೦೫

ಶ್ರದ್ಧಾಂಜಲಿ



'ಕಮಲೇಶ್' ತಮ್ಮ ರೇಖಾಚಿತ್ರಗಳಲ್ಲಿ ಕರ್ನಾಟಕದ ಪ್ರಸಿದ್ಧ ಐತಿಹಾಸಿಕ ಸ್ಥಳಗಳನ್ನು, ಅವುಗಳ ಚೆಲುವನ್ನು ಕಾಣಿಸಿದ ಅಪರೂಪದ ಕಲಾವಿದ. ಅವರದ್ದೇ ವಿಶಿಷ್ಟ ಶೈಲಿಯ ಅಕ್ಷರ ವಿನ್ಯಾಸ ಹಾಗೂ ಮುಖಪುಟಗಳು, ನಮ್ಮ ಸಂಸ್ಕೃತಿಯ ನೆನಪಿನ ಭಾಗ. ಈಚೆಗೆ ನಿಧನರಾದ ಅವರಿಗೆ ನಮ್ಮ ಶ್ರದ್ಧಾಂಜಲಿ.

ಸಂಚಯ
ಗ್ಯಾ|ಲ|ರಿ



ಶಿವಗಂಗೆಯ ದೇವಸ್ಥಾನ

■ ಸಂಚಿಕೆ: ೧೦೫

ಸಂಚಯ

ಕನ್ನಡ ಸಾಹಿತ್ಯ, ಸಂಸ್ಕೃತಿ ಪತ್ರಿಕೆ

■ ದ್ವೈ ಮಾಸಿಕ ■ ಜುಲೈ-ಆಗಸ್ಟ್ ೨೦೧೪

ಇಲ್ಲಿ ಸಂಪೂರ್ಣ ತೊಡಗಿದವನು ನಮ್ಮ
ಸಂಸ್ಕೃತಿಯನ್ನು ಸಂಪೂರ್ಣ ಸ್ವೀಕರಿಸುವುದೂ ಅಸಾಧ್ಯ.
ನಿರಾಕರಿಸುವುದೂ ಅಸಾಧ್ಯ.

■ ಯು.ಆರ್. ಅನಂತಮೂರ್ತಿ

ಸಂಪಾದಕ :

ಡಿ.ವಿ. ಪ್ರಹ್ಲಾದ್

ಸಂಪರ್ಕ ವಿಳಾಸ

ನಂ. ೧೦೦, ೨ನೇ ಮುಖ್ಯರಸ್ತೆ,
೬ನೇ ಬ್ಲಾಕ್, ೩ನೇ ಹಂತ, ೩ನೇ ಘಟ್ಟ
ಬನಶಂಕರಿ, ಬೆಂಗಳೂರು - ೫೬೦ ೦೮೫
ಫೋನ್‌ನಂ.:೦೮೦-೨೬೭೭೧೯೨೫
ಮೊಬೈಲ್: ೯೮೪೪೦ ೬೩೫೧೪
email:
sanchaya.sahityapatrike@gmail.com

● ಮುಖಪುಟ ಹಾಗೂ ಒಳಗಿನ ಭಾವಚಿತ್ರ: **ಕೆ. ಕರಿಸ್ವಾಮಿ**, ಪುಟವಿನ್ಯಾಸ: **ಎಂ.ಆರ್. ಗುರುಪ್ರಸಾದ್**

ಚಂದಾವಿವರ

● ಬಿಡಿಪ್ರತಿ : ರೂ. ೮೫/- ● ವರ್ಷಕ್ಕೆ (ಆರು ಸಂಚಿಕೆಗಳು) : ರೂ. ೫೦೦/-
● ವಿದ್ಯಾರ್ಥಿಗಳಿಗೆ : ರೂ. ೩೦೦/-

ಚೆಕ್/ಡಿ.ಡಿ. ಮೂಲಕ ಚಂದಾ ಕಳಿಸುವವರು 'ಸಂಚಯ', ಬೆಂಗಳೂರು ಎಂಬ ಹೆಸರಿಗೆ ಕಳುಹಿಸಿ ಅಥವಾ
ಕೆನರಾಬ್ಯಾಂಕ್, ಬೆಂಗಳೂರಿನ ಗಿರಿನಗರ ಶಾಖೆ ಉಳಿತಾಯ ಖಾತೆ ಸಂ.: **1821101004682**ಗೆ
ಐಎಫ್‌ಎಸ್‌ಸಿ ಕೋಡ್: CNRB 0001821 - ಜಮಾ ಮಾಡಬಹುದು.

ಹೊಳೆದದ್ದು ತಾರೆ ಉಳಿದದ್ದು ಆಕಾಶ!

ಪ್ರಿಯ ಓದುಗರೆ,

ಮತ್ತೊಂದು ಸಂಚಿಕೆ, ಯಾವತ್ತಿಗಿಂತ ತಡವಾಗಿ.

ಹಿರಿಯ ಲೇಖಕ ಯು.ಆರ್. ಅನಂತಮೂರ್ತಿ ನಿರ್ಗಮಿಸಿದ್ದಾರೆ. ನಮ್ಮ ನಾಡಿನ ತಮ್ಮದೇ ಲೇಖಕ ಗಣದಲ್ಲಿ ಅವರದ್ದೇ ವಿಶಿಷ್ಟ ಸ್ಥಾನ-ಮಾನ. ಕಳೆದ ನಾಲ್ಕೈದು ದಶಕಗಳಿಂದ ನಮ್ಮ ಸಾಹಿತ್ಯಲೋಕದಲ್ಲಿ, ನಮ್ಮ ಸಾರ್ವಜನಿಕ ಬದುಕಿನಲ್ಲಿ ಅವರ ಕ್ರಿಯಾಶೀಲವಾದ ಪಾತ್ರ ದೊಡ್ಡದು. ಅವರ ತಲೆಮಾರಿನ ನಕ್ಷತ್ರತ್ರಯ ಲೇಖಕರಲ್ಲಿ ಅನಂತಮೂರ್ತಿ (೧೯೩೨), ಲಂಕೇಶ್ (೧೯೩೫), ತೇಜಸ್ವಿ(೧೯೩೮) ಕೊನೆಯವರಾಗಿ ಅವರ ನಿರ್ಗಮನ.

ಅನಂತಮೂರ್ತಿ ಅವರು ಲೇಖಕರಾಗಿ, ಇಂಗ್ಲಿಷ್ ಅಧ್ಯಾಪಕರಾಗಿ ಅರುವತ್ತರ ದಶಕದಲ್ಲಿ ತಮ್ಮ ವೃತ್ತಿ ಹಾಗೂ ಲೇಖನ ವ್ಯವಸಾಯ ಆರಂಭಿಸಿದರು. 'ಬರೆದಾಗ ನನ್ನದು ಬೇರೆ ಅವರದು ಬೇರೆ ಎಂಬ ರೀತಿಯಲ್ಲಿ ಬರೆಯುವ ನಮ್ಮಿಬ್ಬರ ಪರಸ್ಪರ ಮೆಚ್ಚಿಗೆ, ಆಕ್ಷೇಪಣೆ, ಅಸೂಯೆ ಇತ್ಯಾದಿಗಳ ಬಗ್ಗೆ ಈಗ ಬರೆದರೆ ಸಾಕು, ಅದು ಅನೇಕ ವರ್ಷಗಳಾದ ಮೇಲೆ ನಾವೆಲ್ಲಾ ಮಣ್ಣು ಸೇರಿದ ಮೇಲೆ ಉಳಿದದ್ದನ್ನು ನೋಡುವವರಿಗೆ ಒಳ್ಳೆಯ ವಸ್ತುಗಳಾಗಬಲ್ಲದು' ಎಂದು ಅನಂತಮೂರ್ತಿಯವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗಿನ ಸಂದರ್ಭದ(೧೯೯೪) ಬರಹದಲ್ಲಿ ಲಂಕೇಶ್ ವಿವರಿಸುತ್ತಾರೆ. ತಮ್ಮ ಪರಂಪರೆಯ ವಿರುದ್ಧ ಬಂಡೆದ್ದು ಬೇರೆ ಬೇರೆ ದಾರಿ ತುಳಿದ ಈ ಮೂವರು ಲೇಖಕರ ಸಂಬಂಧ, ಸಂವಾದ, ಪರಸ್ಪರ ಮೆಚ್ಚುಗೆ ಅಸಹನೆಗಳು, ಅಸೂಯೆಗಳು ಈಗ ಅವರ ನಿರ್ಗಮನದಲ್ಲಿ ಬಿಡಿಸಿಕೊಡುವ ಚಿತ್ರಗಳೇ ಬೇರೆ. ಜೊತೆಗೆ ತಾವು ಬರೆದದ್ದು ತಮ್ಮ ನಂತರವೂ ನಿಲ್ಲಬಲ್ಲವೆನ್ನುವ ಅವರ ಆತ್ಮವಿಶ್ವಾಸ ಗಮನಾರ್ಹವಾದದ್ದು.

'ಸಂಸ್ಕಾರ' ಕಾದಂಬರಿಯ ಪ್ರಕಟಣೆಗೂ ಮೊದಲಿಗೆ ತಮ್ಮ ಸಶಕ್ತವಾದ ಸೃಜನಶೀಲ ಸಣ್ಣಕತೆಗಳ ಮೂಲಕ ಪ್ರಸಿದ್ಧರಾಗಿದ್ದ ಅನಂತಮೂರ್ತಿ, ತಮ್ಮ ಅನ್ಯಧರ್ಮೀಯ ವಿವಾಹದ ಮೂಲಕ ತೋರಿದ ತಮ್ಮ ಪಂಪರೆಯ ಪ್ರತಿರೋಧ, ಸಾರ್ವಜನಿಕ ಮುಖವಾದರೆ ತನ್ನ ಮದುವೆಯಿಂದ ಮನೆಯವರಿಗೆ ಹಿರಿಯರಿಗೆ ಆದ ಮುಜುಗರದ ಬಗ್ಗೆಯೂ ವಿಷಾದವಿದ್ದಿರಬೇಕು. ಅದು ಜಿ.ಬಿ. ಜೋಷಿಗೆ ಬರೆದ ಪತ್ರದ ಕೆಲಸಾಲುಗಳಲ್ಲಿ ಸೂಕ್ಷ್ಮವಾಗಿ ವ್ಯಕ್ತಗೊಂಡಿದೆ. ಲಂಕೇಶರದ್ದು ಸಾಂಪ್ರದಾಯಿಕ ಮದುವೆ ಆದರೆ, ತೇಜಸ್ವಿಯವರದ್ದು ಮಂತ್ರಮಾಂಗಲ್ಯದ ಮದುವೆಯಾಗಿ ಈ ಕಾಲಕ್ಕೆ ಅದು ಹೆಚ್ಚು ಪ್ರಸಿದ್ಧವಾಯಿತು. ಮದುವೆಯಾಚೆಗಿನ ಇವರುಗಳ ಪ್ರಣಯಗಳ ಬಗ್ಗೆ ಬರೆಯುವುದಕ್ಕೆ ಇದು ಸಂದರ್ಭವಲ್ಲ,

'ಬ್ರಾಹ್ಮಣನಾಗಿ ಹುಟ್ಟಿ ಬೆಳೆದ ನನಗೆ, ಬ್ರಾಹ್ಮಣರ ಮನಸ್ಸನ್ನು ನೋಯಿಸುವುದು ಅನಿವಾರ್ಯವೇ ಹೊರತು ಇಷ್ಟದ ಸಂಗತಿಯಲ್ಲ...' 'ಇಲ್ಲಿ ಸಂಪೂರ್ಣವಾಗಿ ತೊಡಗಿದವನು ನಮ್ಮ ಸಂಸ್ಕೃತಿಯನ್ನು ಸಂಪೂರ್ಣ ಸ್ವೀಕರಿಸುವುದೂ ಅಸಾಧ್ಯ, ನಿರಾಕರಿಸುವುದೂ ಅಸಾಧ್ಯ.' ಎನ್ನುತ್ತಾರೆ. ೧೯೬೦ರಲ್ಲಿ 'ಸಾಹಿತ್ಯದಲ್ಲಿ ಬ್ರಾಹ್ಮಣ-ಶೂದ್ರ' ಎಂಬ ಪರಿಕಲ್ಪನೆ ಮಂಡಿಸಿದ ಅನಂತಮೂರ್ತಿ, ೧೯೭೪ರಲ್ಲಿ ಸಂಕ್ರಮಣ ೬೦ಕ್ಕೆ ಬರೆದ 'ಭಾರತೀಯ ಸಂಸ್ಕೃತಿ ಮತ್ತು ಲೇಖಕ' ಎಂಬ ಬರಹಕ್ಕೆ ತೇಜಸ್ವಿ ಅವರು 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ತೀವ್ರವಾದ ಪ್ರತಿಕ್ರಿಯಾತ್ಮಕ ಲೇಖನ ಬರೆದಿದ್ದಾರೆ. ಅನಂತಮೂರ್ತಿ ತಮ್ಮ ಸೂಕ್ಷ್ಮವಾದ ಆದರೆ, ಅಷ್ಟೊಂದು ಗಟ್ಟಿಯಾದ ನೆಲೆಗಟ್ಟಿಲ್ಲದ ವಿಚಾರ ಸರಣಿಯ ಮೂಲಕ ಭಾರತೀಯ ಸಂಸ್ಕೃತಿ ಕುರಿತ ಒಳಗಿನವರಾಗಿಯೂ ಹೊರಗಿನವರಾಗಿಯೂ ಇರುವ ಸ್ಥಿತಿಯ ಬಗ್ಗೆ ಬರೆಯುತ್ತಾರೆ. ತಮ್ಮ ವಿಮರ್ಶಾ ಗುರು ಅಡಿಗರ ಬರಹದ ದಟ್ಟ ಪ್ರಭಾವಕ್ಕೆ ಒಳಗಾಗಿದ್ದ ಆ ಕಾಲಘಟ್ಟದಲ್ಲಿ ಕುವೆಂಪು ಅವರ ಸೃಜನಶೀಲತೆಯ ಸಿದ್ಧಿಯ ಬಗೆಗೆ ತಮ್ಮ ದುರ್ಬಲ ಅನುಮಾನಗಳನ್ನು ಮಂಡಿಸುತ್ತಾರೆ. ಕುವೆಂಪು ಅವರದಕ್ಕಿಂತಲೂ ಅಡಿಗರದ್ದೇ ಶ್ರೇಷ್ಠ ಜೀವಂತ ಸಾಹಿತ್ಯ ಎಂಬ ನಿಲುವಿಗೆ ಬರಹದ ಕೊನೆಯಲ್ಲಿ ತಲುಪುತ್ತಾರೆ.

''ಬ್ರಾಹ್ಮಣನೊಬ್ಬನ ಬೌದ್ಧಿಕ ವಿರೋಧಾಭಾಸಗಳು'' ಅಂತಲೇ ಆರಂಭಗೊಳ್ಳುವ ತೇಜಸ್ವಿ ಅವರ ಪ್ರತಿಕ್ರಿಯೆ ''ಅನಂತಮೂರ್ತಿ ಮತ್ತು ನೀರದ ಚೌಧುರಿಯ ತರಹದ ಆಂಗ್ಲೋ-ಬ್ರಾಹ್ಮಿನ್ ಪ್ರಜ್ಞೆಗೆ ಮಾತ್ರ 'ಭಾರತೀಯ ಸಂಸ್ಕೃತಿ' ಕಾಣಲು ಸಾಧ್ಯ.'' ಬ್ರಾಹ್ಮಣರಾದ್ದರಿಂದ ಅನಂತಮೂರ್ತಿ ಅವರಿಗೆ ಈ ನಾಡಿನ ಸಂಸ್ಕೃತಿ, ಜನಸ್ತೋಮದ ಬಗ್ಗೆ ಪಾರಂಪರ್ಯವಾಗಿ ಬರಬೇಕಿದ್ದ ತಿಳುವಳಿಕೆ ಬರಲಿಲ್ಲ, ಅಧ್ಯಯನದಿಂದಲೂ ಅವರಿಗೆ ಇಂಗ್ಲಿಷ್ ಸಾಹಿತ್ಯ ಓದಿದ್ದರಿಂದ ಅದು ಬರಲಿಲ್ಲ ಎನ್ನುತ್ತಾರೆ. ಅಮೂರ್ತ ಭಾರತದಲ್ಲಿ ಬದುಕುವ, ವೈದಿಕರ ಪ್ರವಾಸೋದ್ಯಮ ಜೀವನ ಅಸಹ್ಯ. ಬ್ರಾಹ್ಮಣರ ಅಲೆಮಾರಿ ಪ್ರವೃತ್ತಿ ಹೊಸ ಅನುಭವಗಳನ್ನೊಳಗೊಳ್ಳದ ಮಹತ್ವಾಕಾಂಕ್ಷೀ ಸಾಹಸ ಪ್ರವೃತ್ತಿ ಆಗದೆ, ಕುಕ್, ಕೊಲಂಬಸ್‌ನಂಥ ಅನ್ವೇಷಕ ಪ್ರವೃತ್ತಿ ಆಗದೆ, ಕೇವಲ ವ್ಯವಸಾಯ ಮುಂತಾದ ಶೂದ್ರೋದ್ಯಮದಿಂದ ತಪ್ಪಿಸಿಕೊಳ್ಳುವ ಸೋಮಾರಿತನ ಮಾತ್ರವಾದುದಾಗಿದೆ. ಈ ಬ್ರಾಹ್ಮಣ ಅಥವಾ ವೈದಿಕ ಸಮುದಾಯದಲ್ಲಿ ಮಾತ್ರ ಹುಟ್ಟಿದ ಲೇಖಕರಿಗಿರುವ ಒಂದು ಪ್ರಬಲ ಸಮಸ್ಯೆ ಎಂದರೆ, ತನ್ನ ಸರ್ವೋನ್ನತ ಅಭಿವ್ಯಕ್ತಿಯನ್ನು ಈ ಭಾಷೆಯಲ್ಲೇ ಪಡೆಯಬೇಕು. ಆದರೆ, ತನ್ನ ಧಾರ್ಮಿಕ ಪರಂಪರೆ, ನಿಲುವು, ಜೀವನ ಕ್ರಮಗಳ ಮುಖಾಂತರ ಈ ಭಾಷೆಯನ್ನಾಡುವ ಶೂದ್ರ ಸಮುದಾಯದೊಂದಿಗೆ ವಿಲೀನಗೊಳ್ಳುವುದು ಕಷ್ಟಸಾಧ್ಯ.'' ಹೇಗೆ ಅಂತೆಲ್ಲಾ ವಿವರಿಸುವ ಗೋಜಿಗೆ ತೇಜಸ್ವಿ ಹೋಗುವುದಿಲ್ಲ. ತಮ್ಮ ತಂದೆಯವರಾದ ಕುವೆಂಪು ಹೇಗೆ ಕನ್ನಡದ ದೊಡ್ಡ ಐಕಾನ್ ಎನ್ನುವುದನ್ನು ವಿವರಿಸುತ್ತಾರೆ. ತನ್ನ ತಂದೆಯ ಸಾಹಿತ್ಯ ಕುರಿತು ತಾನೇ ಸಮರ್ಥಿಸಿಕೊಳ್ಳುವುದು ಸರಿಯೇ ಅನ್ನುವ ಪ್ರಶ್ನೆ ಅವರನ್ನೇನೂ ಕಾಡಿದ ಹಾಗಿಲ್ಲ, ತೇಜಸ್ವಿ ಸಮರ್ಥನೆಯ ಅಗತ್ಯವಿಲ್ಲದೆಯೂ ಕುವೆಂಪು ಕನ್ನಡದ ಟೈಟನ್. ಒಂದು ಹಂತದಲ್ಲಿ ಕನ್ನಡ ಚಳವಳಿಯ ನೇತಾರಿಕೆಯೂ ಆ ಕಾಲದಲ್ಲಿ ಅ.ನ.ಕೃ., ಮ. ರಾಮಮೂರ್ತಿ ಮುಂತಾದ ಬ್ರಾಹ್ಮಣರದ್ದೇ ಆಗಿದ್ದರಿಂದ ಅದು ಬರೀ ಸೈದ್ಧಾಂತಿಕ ನೆಲೆಯಲ್ಲೇ ಉಳಿದು ಹೆಚ್ಚು ಜನಗಳನ್ನು ತಲುಪಲು ಅಸಾಧ್ಯವಾಯಿತು ಎಂಬ ನಿಲುವು ತೇಜಸ್ವಿ ತಳೆಯುತ್ತಾರೆ.

ಒಂದೇ ಸ್ಥಳದಲ್ಲಿ ನೆಲೆಸಿರುವ ಭಾಷೆಯ ಎಲ್ಲಾ ಸೂಕ್ಷ್ಮ ಹಾಗೂ ಸಮರ್ಥವಾದ ಒಳ-ಹೊರಗುಗಳನ್ನು ಬಲ್ಲ ಶೂದ್ರ ಸಮುದಾಯ ಮಾತ್ರ ತನ್ನ ಕಾಲದ ಗಟ್ಟಿ ಸಾಹಿತ್ಯ ಒದಗಿಸಬಲ್ಲದು ಅಂತ ನಂಬುವ ತೇಜಸ್ವಿ ಅವರ ಮಾತುಗಳು ನಿಜ ಅಂತ ಇಟ್ಟುಕೊಂಡು ಆಲೋಚಿಸಿದರೂ, ಮಡಿಪಂಚೆ ಸವೆದು ಹರಿಯುವ ಹಾಗೆ ಅಂಡಲೆಯುವ ಬ್ರಾಹ್ಮಣನಾಗಲಿ, ಮಣ್ಣಿನೊಳಗೇ ಹುದುಗಿಕೊಂಡು,

ಹುತ್ತಗಟ್ಟಿದ ಹಾಗೆ ಚಿತ್ತಧ್ಯಾನಿಯಾದ ಶೂದ್ರನಾಗಲೀ ಬರೆದದ್ದು ಜೀವಂತಿಕೆ ಪಡೆಯದೇ ಹೋದರೆ, ಅಂತಹ ಬರವಣಿಗೆ ಜನರ ನಡುವೆ ನಿಲ್ಲುವುದಿಲ್ಲ. ಕಣ್ಣಿನ ಓದು ಪ್ರಧಾನವಾದ ಈ ಕಾಲಘಟ್ಟದಲ್ಲಿ ಭಾಷೆಯ ಎಲ್ಲ ಕಸುವು ಪಡೆದ ಲೇಖಕರ ಬರಹಗಳೂ ಜನಗಳನ್ನು ಮುಟ್ಟಿದ್ದಾಗಲಿ, ತಟ್ಟಿದ್ದಾಗಲಿ ಅಪರೂಪ ಎನ್ನುವುದು ವಿಷಾದದಿಂದಲೇ ಒಪ್ಪಿಕೊಳ್ಳಬೇಕಿದೆ.

ಆ ಕಾಲಕ್ಕೆ ಮೈಸೂರಿನಲ್ಲಿ ಗಟ್ಟಿಗೊಂಡ ಬ್ರಾಹ್ಮಣವಿರೋಧಿ ವಾತಾವರಣದಿಂದ ಅನೇಕ ಪ್ರತಿಭಾವಂತ ಬ್ರಾಹ್ಮಣ ಲೇಖಕರು ಹೊರರಾಜ್ಯಗಳಲ್ಲಿ, ದೇಶಗಳಲ್ಲಿ ತಮ್ಮ ಅವಕಾಶದ ಬಾಗಿಲು ತಟ್ಟಲೇಬೇಕಾಯ್ತು. ಹಾಗೆ ಅವರ ಆಲೆಮಾರಿತನ ಕನ್ನಡ ಬರವಣಿಗೆಯ ರಾಶಿಗೆ ಹೊಸದಾದ ಅನುಭವ ಜಗತ್ತು ತೆರೆದುಕೊಂಡಿತು. ಇದೇ ತೇಜಸ್ವಿ ನಂತರದ ಹಾದಿಯಲ್ಲಿ ಕನ್ನಡಕ್ಕೆ ತಂದ ಕೆನೆತ್ ಆ್ಯಂಡರ್‌ಸನ್, ಜಿಮ್ ಕಾರ್ಬೆಟ್, ಹೆನ್ರಿ ಶೆರಾರೇ, ಮುಂತಾದ ರೋಚಕವಾದ ಬರಹಗಳು ಸಾಹಿತ್ಯ ಅನ್ನುವುದು ಈ ಮಣ್ಣಿನಷ್ಟೇ ಅಲ್ಲ, ಹೊರಗಿನ ಬೆಳಕು ಗಾಳಿಯನ್ನೂ ಒಳಗೊಳ್ಳಬೇಕೆನ್ನುವುದನ್ನು ಸಾಧಿಸುತ್ತದೆ. ಕೆನೆತ್ ಆ್ಯಂಡರ್‌ಸನ್ ಬ್ರಾಹ್ಮಣನಾಗಲಿ, ಶೂದ್ರನಾಗಲಿ ಅಥವಾ ಭಾರತೀಯನೂ ಆಗಿರಲಿಲ್ಲ. ಅನಂತಮೂರ್ತಿ ಹೇಳಿದ ಬ್ರಾಹ್ಮಣ ಶೂದ್ರ ಪರಿಕಲ್ಪನೆಯನ್ನೇ ತೇಜಸ್ವಿಯವರೂ ಬದುಕಿದರು. ಆದರೆ, ವಾಗ್ವಾದದಲ್ಲಿ ವಿರೋಧಿಸಿದರು.

ಅದೇ ಅನಂತಮೂರ್ತಿ ತಮ್ಮ ವಿದ್ಯಾರ್ಥಿಯೂ ಆಗಿದ್ದ ತೇಜಸ್ವಿ ಕುರಿತು 'ತಮ್ಮ ಭಾವನಾ ಲೋಕದಲ್ಲಿ ತೇಜಸ್ವಿ ಎಂದೂ ಕೃತಕವಾಗಿರಲಿಲ್ಲ. ಒಬ್ಬ ಲೇಖಕನಾದವನು ಉದಾತ್ತವಾಗಿ ತೋರಲೆಂದೋ ಆಕರ್ಷಕವಾಗಿರಲೆಂದೋ ತನ್ನ ಭಾವನೆಗಳಲ್ಲಿ ಸುಳ್ಳನಾಗಿರಬಾರದು. ತೇಜಸ್ವಿ ತನ್ನ ಭಾವನೆಗಳನ್ನು ತನ್ನೊಳಗೆ ತಿಳಿಯುವುದರಲ್ಲೂ ವ್ಯಕ್ತಪಡಿಸುವುದರಲ್ಲೂ ಅಪ್ಪಟನಾಗಿದ್ದ' ಎನ್ನುತ್ತಾರೆ. ಅವರ ನಡುವಿನ ವಾಗ್ವಾದಗಳು ಕಹಿ ಹುಟ್ಟಿಸಲಿಲ್ಲ, ನವ್ಯದ ಅತಿರೇಕದಿಂದ ತೇಜಸ್ವಿ ಕನ್ನಡ ಸಾಹಿತ್ಯವನ್ನು ಬಿಡುಗಡೆ ಮಾಡಿದವರು ಎಂದು, ಸಣ್ಣಕತೆಯನ್ನು ನಿರಾಳಗೊಳಿಸಿದವರು ಎಂದೂ ಹೊಗಳುತ್ತಾರೆ.

ಇತ್ತ ಕರ್ನಾಟಕವನ್ನೇ ದಾಟದ, ಇಲ್ಲೇ ಕುಳಿತು ಜಗತ್ತನ್ನ ಆವಾಹಿಸಿಕೊಂಡ ಲಂಕೇಶ್ ಮತ್ತು ತೇಜಸ್ವಿ ಕನ್ನಡದಲ್ಲಿ ಮಾತ್ರ ತಮ್ಮದೇ ಆದ ಛಾಪು ರೂಢಿಸಿದರೆ, ಅತ್ತ ಜಗತ್ತಿನ ಎಲ್ಲ ವಿಚಾರಗಳನ್ನು ಒಳಗೊಳ್ಳುವ ಹಾಗೆ ಸಾಂಸ್ಕೃತಿಕ ರಾಜಕಾರಣ ನಡೆಸಿದ ಅನಂತಮೂರ್ತಿ ಪಡೆದುಕೊಂಡಿದ್ದು, ಕನ್ನಡಕ್ಕೆ ಕೊಟ್ಟಿದ್ದು ಅನನ್ಯವಾದುದು. ಇಂಗ್ಲಿಷಿನಲ್ಲಿ ಬರೆಯುವ ಜಗತ್ಪ್ರಸಿದ್ಧಗೊಳ್ಳುವ ವಿಪುಲ ಅವಕಾಶವಿದ್ದು ನನ್ನದು ಈ ಕನ್ನಡ ಎನ್ನುವುದನ್ನು ಅನಂತಮೂರ್ತಿ ಬದುಕಿ ತೋರಿಸಿದರು. ಬೇರೆ ಬೇರೆ ಜ್ಞಾನಶಾಖೆಗಳ ವಿಜ್ಞಾನಿ, ರಾಜಕಾರಣಿ, ಸಮಾಜ, ಪರಿಸರತಜ್ಞರು ಮೊದಲಾದ ಭಿನ್ನ ತಿಳುವಳಿಕೆಯುಳ್ಳವರ ಸಹವಾಸ ಹಾಗೂ ಸಂವಾದ ಅನಂತಮೂರ್ತಿ ಅವರಿಗೆ ಒಂದು ವಿಶಿಷ್ಟವಾದ ಚಹರೆ ಹಾಗೂ ದೃಷ್ಟಿಕೋನ ತಂದುಕೊಟ್ಟಿತು. ಅದರ ಮೂಲಕ ಒಟ್ಟು ವಿಶ್ವದ ಸಾಹಿತ್ಯದಲ್ಲಿ ಕನ್ನಡ ಸಾಹಿತ್ಯದ ಹೆಸರನ್ನು ಅನಂತಮೂರ್ತಿ ಬೆಳಗಿದರು ಎನ್ನುವುದು ನಿರ್ವಿವಾದ.

ತೇಜಸ್ವಿ ತೋರಿಸಿದ ಜಿಜ್ಞಾಸೆಗಳನ್ನು ಅನಂತಮೂರ್ತಿ ಕಾಲಾನುಕ್ರಮದಲ್ಲಿ ಮೀರಿದರೂ ಅನಂತಮೂರ್ತಿಯವರ ಬ್ರಾಹ್ಮಣ್ಯದ ಬಗ್ಗೆ, ಜಾಣತನದ ಬಗ್ಗೆ ಉದ್ದಕ್ಕೂ ಅಪನಂಬಿಕೆಯಿಂದಲೇ ಕಾಣಲಾಯ್ತು. ಅನಂತಮೂರ್ತಿ ತನ್ನ ಸ್ವಜಾತಿಯ ಬಗ್ಗೆ ತೋರಿದ ಕಠಿಣವಾದ ವಿಮರ್ಶಾದೃಷ್ಟಿ ಲಂಕೇಶ್ ತೇಜಸ್ವಿ ಇಬ್ಬರಲ್ಲೂ ಕಾಣಲಿಲ್ಲ, ಲಿಂಗಾಯಿತರ ಬಗ್ಗೆ ಲಂಕೇಶ್ ಆಗಲಿ, ಒಕ್ಕಲಿಗ ಜಾತಿಯ ಬಗ್ಗೆ ತೇಜಸ್ವಿಯಾಗಲಿ ಟೀಕಿಸಿದ್ದು ಗಟ್ಟಿಯಾಗಿ ಬರೆದದ್ದು ಸ್ಪಷ್ಟವಾಗಿ ಕಾಣುವುದಿಲ್ಲ, ಇವರಿಬ್ಬರೂ ತಮ್ಮ ಜಾತಿಗಳನ್ನು ನಿರಾಕರಿಸಿದರು. ಆದರೆ, ಅದು ನಾಸ್ತಿಕತನದ ಸುರಕ್ಷೆಯ ಹಾಗೇ ತೋರುತ್ತದೆ.

ನಾಸ್ತಿಕನದ್ದು ನಿರಾಕರಣೆಯ ಹಾಗೂ ಆ ನಂಬಿಕೆ ಕುರಿತ ಜವಾಬ್ದಾರಿಯ ಹೊರಗೆ ನಿಲ್ಲುವ ಕ್ರಿಯೆಯಾದರೆ, ಒಪ್ಪಿದವನದ್ದು ಒಪ್ಪಿದ್ದರ ಸ್ವೀಕೃತಿ ಹಾಗೂ ಅನುಮಾನದ ಎರಡೂ ದ್ವಂದ್ವ ಹಾಗೂ ತೊಳಲಾಟಗಳು. ಪರಂಪರೆಯ ಒಳ್ಳೆಯ ಗುಣಗಳ ಬಗ್ಗೆ ನಿರಾಕರಣೆ ಇಲ್ಲದಿದ್ದ ಅನಂತಮೂರ್ತಿ ಹೆಚ್ಚು ತೊಳಲಾಡಿದರೆ, ಉಳಿದಿಬ್ಬರು ಅದರಿಂದ ದೂರ ಉಳಿದರು. ತಮ್ಮ ಕೊನೆಗಾಲದಲ್ಲಿ ಸಂಪ್ರದಾಯ ಹಾಗೂ ಪರಂಪರೆಯ ಬಗ್ಗೆ ಕೊಂಚ ಮೃದುವಾಗಿದ್ದ ಲಂಕೇಶ್. ಸ್ವಾಮೀಜಿಗಳು ಮನುಷ್ಯರು ಅವರ ಸ್ಥಿತಿ ಉಳಿದವರಿಗಿಂತ ಸಂಕೀರ್ಣವಾಗಿರುತ್ತದೆ ಅಂತನ್ನುವ ಮಾನವೀಯತೆಯ ಮಾತಾಡಿದ್ದರು.

ಇಂಗ್ಲೆಂಡಿನ ಪರಿಸರದಲ್ಲಿ ಕಲಿತುಬಂದಿದ್ದು ಅನಂತಮೂರ್ತಿ ಅವರಿಗೆ ಡೆಮಾಕ್ರೆಸಿಯ ಪರಿಕಲ್ಪನೆಯಲ್ಲಿ ಮತ್ತೊಬ್ಬರನ್ನು ಅವರ ಅಭಿಪ್ರಾಯ ಒಪ್ಪದೆಯೂ ಸಹಿಸಿಕೊಳ್ಳುವ ಗುಣ ಬಂದಿರ ಬೇಕು. ಪರಸ್ಪರ ಸಂವಾದ ಅವರೊಂದಿಗೆ ಸಾಧ್ಯವಾಗುತ್ತಿತ್ತು. ಆದರೆ, ಆ ಸಂವಾದದ ಸಹನೆಯ ಗುಣ ಉಳಿದ ಲೇಖಕ ಗಣದಲ್ಲಿ ಎಷ್ಟಿತ್ತು ಎನ್ನುವುದು ಪ್ರಶ್ನಾರ್ಹ. ಅನಂತಮೂರ್ತಿಯವರನ್ನು ಅರಗಿಸಿಕೊಳ್ಳುವುದು ನಮ್ಮ ಲೇಖಕ ವಲಯಕ್ಕೆ ಸಾಧ್ಯವಾಗಲಿಲ್ಲ, ವೈಚಾರಿಕತೆಯ ಅಥವಾ ನಂಬಿಕೆಯ ನೆಲೆಗಳಿಗಿಂತಲೂ ಅವರ 'ನಡೆಗಳು' ಆ ವಿಚಾರಕ್ಕೆ ಪುಷ್ಟಿಕೊಡಲಿಲ್ಲವೆಂದು ಅನ್ನಿಸುತ್ತದೆ.

ಆದರೆ, ಯುವ ಲೇಖಕರ ಜೊತೆಗೆ ತನ್ನ ಸಹಲೇಖಕರ ಜೊತೆಗೂ ಒನ್ ಟು ಒನ್ ಅನ್ನಿಸುವ ಸಂಬಂಧ ಸ್ಥಾಪಿಸಿಕೊಂಡದ್ದು ಅನಂತಮೂರ್ತಿಗಳ ವೈಶಿಷ್ಟ್ಯ. ಅನಂತಮೂರ್ತಿಯವರ ಬಗ್ಗೆ ಪ್ರತಿಯೊಬ್ಬರಿಗೂ ಹೇಳಿಕೊಳ್ಳಲು ಒಂದಷ್ಟು ಇದೆ. ಹಾಗೂ ಅವರ ಜತೆಗಿನ ಮಾತುಕತೆ ಸಂವಾದಗಳಲ್ಲಿ ಒಂದಷ್ಟು ಪಡೆದುಕೊಂಡ ಭಾವವೂ ಇದೆ. ಅದು ಅವರ ಸಹಲೇಖಕರಾದ ಭೈರಪ್ಪ, ಕಾರ್ನಾಡ್, ಕಂಬಾರ ಮುಂತಾದವರಲ್ಲಿ ಕಾಣಸಿಗುವುದಿಲ್ಲ.

ಅನಂತಮೂರ್ತಿಗಳ ಸೃಜನಶೀಲ ಕೃತಿಗಳು ಅವರ ವಿಮರ್ಶೆ ಹಾಗೂ ವೈಚಾರಿಕ ಬರಹಗಳು ಇವಕ್ಕೂ ಮಿಗಿಲಾಗಿ ಅವರ ಬೌದ್ಧಿಕ ವಿಲಾಸ ಅನೇಕ ವರ್ಷಗಳ ಕಾಲ ಅದೊಂದು ಅಪೂರ್ವ ಅನುಭವವಾಗಿತ್ತು. ಅನಂತಮೂರ್ತಿ ಅವರಿಗಿದ್ದ ಮಾತುಗಾರಿಕೆ, ಅವರ ಗುರು ಅಡಿಗ ಸಮಕಾಲೀನ ಲಂಕೇಶ್, ತೇಜಸ್ವಿ ಮುಂತಾದ ಯಾರಿಗೂ ಇರಲಿಲ್ಲ. ಅವರ ಅತ್ಯಪರೂಪದ ಮಾತುಗಾರಿಕೆ ವಿಚಾರವನ್ನು ಮಂಡಿಸುತ್ತಿದ್ದ ಪ್ರಖರವಾದ ರೀತಿ ಇವು ಕೇಳುಗರನ್ನು ಮಂತ್ರಮುಗ್ಧಗೊಳಿಸುತ್ತಿತ್ತು. ಇದಕ್ಕಿಂತಲೂ ಮಿಗಿಲಾಗಿ ತಮ್ಮ ಬಗ್ಗೆ ಬಂದ ಟೀಕೆಯನ್ನೂ ಅವರು ಮುಕ್ತವಾದ ಮನಸ್ಸಿನಿಂದ ಸ್ವೀಕರಿಸುತ್ತಿದ್ದರು. ಹಾಗೆಯೇ ಔಚಿತ್ಯ ಮೀರಿದ ವೈಯಕ್ತಿಕ ಟೀಕೆಗಳಿಗೆ ಕುಟುಂಬಸಮೇತ ಧರಣಿ ಕೂತು ಪ್ರತಿಭಟಿಸಿದ್ದೂ ಇದೆ. ಹೊಸ ಲೇಖಕರ ಬಗ್ಗೆ ಯುವಕರ ಬರವಣಿಗೆಯ ಬಗ್ಗೆ ಮೆಚ್ಚುವ ಉತ್ಸಾಹ, ಉದಾರತನವಿತ್ತು. ಸರಳವಾಗಿ ಬೆರೆಯುವ ಗುಣ ಅವರಲ್ಲಿ ಮುಖ್ಯವಾಗಿತ್ತು. ಅವರೇ ತಮ್ಮ ಬರವಣಿಗೆಯಲ್ಲಿ ಅನುಮಾನಿಸಿದ್ದ ಬೋಳೆತನ ಅವರ ಅನೇಕ ಉತ್ಸಾಹದ ಹಾಗೂ ದಾಕ್ಷಿಣ್ಯದ ಮುನ್ನುಡಿಗಳಲ್ಲಿ ಎದ್ದು ಹೊಡೆಯುತ್ತಿತ್ತು. ಎಂಥ ಅಪಾತ್ರನ ಸುಮಾರೆನ್ನುವ ಬರವಣಿಗೆಯನ್ನೂ ಪೋಷಿಸುತ್ತಿದ್ದ ಅವರ ಅಭಿರುಚಿಯ ಬಗ್ಗೆ ನನ್ನಂಥವರಿಗೆ ಕಸಿವಿಸಿಯಾಗುತ್ತಿತ್ತು.

ಎದುರಿಗಿದ್ದವರನ್ನು ಮೆಚ್ಚಿಸುವ ಮಾತಾಡುವ ಅವರ ಗುಣದ ಬಗ್ಗೆ ತಮ್ಮ ಅರುವತ್ತನೇ ವರ್ಷದ ಹುಟ್ಟು ಹಬ್ಬದ ಸಭೆಯಲ್ಲಿ ಲಂಕೇಶ್‌ರನ್ನು ಹೊಗಳಿ ಮಾತಾಡಿದಾಗ ಅವರು ಅದನ್ನು ಪ್ರತಿಭಟಿಸಿದ್ದು ದಾಖಲಿಸಿದ್ದಾರೆ. ತಮ್ಮ ಹಾಗೂ ತೇಜಸ್ವಿ ಸಾಹಿತ್ಯ ವಿಮರ್ಶಿಸದೆ ಅಡಿಗರ ಬಗ್ಗೆ ಮಾತ್ರ ಸಾರ್ವಕಾಲಿಕ ಅನ್ನಬಹುದಾದ ವಿಮರ್ಶೆ ಬರೆದದ್ದರ ಬಗೆಗಿನ ಅಸಮಾಧಾನ ಲಂಕೇಶ್ ಮುಲಾಜಿಲ್ಲದೆ ದಾಖಲಿಸುತ್ತಾರೆ. ಆದರೆ, ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗಲಾಗಲಿ, ಅಕಾಡೆಮಿಯ

ಅಧ್ಯಕ್ಷರಾದಾಗಲಾಗಲಿ ಅವರ ದ್ವಂದ್ವಗಳ ಜೊತೆಗೆ ಅವರ ಸೃಜನಶೀಲತೆಯನ್ನೂ ಮೆಚ್ಚಿ ಲಂಕೇಶ್ ಬರೆಯುತ್ತಾರೆ. ಆದರೆ, ತೇಜಸ್ವಿ ಅಷ್ಟೊಂದು ಉದಾರಿಯಾಗಿರಲಿಲ್ಲ.

''ಸಾಹಿತ್ಯ ಲೋಕದ ಯಾವುದೇ ಸ್ಥಾನ ಅಷ್ಟು ಶಕ್ತಿಯುತವಲ್ಲ, ನಿಜವಾದ ಸಾಹಿತಿಯ ಚೈತನ್ಯ ಅಡಗಿರುವುದೇ ಎಲ್ಲ ಸ್ಥಾನಮಾನಗಳನ್ನು ನಿರ್ಲಕ್ಷಿಸುವಲ್ಲಿ ಎಲ್ಲ ಅಧಿಕಾರವಂತರನ್ನು ಲೌಕಿಕ ಗದ್ದಲಗಳನ್ನೂ ತಿರಸ್ಕಾರ ಭಾವನೆಯಿಂದ ನೋಡುವಲ್ಲಿ ಪ್ರಜಾಪ್ರಭುತ್ವದಲ್ಲಿಯಂತೂ ಯಾವನೇ ನಿಜವಾದ ಲೇಖಕ ಈ ಅಕಾಡೆಮಿ ಪದ್ಮಶ್ರೀಗಳ ಪ್ರಲೋಭನೆಗಳಿಗೆ ಅಂಜುತ್ತಾನೆ.'' ('ಲಂಕೇಶ್ ಪತ್ರಿಕೆ', ಮಾರ್ಚ್ ೩, ೧೯೯೩) ಅನಂತಮೂರ್ತಿಗಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಚುನಾಯಿತರಾದಾಗ ಲಂಕೇಶ್– 'ನಮ್ಮ ಸಹಲೇಖಕನೊಬ್ಬ, ನಮ್ಮ ಪರಿಚಿತ ಸಾಹಿತಿಯೊಬ್ಬ ಉತ್ತಮ ಸ್ಥಾನಕ್ಕೆ ಬಂದಾಗಲಂತೂ ಇನ್ನೂ ನಿಷ್ಠುರವಾಗಿ ಮಾತನಾಡುವುದು ಅನಿವಾರ್ಯವಾಗುವುದರಿಂದ, 'ಅಧಿಕಾರದ ನಚ್ಚನೆಯ ಬಿಸಿಯೆನ್ನು ಇಷ್ಟಪಡುವ ಅನಂತಮೂರ್ತಿ ಎಂದೂ ಆರ್ಥಿಕವಾಗಿ ಭ್ರಷ್ಟರಾಗಲಿಲ್ಲ ಎಂದು ಇಟ್ಟುಕೊಂಡರೂ ಇವರ ವಿಚಾರ ವ್ಯಕ್ತಿಗಳ ಆಯ್ಕೆ ಕುತೂಹಲಕರವಾಗಿರುತ್ತದೆ' ಅನ್ನುತ್ತಾರೆ.

ಹೀಗೆ ಲಂಕೇಶ್ ನಿಷ್ಠುರ ಟೀಕೆಗಳ ನಡುವೆಯೂ ಅನಂತಮೂರ್ತಿ ಅವರ ಅಧಿಕಾರಪ್ರೀತಿಯ ರಾಜಕಾರಣದ ನಡೆಗಳು ಮುಂದುವರೆಯುತ್ತಲೇ ಇತ್ತು. ಲಂಕೇಶ್‌ರನ್ನು ಮೆಚ್ಚುವುದು ಈ ನಿಷ್ಠುರತೆಗೆ ಹಾಗೂ ಒಳ್ಳೆಯದನ್ನು ಗಟ್ಟಿಯಾದದ್ದನ್ನು ಬೆರಳಿಟ್ಟು ಗುರುತಿಸುವ ಅವರ ಔದಾರ್ಯಕ್ಕೆ.

ಅನಂತಮೂರ್ತಿ ಅವರ ಸಾಹಿತ್ಯ ರಾಜಕಾರಣ ಒಂದು ವಿಶೇಷ ಅಧ್ಯಯನವನ್ನೇ ಬೇಡುವ ವಿಷಯ. ಅಧಿಕಾರದಲ್ಲಿ ಆಯಕಟ್ಟಿನ ಜಾಗಗಳಲ್ಲಿ ತನಗೆ ಬೇಕಾದವರನ್ನು ಪ್ರತಿಷ್ಠಾಪಿಸುವ ಅವರ ಜಾಣತನ ಇಂಥವುಗಳಿಂದ ಗಾವುದ ದೂರ ಇರುವವರಿಗೂ ಕಣ್ಣಿಗೆ ಹೊಡೆಯಬಲ್ಲಷ್ಟು ಢಾಳಾಗಿತ್ತು. ಅವರ ಮುಗ್ಧತೆಯನ್ನು ಸಂಪರ್ಕವನ್ನು ವ್ಯವಸ್ಥಿತವಾಗಿ ಬಳಸಿಕೊಂಡ ಹಲವರ ಉದಾಹರಣೆ ನಮ್ಮೆದುರಿಗೆ ಇವೆ. ಅನಂತಮೂರ್ತಿ ಆಪ್ತ ವಲಯಕ್ಕೆ ಸೇರುವುದು ಸಾಹಿತ್ಯ ಜಗತ್ತಿನ ಯಶಸ್ಸಿಗೆ ಹತ್ತಿರದ ದಾರಿ ಅಂತ ಅನ್ನುವ ಹಾಗೆ ಅನೇಕರು ನಡೆದುಕೊಂಡದ್ದು ನಮ್ಮೆದುರಿಗಿದೆ. ಇಂಥ ಗುಂಪುಗಾರಿಕೆ ಲಾಬಿಗಿರಿ ತಪ್ಪು, ತಾವು ಪ್ರತಿಪಾದಿಸಿದ ಮೌಲ್ಯಗಳಿಂದ ದೂರವಾದದ್ದು ಅಂತ ಅವರಿಗೆ ಯಾವತ್ತೂ ಅನ್ನಿಸಲಿಲ್ಲವೇ? ಒಮ್ಮೆ ಅಚಾನಕ್ಕಾಗಿ ಭೇಟಿಯಾಗಿದ್ದ ಅಕುಮಲ್ ರಾಮಚಂದ್ರ ಅವರು ಹೇಳಿದ ಅನಂತಮೂರ್ತಿಗಳ ಅಂತಾರಾಷ್ಟ್ರೀಯ ಲಾಬಿಗಾರಿಕೆಯ ಕಥೆ ಕೇಳಿ ಆಶ್ಚರ್ಯವಾಗಿತ್ತು. ಅವರ ಮಹತ್ವಾಕಾಂಕ್ಷೆಯ ಒಂದು ಚಿತ್ರಣ ಸಿಕ್ಕಿತ್ತು.

ಅನಂತಮೂರ್ತಿ ಅವರ ಶಿಷ್ಯವರ್ಗ ವಿಸ್ತಾರವಾಗಿತ್ತು. ಅವರ ಹತ್ತಿರಕ್ಕೆ ಬೇರೆ ಬೇರೆ ಕಾರಣಗಳಿಗಾಗಿ ಹೋದವರು ಅವರ ಅಭಿಮಾನಿ ಬಳಗದವರಾಗುತ್ತಿದ್ದರು. ಅವರ ಪುಸ್ತಕಗಳ ಬಗ್ಗೆ, ಅಭಿಪ್ರಾಯಗಳ ಬಗ್ಗೆ ಬಹಳಷ್ಟು ಮಾತನಾಡುತ್ತಿದ್ದದ್ದು ಈ ವಲಯ. ಡಿ.ಆರ್. ನಾಗರಾಜ, ಅನಂತಮೂರ್ತಿ ಅವರ 'ಭವ' ಕಾದಂಬರಿ ಒಂದು 'ಎಪಿಕ್ ಸ್ವರೂಪ'ದ ಕೃತಿ ಅನ್ನುವ ಭಾರೀ ತೂಕದ ಮಾತು ಬರೆದಾಗ, ನಮಗೆಲ್ಲಾ ಕಸಿವಿಸಿಯಾಗಿತ್ತು. ಒಂದು ನೀಳ್ಗತೆ ಎಪಿಕ್‌ನ ಭಾರ ಹೇಗೆ ಹೊರಬಲ್ಲದೆಂಬ ಬಗ್ಗೆ ಪ್ರಶ್ನೆಗಳೆದ್ದಿತು. ಹೀಗೆ ಅನಂತಮೂರ್ತಿ ಅವರ ಪರಾಕುಬಳಗ ಬಲು ಗಟ್ಟಿಯಾಗಿತ್ತು.

ಅನಂತಮೂರ್ತಿ ಬರೀ ಪ್ರಕಾಶಕರ ಪಾಲಿಗಷ್ಟೇ ಕಮಾಡಿಟಿಯಾಗಿರಲಿಲ್ಲ. ಅವರು ಮಾಧ್ಯಮಗಳಿಗೂ ಬೇಕಾದ ವಿವಾದಗಳನ್ನು ಸೃಷ್ಟಿಸುವ ರೋಚಕತೆಗೆ ವಸ್ತುವಾಗಿದ್ದರು. ಅವರ ಸುತ್ತಲೂ ನಡೆದ

ಅನೇಕ ವಿವಾದಗಳು, ಮಾಧ್ಯಮಗಳು ಸೃಷ್ಟಿಸಿದವು. ಅವರ ಹೇಳಿಕೆಗಳನ್ನು ಸಂದರ್ಭಕ್ಕೆ ಮೀರಿ ಲಂಘಿಸಿ ಅಥವಾ ಸಂಕೋಚಗೊಳಿಸಿ ಅಥವಾ ಅದರ ಆಚೆಗಿಟ್ಟು ನೋಡಲ್ಪಟ್ಟಿತು. ಸಹಜವಾಗಿಯೇ ಲಂಕೇಶ್, ತೇಜಸ್ವಿ, ನಂಜುಂಡಸ್ವಾಮಿ ಮುಂತಾದವರ ನಿರ್ಗಮನದ ನಂತರ ಅನಂತಮೂರ್ತಿ ಕೇಂದ್ರ ಬಿಂದುವಾದರು, ನಮ್ಮ ಬುದ್ಧಿಜೀವಿವಲಯದ ಮುಂಚೂಣಿಗೆ ದೂಡಲ್ಪಟ್ಟರು. ಅದು ಅವರಿಗೆ ಅತ್ಯಂತ ಪ್ರಿಯವಾದ ಪೊಸಿಷನ್ ಕೂಡ ಆಗಿತ್ತು. ಅದು ಅವರಿಗಾಗಿ, ಅವರಿಂದ ಮತ್ತು ಅವರ ಮೂಲಕ ವಿವಾದ ಸೃಷ್ಟಿಸುವವರಿಗೆ ಅನುಕೂಲವಾಯ್ತು. ಅವರ ಕೊನೆಗಾಲದ ಮೋದಿ ಬಗೆಗಿನ ಅವರ ಭಿನ್ನಾಭಿಪ್ರಾಯವಾಗಿರಲಿ, ಅಥವಾ ಕಲ್ಬುರ್ಗಿ ಸೃಷ್ಟಿಸಿದ ದೇವರ ಕಲ್ಲಿನ ಮೇಲೆ ಮೂತ್ರಿಸಿದ ಆತ್ಮಕತೆಯ ಪ್ರಸಂಗವಾಗಲಿ ಅಥವಾ ಅದಕ್ಕೂ ಹಿಂದೆ ಭೈರಪ್ಪನವರನ್ನು ರಾಹುಗ್ರಸ್ತ ಲೇಖಕ ಅಂತ ಕರೆದದ್ದಾಗಲಿ, ಈ ಎಲ್ಲಾ ವಿವಾದಗಳಲ್ಲಿ ಮುಖ್ಯ ಪಾತ್ರ ಮೀಡಿಯಾಗಳದ್ದು. ಹಾಗೆಯೇ ಕೆಲವರ ಕುರುಡು ಬ್ರಾಹ್ಮಣ ದ್ವೇಷದ್ದೂ ಹೌದು. ಬಸವಣ್ಣನವರ ಬಗೆಗೆ ಹೆಚ್ಚು ಕೆಲಸ ಮಾಡದ ಉಳಿದವರಿಗೆ ಬಸವ ಪ್ರಶಸ್ತಿ ಕೊಟ್ಟರೂ ಪರವಾಗಿಲ್ಲ, ಆದರೆ, ಅನಂತಮೂರ್ತಿ ಬ್ರಾಹ್ಮಣ ಅವರಿಗೆ ಇಂತಹ ಪ್ರಶಸ್ತಿ ದೊರಕಬಾರದು ಅನ್ನುವ ಅಭಿಪ್ರಾಯವೂ ಕೆಲವರಿಗೆ ಇದ್ದದ್ದು ನಿಜ. ಕುವೆಂಪು-ಮಾಸ್ತಿ ಕಾಲದ ಬ್ರಾಹ್ಮಣ-ಶೂದ್ರ ಜಗಳಗಳು ಬೇರೆ ಬೇರೆ ಛದ್ಮವೇಷಗಳಲ್ಲಿ ಈಗಲೂ ನಡೆಯುತ್ತಿರುವುದು ನಮ್ಮಲ್ಲಿ ರಕ್ತಗತವಾಗಿರುವ ಜಾತಿರೋಗಕ್ಕೆ ಸಾಕ್ಷಿ.

ಕನ್ನಡದ ಮಟ್ಟಿಗೆ ಇದೊಂದು ದೊಡ್ಡ ಲೇಖಕನೊಬ್ಬನ, ಕನ್ನಡಪರ ವಕ್ತಾರನೊಬ್ಬನ ನಿರ್ಗಮನ. ಎಲ್ಲರೂ ತಂತಮ್ಮ ನೆನಪುಗಳಲ್ಲೇ ಅವರನ್ನು ಚಿರವಾಗಿಸಿಕೊಳ್ಳುವಾಗ ನಾನು ಅವರ ನೆನಪೊಂದರಿಂದ ಈ ಬರಹ ಮುಗಿಸುತ್ತೇನೆ. ಕೆಲವು ತಿಂಗಳ ಹಿಂದೆ - ಬ್ಯಾಂಕಿನಲ್ಲಿದ್ದಾಗ ಅನಂತಮೂರ್ತಿಗಳ ಫೋನ್. 'ನೀನು ಸಂಚಯವನ್ನು ನಿಲ್ಲಿಸಬೇಡ. ಕನ್ನಡಕ್ಕೆ ಇಂಥ ಪತ್ರಿಕೆಗಳು ಈಗ ಇಲ್ಲವೇ ಇಲ್ಲ, ನಮಗೆ ಹಂಚಿಕೊಳ್ಳಲಿಕ್ಕೆ ಸಂಚಯದಂಥ ವೇದಿಕೆ ಅಗತ್ಯ. ನಿನ್ನ ಜೊತೆಗೆ ನಾವಿದ್ದೇವೆ' ಅನ್ನುವ ಮಾತಾಡಿದ್ದರು. ಅದರ ಹಿಂದಿನ ಸಂಚಿಕೆಯಲ್ಲಿ ಅವರನ್ನು ಟೀಕಿಸಿ ಬರೆದಿದ್ದರೂ ನಂತರ ಪತ್ರಿಕೆಗೊಂದು ಚೆಕ್ ಕೂಡ ಕಳುಹಿಸಿದ್ದರು. ಕೆಲವು ವರ್ಷಗಳ ಕೆಳಗೆ ಅವರಿಂದ ಸಂಚಯವನ್ನು ಮೆಚ್ಚಿ ಒಂದು ಸುಂದರ ಪತ್ರ ಬಂದಾಗ ಅದೊಂದು ನೈತಿಕ ಒತ್ತಾಸೆ ಅನ್ನಿಸಿತ್ತು. ಆಗೀಗ ಫೋನು ಮಾಡಿತಮ್ಮ ಅನಿಸಿಕೆಗಳನ್ನು ಹೇಳಿ, ಪತ್ರಿಕೆಯಲ್ಲಿ ಬಂದ ಲೇಖನಗಳನ್ನು ಮೆಚ್ಚಿ ಮಾತನಾಡುತ್ತಿದ್ದರು. ತಮ್ಮ 'ರುಜುವಾತು' ದಿನಗಳನ್ನು ನೆನಪಿಸಿಕೊಳ್ಳುತ್ತಿದ್ದರು.

ಇವೆಲ್ಲವೂ ಸಾವಿನ ಸಮ್ಮುಖದಲ್ಲಿ ಸಲ್ಲಬಲ್ಲ ಮಾತುಗಳು ಅನ್ನುವ ಆತಂಕದಲ್ಲೇ ಅವರಿಗೆ ನಮ್ಮ ನಮಸ್ಕಾರ.

ನಿಮ್ಮ

ಸಂಪಾದಕ

ಈ ಸಂಚಿಕೆಯಲ್ಲಿ...


ಮಾಯಾ ಏಂಜೆಲೋ 4ನೇ ಏಪ್ರಿಲ್ 1928ರಂದು ಅಮೇರಿಕಾ ಸಂಸ್ಥಾನದ ಮಿಸ್ಸೌರಿ ಪ್ರಾಂತ್ಯದ ಸೈಂಟ್ ಲೂಯಿಯಲ್ಲಿ ಜನಿಸಿದರು. ಆಕೆಯ ಮೂಲ ಹೆಸರು ಮಾರ್ಗ್‌ರೇಟ್ ಆಗಿ ಜಾನ್ಸನ್. ಆಕೆಯ ತಾಯಿ ದಾದಿ ವೃತ್ತಿಯಲ್ಲಿದ್ದ ವಿವಿಯನ್ ಜಾನ್ಸನ್. ತಂದೆ ಬೇಲಿಜಾನ್ಸನ್ ನೌಕಾಪಡೆಯ ಸಿಬ್ಬಂದಿ. ಮಾಯಾ ಎಂಜೆಲೋನ ಅಣ್ಣ ಬೇಲಿ ಜೂನಿಯರ್ ತನ್ನ ತಂಗಿಯನ್ನು ಮಾರ್ಗರೇಟ್ ಎಂದು ಉಚ್ಚರಿಸಲಾಗದೆ. mya sister ಎಂದು ಕರೆಯುತ್ತಿದ್ದ. my ಎಂಬುದನ್ನು mya (ಮ್ಯಯ) ಎದು ತಪ್ಪಾಗಿ ಉಚ್ಚರಿಸುತ್ತಿದ್ದ. ಮುಂದೆ ಮಾಯಾ ಸಂಸ್ಕೃತಿಯ ಬಗ್ಗೆ ತಿಳಿಯುವಕೆ ಬಂದ ಮೇಲೇ ಮೈಯಾ ಎಂಬುದು ಮಾಯಾ ಎಂದು ಬದಲಿಸಿದ.

ಮಾಯಾ ಏಂಜೆಲೋ ಅವರ ದನಿ ಅತ್ಯಂತ ಪ್ರಸಿದ್ಧ ಮತ್ತು ಪ್ರಭಾವಶಾಲಿಯಾಗಿತ್ತು. ಮಹಿಳಾ ಪುನರುತ್ಥಾನದ ಜಾಗತಿಕ ಪ್ರತಿನಿಧಿಯೆಂದು ಹೆಸರುವಾಸಿಯಾಗಿದ್ದರು.

ಜನಪ್ರಿಯ ಕವಯಿತ್ರಿಯಾಗಿದ್ದ ಮಾಯಾ ಏಂಜೆಲೋ ಶಿಕ್ಷಣ ತಜ್ಞೆ, ನಟಿ, ನೃತ್ಯಪಟು ನಿರ್ಮಾತೆ, ಇತಿಹಾಸಕಾರಳಾಗಿ, ಚಲನಚಿತ್ರ ನಿರ್ಮಾಪಕಿಯಾಗಿ, ನಿರ್ದೇಶಕಿಯಾಗಿ ಹಲವು ಹತ್ತು ಕ್ಷೇತ್ರಗಳಲ್ಲಿ ಸೈ ಎನಿಸಿಕೊಂಡಿದ್ದಾರೆ.

ತನ್ನ ಕಾಲದ ಇಬ್ಬರು ಮಹಾನ್ ಮಾನವ ಹಕ್ಕುಗಳ ಹೋರಾಟಗಾರರಾದ ಡಾ. ಮಾರ್ಟಿನ್ ಲೂಥರ್‌ಕಿಂಗ್‌ಜೂ ಮತ್ತು ಮಾಲ್ಕಂ ಎಕ್ಸ್‌ರವರ ಸಹವರ್ತಿಯಾಗಿದ್ದ ಹೆಗ್ಗಳಿಕೆ ಅವರದ್ದು.

ಅಮೇರಿಕಾದ ನಾಗರೀಕ ಹಕ್ಕುಗಳ ಹೋರಾಟ ಮತ್ತು ಬಿಳಿಯರ ವಿರುದ್ಧ ಸೆಣೆಸಿದ ಕರಿಯ ವೀರರ ಕೊನೆಯ ಕೊಂಡಿಯೊಂದು ಕಳಚಿಬಿತ್ತು. ಮಾಯಾ ಏಂಜೆಲೋ 28-05-2014ರಂದು ನಿಧನರಾದರು.



ಮಾಯ ಏಂಜೆಲೊ ಕವಿತೆಗಳು

ಕನ್ನಡಕ್ಕೆ: ಎಂ.ಎಸ್. ರುದ್ರೇಶ್ವರಸ್ವಾಮಿ

ಗಂಡಸರು

ನಾನು ಚಿಕ್ಕವಳಿದ್ದಾಗ ಪರದೆಗಳ ಹಿಂದಿನಿಂದ
ರಸ್ತೆಯಲ್ಲಿ ಹೋಗಿ ಬರುವ ಗಂಡಸರನ್ನು ನೋಡುತ್ತಿದ್ದೆ,
ಮಧ್ಯ ವಯಸ್ಕರು, ಮುದುಕರು
ಸಾಸಿವೆಯ ಹಾಗೆ ಚುರುಕಾದ ತರುಣರು.
ನೋಡು ಅವರನ್ನು. ಯಾವಾಗಲೂ ಗಂಡಸರು
ಎಲ್ಲಿಗೋ ಹೋಗುತ್ತಿರುತ್ತಾರೆ.
ತಿಳಿದಿದೆ ಅವರಿಗೆ, ಅಲ್ಲಿ ನಾನು
ಇರುವೆನೆಂದು. ಹದಿನೈದರ-
ಪ್ರಾಯ, ಅವರಿಗಾಗಿ ಜೀವ ಬಿಡುತ್ತಿದ್ದೇನೆಂದು.
ನನ್ನ ಕಿಟಕಿಯ ಅಡಿಯಲ್ಲಿ ನಿಲ್ಲುತ್ತಾರೆ
ಅವರ ಎತ್ತರದ ತೋಳುಗಳು



ತರುಣಿಯ ಮೊಲೆಗಳಂತಿವೆ
ಜಾಕೀಟಿನ ಬಾಲ ಜೋರಾಗಿ ಅಪ್ಪಳಿಸುತ್ತಿದೆ
ಹಿಂದೆ ಇರುವವರನ್ನು,
ಗಂಡಸರು.

ಒಂದು ದಿನ ನಿನ್ನನ್ನು ಅವರ ಅಂಗೈಯಲ್ಲಿ
ಮೃದುವಾಗಿ ಹಿಡಿದುಕೊಳ್ಳುತ್ತಾರೆ. ಈ ಜಗದ
ಕಟ್ಟಕಡೆಯ ಮೂಲಸ್ಥಿತಿಯ ಮೊಟ್ಟೆಯೋ ನೀನು, ಎನ್ನುವಂತೆ.
ಆಮೇಲೆ ಹಿಡಿತ ಬಿಗಿಗೊಳಿಸುತ್ತಾರೆ. ಸ್ವಲ್ಪವೇ,
ಮೊದಲ ಹಿಸುಕುವಿಕೆಯಲ್ಲಿ ಹಿತಾನುಭವ
ಅವಸರದ ಅಪ್ಪುಗೆ. ಪ್ರತಿರೋಧವಿರದ ನಿನ್ನ ಮೆತ್ತೆಯೊಳಗೆ,
ಸ್ವಲ್ಪವೇ ಜಾಸ್ತಿ. ನೋವು ಶುರುವಾಗುತ್ತದೆ. ತಟ್ಟನೆ
ಬಿರಿದ ಮುಗುಳ್ನಗೆ ಜಾರುತ್ತದೆ ಭಯದ ಸುತ್ತ.
ಉಸಿರು ಕಟ್ಟಿದಂತಾಗಿ,
ನಿನ್ನ ಮನಸ್ಸು ಬಿರುಡೆ ತೆಗೆದ ಬಾಟಲಿನ
ಸದ್ದಿನಂತೆ, ಕೋಪದಿಂದ ಸಿಡಿಯುತ್ತದೆ
ತುಸು ಹೊತ್ತು ಬೆಂಕಿಕಡ್ಡಿಯ ತಲೆ ಹೊತ್ತಿ
ಉರಿವ ಹಾಗೆ. ನುಚ್ಚುನೂರು. ಅದು ನಿನ್ನ ರಸ,
ಅವರ ಕಾಲುಗಳುದ್ದಕ್ಕೂ ಹರಿಯುತ್ತದೆ
ಅವರ ಬೂಟುಗಳನ್ನು ಕರೆ ಮಾಡುತ್ತ.
ಮತ್ತೆ ಭೂಮಿ ಬೆದೆಗೆ ಬಂದು ಸಿದ್ಧವಾದಾಗ
ರುಚಿ ಮತ್ತೆ ನಾಲಗೆಗೆ ಮರಳಿ ಬರಲು
ಪ್ರಯತ್ನಿಸುತ್ತದೆ. ನಿನ್ನ ದೇಹ ಧಡಾರೆಂದು ಮುಚ್ಚುತ್ತದೆ,
ಎಂದೆಂದಿಗೂ. ಯಾವ ಚಾವಿಗಳೂ ಇಲ್ಲ.

ಇದೆಲ್ಲ ಆದನಂತರ ಸೆಳೆಯುತ್ತದೆ ಕಿಟಕಿ
ತನ್ನತ್ತ ನಿನ್ನ ಮನಸನ್ನು.
ಅಲ್ಲಿ, ತುಸು ಹಿಂದೆ, ತೂಗಾಡುವ ಪರದೆಗಳ ಆಚೆ,
ಓಡಾಡುತ್ತಿದ್ದಾರೆ ಗಂಡಸರು
ಏನೋ ಸ್ವಲ್ಪ ಗೊತ್ತಿದ್ದು, ಯಾವುದೋ ಜಾಗಕ್ಕೆ
ಹೋಗುತ್ತ. ಆದರೆ ಈ ಬಾರಿ, ಪ್ರಾಯಶಃ
ನಾನು ಸುಮ್ಮನೆ ನಿಂತು, ಗಮನಿಸುತ್ತೇನೆ.

ಹೆಣ್ಣೊಂದು ವಿಸ್ಮಯ



ಚಂದೊಳ್ಳಿ ಹೆಣ್ಣುಗಳಿಗೆ ಅಚ್ಚರಿ, ನನ್ನ ಗುಟ್ಟು
ಇರುವುದಾದರೂ ಎಲ್ಲಿ ಎಂದು.
ಮೋಹಕವಾಗಿಲ್ಲ ನಾನು
ಫ್ಯಾಷನ್ ಮಾಡಲ್‌ಗಳ ಹಾಗೆ ಇಲ್ಲವೇ ಇಲ್ಲ ನನ್ನ ಮೈಕಟ್ಟು
ಅವರಿಗೆ ಹೇಳಿದರೆ ಹಾಗೆ, ಸುಳ್ಳಾಡುತ್ತೇನೆಂದು
ತಿಳಿಯುತ್ತಾರೆ. ನಾನು ಹೇಳುತ್ತೇನೆ,
ನನ್ನ ಕೈಯಳತೆಯೊಳಗಿದೆ ಅದು
ನನ್ನ ಕಟಿಯ ಸುತ್ತಳತೆ, ಬೀಸುಗಾಲ ಹೆಜ್ಜೆ
ತುಟಿಯ ಸುರುಳಿ. ನಾನು
ಅದ್ಭುತವಾದ ಹೆಣ್ಣು
ಅಪೂರ್ವ ಮಹಿಳೆ,
ನಾನು.

ಒಂದು ಕೋಣೆಯ ಒಳಗೆ ನಡೆಯುತ್ತೇನೆ
ಸುಮ್ಮನೆ ತಣ್ಣಗೆ, ನೀವಿರುವ ಹಾಗೆ,
ಒಬ್ಬ ಗಂಡಸಿನ ಬಳಿಗೆ.
ಜೊತೆಗಾರರು ಎದ್ದುನಿಲ್ಲುತ್ತಾರೆ
ಇಲ್ಲವೆ ಮಂಡಿಯೂರಿ ಕೆಳಗೆ ಬಾಗುತ್ತಾರೆ
ಹಿಂಡಾಗಿ ನನ್ನ ಸುತ್ತ
ತಿರುಗುತ್ತಾರೆ, ಒಂದು ಜೇನುಹುಟ್ಟು.
ನಾನು ಹೇಳುತ್ತೇನೆ:
ಅದು ನನ್ನ ಕಣ್ಣೊಳಗಿನ ಬೆಂಕಿ,
ನನ್ನ ಹಲ್ಲುಗಳ ಬಿಳುಪು
ನಡುವಿನ ಬಳುಕು, ಉಯ್ಯಲಾಟ
ನನ್ನ ಹೆಜ್ಜೆಗಳಲ್ಲಿನ ಖುಷಿ. ನಾನು
ಅದ್ಭುತವಾದ ಹೆಣ್ಣು
ಅಪೂರ್ವ ಮಹಿಳೆ,
ನಾನು.

ಗಂಡಸರು ತಾವೇ ಬೆರಗಾಗಿದ್ದಾರೆ, ನನ್ನಲ್ಲಿ
ಅಂಥದ್ದು ಏನಿದೆ ಎಂದು.
ಶತಾಯಗತಾಯ ಪ್ರಯತ್ನಿಸುತ್ತಾರೆ
ಮುಟ್ಟಲಾಗುವುದಿಲ್ಲ ಅವರಿಗೆ
ನನ್ನೊಳಗಿನ ನಿಗೂಢತೆಯನ್ನು.
ತೋರುವುದಕ್ಕೆ ನಾನು
ಪ್ರಯತ್ನಿಸಿದಾಗಲೂ ಕಾಣಲಿಲ್ಲವೆನ್ನುತ್ತಾರೆ
ಹೇಳುತ್ತೇನೆ ನಾನು,
ಇದೆ ಅದು ನನ್ನ ಬೆನ್ನ ಕಮಾನಿನಲ್ಲಿ,
ಮುಗುಳುನಗೆಯ ನನ್ನ ಸೂರ್ಯನಲ್ಲಿ,
ಮೊಲೆಗಳ ಸವಾರಿಯಲ್ಲಿ,
ವೈಯ್ಯಾರದ ರೀತಿ ರಿವಾಜಿನಲ್ಲಿ, ನಾನು
ಅದ್ಭುತವಾದ ಹೆಣ್ಣು
ಅಪೂರ್ವ ಮಹಿಳೆ,
ನಾನು.

ಈಗ ತಿಳಿದಿರಬೇಕು ನಿಮಗೆ
ನನ್ನ ತಲೆ ಬಾಗುವುದಿಲ್ಲವೇಕೆಂದು.
ಕೂಗಾಡುವುದಿಲ್ಲ ನಾನು, ಸುಮ್ಮನೆ
ಹಾಯುವುದೂ ಇಲ್ಲ. ಜೋರಾಗಿ ಮಾತಾಡುವ
ಪ್ರಮೇಯವೇ ಬರುವುದಿಲ್ಲ,
ಸುಮ್ಮನೆ ನಾನು ಹಾಗೇ ನಡೆದುಹೋಗುವುದನ್ನು
ಕಂಡು ನಿಮಗೆ ಹೆಮ್ಮೆಯಾಗಬೇಕು.
ಹೇಳುತ್ತೇನೆ ನಾನು,
ಅದು ನನ್ನ ಹಿಮ್ಮಡಿಯ ಕಿಣಕಿಣ
ಶಬ್ದದಲ್ಲಿದೆ. ಗುಂಗುರುಗುಂಗುರು
ಹೆರಳಿನಲ್ಲಿದೆ. ನನ್ನ ಮುಂಗೈಯಲ್ಲಿದೆ,
ನನ್ನ ಅಗತ್ಯ ಆರೈಕೆಯಲ್ಲಿದೆ.
ಏಕೆಂದರೆ, ನಾನು
ಅದ್ಭುತವಾದ ಹೆಣ್ಣು
ಅಪೂರ್ವ ಮಹಿಳೆ,
ನಾನು.



ನಿರಾಕರಣೆ

ಪ್ರಿಯನೇ,
ಯಾವ ಜನ್ಮದಲ್ಲಿ, ಯಾವ
ಲೋಕದಲ್ಲಿ
ನಿನ್ನ ತುಟಿಗಳು ನಿನ್ನ ಕೈಗಳು
ನಿನ್ನ ಸಾಹಸಿ ನಗೆ
ಅಗೌರವದಿಂದ ಕೂಡಿವೆ ಎಂದು
ನಾನು ಕಂಡಿದ್ದು.
ಸಿಹಿಯಾದ ಆ ಅತಿರೇಕಗಳನ್ನೇ
ನಾನು ಆರಾಧಿಸುತ್ತಿರುವುದು.
ಬೇರೆ ಯಾವುದೋ ಲೋಕಗಳಲ್ಲಿ
ಮುಂದೆ ಎಂದೋ ಒಂದು
ಗೊತ್ತಿಲ್ಲದ ದಿನ
ಮತ್ತೆ ನಾವು ಕೂಡುತ್ತೇವೆಂದು.
ಏನಿದೆ ಖಾತ್ರಿ.
ನನ್ನ ದೇಹದ ತರಾತುರಿಯನ್ನು
ಧಿಕ್ಕರಿಸುತ್ತೇನೆ.
ಮತ್ತೊಂದು ಮಧುರ ಸಂಘರ್ಷದ
ಭರವಸೆ ನೀಡದೆ
ನಾನು ಸಾಯುವುದಕ್ಕೆ
ಅನುಗ್ರಹಿಸುವುದಿಲ್ಲ.

ಒಂಟಿ...



ಎಲ್ಲಿ ನೀರಿಗೆ ನೀರಡಿಕೆಯಿಲ್ಲವೋ
ಎಲ್ಲಿ ರೊಟ್ಟಿಯ ತುಂಡು ಗಟ್ಟಿಯಾಗುವುದಿಲ್ಲವೋ
ಅಲ್ಲಿ ನನ್ನ ಆತ್ಮಕ್ಕೊಂದು ಮನೆಯನ್ನು
ಹುಡುಕುವುದು ಹೇಗೆಂದು
ಕಳೆದ ಇರುಳಿಡೀ ಯೋಚಿಸುತ್ತಲೇ ಮಲಗಿರುವಾಗ
ಒಂದು ಯೋಚನೆ ತಲೆಗೆ ಬಂತು
ಇದನ್ನು ನಾನು ತಪ್ಪೆಂದು ಭಾವಿಸುವುದಿಲ್ಲ
ಯಾರೂ, ಯಾರೊಬ್ಬರೂ
ಇಲ್ಲೆ ಅದನ್ನು ನಿರ್ಮಿಸಲಾರರು.

ಬೇರೆ ಯಾರೂ, ಯಾರೊಬ್ಬರ ಸಹಾಯವಿಲ್ಲದೆ,
ಯಾರೊಬ್ಬರೂ, ಆದರೆ ಯಾರೊಬ್ಬರೂ
ಅದನ್ನು ಇಲ್ಲೆ ನಿರ್ಮಿಸಲಾರರು.

ಇದ್ದಾರೆ ಕೆಲವರು ಲಕ್ಷಾಧಿಪತಿಗಳು
ಖರ್ಚಾಗದಷ್ಟು ಹಣವಿದ್ದರೂ, ಉಪಯೋಗಿಸುವಂತಿಲ್ಲ
ಅವರ ಹೆಂಡಿರು ಸುತ್ತುತ್ತಾರೆ
ತೂಗುತ್ತಿರುವ ಸಾವಿನ ಬಗ್ಗೆ ಗೋಳಾಟದ ಎಚ್ಚರಿಕೆ
ನೀಡುವ ಹೆಣ್ಣು ದೆವ್ವದ ಹಾಗೆ
ಅವರ ಮಕ್ಕಳು ಹಾಡುತ್ತಾರೆ ಮನೋವ್ಯಥೆಯ ಹಾಡು
ಇದ್ದಾರೆ ಅವರಿಗೆ ದುಬಾರಿ ವೈದ್ಯರು
ಕಲ್ಲು ಹೃದಯಗಳನ್ನು ವಾಸಿ ಮಾಡುವುದಕ್ಕೆ.

ಬೇರೆ ಯಾರೂ, ಯಾರೊಬ್ಬರ ಸಹಾಯವಿಲ್ಲದೆ,
ಯಾರೊಬ್ಬರೂ, ಆದರೆ ಯಾರೊಬ್ಬರೂ
ಅದನ್ನು ಇಲ್ಲಿ ನಿರ್ಮಿಸಲಾರರು.

ಈಗ ಕಿವಿಗೊಟ್ಟು ಕೇಳಿಸಿಕೊಂಡರೆ ನೀನು
ಹೇಳುತ್ತೇನೆ ನಿನಗೆ, ನನಗೇನು ತಿಳಿದಿದೆಯೋ ಅದನ್ನು.
ಕಾರ್ಮುಗಿಲು ಸೇರುತ್ತಿವೆ ಗಾಳಿ ಬೊಬ್ಬಿಡುತ್ತಿದೆ
ಮನುಕುಲ ಸಂಕಟಪಡುತ್ತಿದೆ ನರಳಾಟ ಕೇಳಿಸುತ್ತಿದೆ,
ಏಕೆಂದರೆ ಯಾರೂ, ಯಾರೊಬ್ಬರೂ
ಅದನ್ನು ಇಲ್ಲಿ ನಿರ್ಮಿಸಲಾರರು.

ಬೇರೆ ಯಾರೂ, ಯಾರೊಬ್ಬರ ಸಹಾಯವಿಲ್ಲದೆ,
ಯಾರೊಬ್ಬರೂ, ಆದರೆ ಯಾರೊಬ್ಬರೂ
ಆತ್ಮಕ್ಕೊಂದು ಮನೆಯನ್ನು ಇಲ್ಲಿ ನಿರ್ಮಿಸಲಾರರು.



ಒಂದು ಪ್ರತಿಷ್ಠೆ

ನಿನ್ನ ಕೈನೀಡು

ನನಗೆ ಒಂದು ಅವಕಾಶ
ಮಾಡಿಕೊಡು,
ಕವಿತೆಯ ಈ ಮೋಹ ಮೀರಿ
ಮುನ್ನಡೆಯುವುದಕ್ಕೆ
ನಿನ್ನ ಹಿಂದೆ ಬರುವುದಕ್ಕೆ.

ಬೇರೆಯವರಿಗೆ ಇರಲಿ
ಪ್ರೀತಿಯನ್ನು ಕಳೆದುಕೊಳ್ಳುವ ಪ್ರೀತಿ
ಮತ್ತು ಶಬ್ದಗಳನ್ನು
ಮುಟ್ಟುವ ಖಾಸಗಿತನ.

ನನಗಾಗಿ
ನಿನ್ನ ಕೈನೀಡು.

೮೮, 'ಪಲ್ಲವಿ' ೨ನೇ ಮುಖ್ಯರಸ್ತೆ, ವಸಂತವಲ್ಲಭನಗರ, ಸುಬ್ರಮಣ್ಯಪುರ ಅಂಚೆ
ಬೆಂಗಳೂರು - ೫೬೦ ೦೬೧. ಸಂಚಾರಿ: ೮೮೬೧೨೫೭೯೩೫
ಇ-ಅಂಚೆ: swamy_dop@yahoo.co.in

ಎರ್ನೆಸ್ಟ್ ಹೆಮಿಂಗ್ವೆ ಕಥೆ



ಎರ್ನೆಸ್ಟ್ ಹೆಮಿಂಗ್ವೆ (೧೮೯೯-೧೯೬೧) ಅಮೆರಿಕಾದ ಕಾದಂಬರಿಕಾರ, ಸಣ್ಣಕಥೆಗಾರ ಮತ್ತು ಪತ್ರಕರ್ತ. ಅವರಿಗೆ ೧೯೫೪ರಲ್ಲಿ ಸಾಹಿತ್ಯಕ್ಕಾಗಿ ನೋಬೆಲ್ ಪ್ರಶಸ್ತಿ ದೊರಕಿತು. ಈ ಕಥೆ ಮೊದಲು ಪ್ರಕಟವಾಗಿದ್ದು ೧೯೩೮ರಲ್ಲಿ. ಈ ಕಥಾವಸ್ತುವಿನ ಸುತ್ತಲಿನ ಪರಿಸರ- ಗ್ರಾಮಾಂತರ ಪ್ರದೇಶ. ಅದು ಸ್ಪೇನ್ ಸಿವಿಲ್ ವಾರ್ ನಡೆಯುವ ಸಂದರ್ಭ. ಕಥೆಯಲ್ಲಿ ಒಂದು ಭರವಸೆಯ ಸಂಕೇತವಿದೆ: ಅದು ಆರಂಭದಲ್ಲಿ ನಿರೂಪಕ ಮುದುಕನ ಜೊತೆ ನಡೆಸುವ ಸಂಭಾಷಣೆಯಲ್ಲಿ, ಮುದುಕ ನೋಡಿಕೊಳ್ಳುತ್ತಿದ್ದ ಪಕ್ಷಿಗಳನ್ನು 'ಪಾರಿವಾಳಗಳು' ಎಂದು ಉಲ್ಲೇಖಿಸಿರುವನಾದರೂ. ಕಥೆಯ ಕೊನೆಯಲ್ಲಿ ಅವು ಮುಗ್ಧ ಶಾಂತಿದೂತರಾಗುವುದು, ಶಾಂತಿಯ ಸಂಕೇತವಾಗುವುದು, ಮನೋಜ್ಞವಾಗಿ ಮೂಡಿಬಂದಿವೆ. ಹಕ್ಕಿಗಳು ಹಾರಿಹೋಗುವುದು ಬಿಡುಗಡೆಯ ಸಂಕೇತ.

ಸೇತುವೆ ಬಳಿ ವಯಸ್ಸಾದ ಮುದುಕ

ಕನ್ನಡಕ್ಕೆ: ಎಂ.ಎಸ್. ರುದ್ರೇಶ್ವರಸ್ವಾಮಿ

ಸ್ಟೀಲು ಕಟ್ಟು ಇರುವ ಕನ್ನಡಕ, ಧೂಳು ಹಿಡಿದ ಬಟ್ಟೆ ತೊಟ್ಟಿದ್ದ ಆ ಮುದುಕ ರಸ್ತೆ ಬದಿಯಲ್ಲಿ ಕುಳಿತುಕೊಂಡಿದ್ದ. ನದಿಗೆ ಅಡ್ಡಲಾಗಿ ತೇಲು ಸೇತುವೆ ಇತ್ತು. ಅದರ ಮೇಲೆ, ಗಾಡಿಗಳು, ಟ್ರಕ್ಕುಗಳು ಮತ್ತು ಗಂಡಸರು, ಹೆಂಗಸರು , ಮಕ್ಕಳು ನದಿ ದಾಟುತ್ತಿದ್ದರು. ಸೇತುವೆ ದಾಟಿದ ಹೇಸರಗತ್ತೆ ಹೂಡಿದ ಗಾಡಿಗಳು ಕಡಿದಾದ ದಂಡೆಯನ್ನು ಓಲಾಡುತ್ತ ಹತ್ತುತ್ತಿದ್ದವು. ಸೈನಿಕರು ಗಾಡಿಗಳ ಚಕ್ರದ ಕೈಗಳಿಗೆ ಕೈಹಾಕಿ ತಳ್ಳುತ್ತ ಮುಂದೆ ಸಾಗಲು ನೆರವಾಗುತ್ತಿದ್ದರು. ಟ್ರಕ್ಕುಗಳು ಮಣ್ಣಿನ ಹುಡಿ ಎಬ್ಬಿಸುತ್ತ ದೂರಕ್ಕೆ ಹೋಗುತ್ತಿದ್ದರೆ, ಮೊಣಕಾಲು ಮಟ್ಟಕ್ಕೆ ಏಳುತ್ತಿದ್ದ ಧೂಳು ರೈತರನ್ನು ಮುಚ್ಚಿ-ಮರೆಮಾಡಿತ್ತು. ಆದರೆ, ಆ ಮುದುಕ ಸುಮ್ಮನೆ ಅಲ್ಲಿಯೇ ಕುಳಿತಿದ್ದ. ಅವನಿಗೆ ಮುಂದೆ ಒಂದು ಹೆಜ್ಜೆ ಕೂಡ ಇಡಲಾಗದಷ್ಟು ದಣಿವಾಗಿತ್ತು.

ಸೇತುವೆಯನ್ನು ದಾಟಿ, ಸೇತುಶಿರದಾಚೆ ನಿಗಾವಹಿಸಿತ್ತ ಶತ್ರುಗಳು ಎಲ್ಲಿಯವರೆಗೆ ಮುಂದೆ ಬಂದಿದ್ದಾರೆ ಎನ್ನುವುದನ್ನು ಪರಿಶೋಧಿಸುವ ಕೆಲಸ ನನ್ನದಾಗಿತ್ತು. ಇದನ್ನು ಮಾಡಿಮುಗಿಸಿ ಮತ್ತೆ ನಾನು ಹಿಂತಿರುಗಿ ಸೇತುವೆಯ ಮೇಲೆ ಬಂದೆ. ಈಗ ಅಲ್ಲಿ ಹೆಚ್ಚಿನ ಗಾಡಿ

ಗಳಿರಲಿಲ್ಲ, ಕಾಲ್ನಡಿಗೆಯಲ್ಲಿ ಹೋಗುತ್ತಿದ್ದ ಕೆಲವೇ ಜನ ಮಾತ್ರ ಅಲ್ಲಿದ್ದರು. ಆದರೆ ಆ ಮುದುಕ ಮಾತ್ರ ಇನ್ನೂ ಅಲ್ಲಿಯೇ ಇದ್ದ.

'ನೀನು, ಎಲ್ಲಿಂದ ಬಂದೆ?' ನಾನು ಕೇಳಿದೆ.

'ಸ್ಯಾನ್ ಕರ್ಲೋಸ್' ಎಂದು ಅವನು ಹೇಳಿ, ಮುಗುಳ್ನಕ್ಕ.

ಅದು ಅವನು ಹುಟ್ಟಿದ ನಗರವಾದ್ದರಿಂದ, ಅದರ ಹೆಸರು ಹೇಳಲು ಸಂತೋಷಪಟ್ಟ ಮತ್ತು ಮುಗುಳ್ನಕ್ಕ.

'ನಾನು ಪ್ರಾಣಿಗಳನ್ನು ಸಾಕಿದ್ದೆ,' ಅವನು ವಿವರಿಸಿದ.

'ಓಹ್,' ನಾನು ಹೇಳಿದೆ, ಸರಿಯಾಗಿ ಅರ್ಥವಾಗದಿದ್ದರೂ.

'ಹೌದು,' ಅವನು ಹೇಳಿದ, 'ನಿಮಗೆ ಗೊತ್ತೋ, ನಾನಲ್ಲಿ ಪ್ರಾಣಿಗಳನ್ನು ಸಾಕಿದ್ದೆ ಅವುಗಳನ್ನು ನೋಡಿಕೊಳ್ಳುತ್ತಿದ್ದೆ. ಸ್ಯಾನ್ ಕರ್ಲೋಸ್ ಬಿಟ್ಟು ಬಂದವರಲ್ಲಿ ನಾನೇ ಕಡೆಯವನು...'

ಅವನು ಕುರುಬನ ಹಾಗೆ ಇಲ್ಲವೆ ದನಗಾಹಿಯ ಹಾಗೆ ಕಾಣುತ್ತಿರಲಿಲ್ಲ. ಅವನ ಕಪ್ಪಾದ ಕೊಳಕು ಧೂಳು ಹಿಡಿದ ಬಟ್ಟೆಗಳನ್ನು, ಧೂಳಿನಿಂದಾಗಿ ಬೂದು ಬಣ್ಣಕ್ಕೆ ತಿರುಗಿದ್ದ ಅವನ ಮುಖವನ್ನು, ಸ್ಟೀಲಿನ ಕಟ್ಟಿರುವ ಅವನ ಕನ್ನಡಕವನ್ನು ಗಮನಿಸುತ್ತ, ನಾನು ಕೇಳಿದೆ, 'ಯಾವ ಪ್ರಾಣಿಗಳು ಅವು?'

'ಬೇರೆ ಬೇರೆ ಜಾತಿಗೆ ಸೇರಿದವುಗಳು,' ತಲೆಯಲ್ಲಾಡಿಸುತ್ತ ಅವನು ಹೇಳಿದ. 'ಅವುಗಳನ್ನು ನಾನು ಅಲ್ಲಿಯೇ ಬಿಟ್ಟು ಬರಬೇಕಾಯಿತು.'

■

ನಾನು ಸೇತುವೆಯತ್ತ ಗಮನಿಸುತ್ತಿದ್ದೆ; ಎಬ್ರೋ ನದಿಯ ಮುಖಜ ಭೂಮಿ ಆಫ್ರಿಕವನ್ನು ಹೋಲುವ ದೇಶದಂತೆ ಕಾಣುತ್ತಿತ್ತು. ಶತ್ರುಗಳು ಕಣ್ಣಿಗೆ ಬೀಳಲೆಂದು, ಎದುರುಬದುರಾಗುವ ನಿಗೂಢ ಘಟನೆಗೆ ಮುನ್ಸೂಚನೆಯಾಗಬಲ್ಲ ಮೊದಲ ಗಲಾಟೆ ಕಿವಿಗೆ ಕೇಳಲೆಂದು, ಮೈಯೆಲ್ಲವನ್ನು ಕಣ್ಣುಕಿವಿಯಾಗಿಸಿಕೊಂಡು ಗಮನಿಸುತ್ತಿದ್ದೆ. ಹೀಗೆ ಇದೆಲ್ಲಾ ಇನ್ನೂ ಎಷ್ಟು ದಿನ, ಎಂದೆನಿಸಿ, ನನಗೆ ದಿಗಿಲಾಯಿತು. ಆ ಮುದುಕ ಇನ್ನೂ ಅಲ್ಲಿಯೇ ಇದ್ದ.

'ಯಾವ ಪ್ರಾಣಿಗಳು ಅವು?' ನಾನು ಕೇಳಿದೆ.

'ಎಲ್ಲ ಸೇರಿ ಮೂರು ಜಾತಿ,' ಅವನು ವಿವರಿಸಿದ. 'ಮೇಕೆ –ಎರಡು, ಬೆಕ್ಕು, ಒಂದು ಮತ್ತು ನಾಲ್ಕು ಜೊತೆ ಪಾರಿವಾಳಗಳು.'

'ನೀನು ಅವೆಲ್ಲವನ್ನು ಅಲ್ಲೇ ಬಿಟ್ಟುಬಂದೆಯಾ...? ನಾನು ಕೇಳಿದೆ.

'ಹೌದು, ಫಿರಂಗಿ ದಳದ ಕಾರಣವಾಗಿ. ಕ್ಯಾಪ್ಟನ್ ಹೇಳಿದ, ಫಿರಂಗಿ ದಾಳಿಯಾಗುತ್ತೆ, ಹೊರಟುಹೋಗಿ ಅಂತ.'

'ನಿನಗೆ ಕುಟುಂಬ ಗಿಟುಂಬ ಇಲ್ಲವೋ?' ಸೇತುವೆಯ ಆ ಬದಿಯ ತುದಿಯನ್ನು

ಗಮನಿಸುತ್ತ, ನಾನು ಕೇಳಿದೆ. ಅಲ್ಲಿ ಕೆಲವು ಗಾಡಿಗಳು ಅವಸರದಿಂದ ದಂಡೆಯ ಇಳಿಜಾರಿನಲ್ಲಿ ಇಳಿಯುತ್ತಿದ್ದವು.

'ಇಲ್ಲ,' ಅವನು ಹೇಳಿದ, 'ಬರಿ ಪ್ರಾಣಿಗಳು ಅಂತ ನಾನು ಹೇಳಿದ್ದು. ಬೆಕ್ಕು, ಅದೆಂಗೋ ಬದುಕಿಕೊಳ್ಳುತ್ತೆ, ತನ್ನನ್ನು ತಾನು ನೋಡಿಕೊಳ್ಳುತ್ತೆ, ಆದರೆ ಇನ್ನುಳಿದವುಗಳ ಗತಿ ಏನಾಗುತ್ತೋ ಗೊತ್ತಿಲ್ಲ.'

'ಏನು ನಿನ್ನದು ರಾಜಕೀಯ?' ನಾನು ಕೇಳಿದೆ.

'ನನಗೆ ಯಾವುದೇ ರಾಜಕೀಯ ಇಲ್ಲ,' ಅವನು ಹೇಳಿದ 'ನನಗೆ ಎಪ್ಪತ್ತಾರು ವರ್ಷ. ಈಗಾಗಲೆ ಹನ್ನೆರಡು ಕಿಲೊಮೀಟರ್ ನಡೆದು ಬಂದಿದ್ದೇನೆ. ನನಗನಿಸುತ್ತೆ, ಇನ್ನು ಮುಂದೆ ನಡೆಯೋದಕ್ಕೆ ನನ್ನ ಕೈಲಾಗಲ್ಲ ಅಂತ.'

■

'ಪ್ರಯಾಣ ನಿಲ್ಲಿಸಿ, ಇಲ್ಲೇ ನಿಲ್ಲುವುದಕ್ಕೆ ಇದು ಒಳ್ಳೆಯ ಜಾಗವೇನೂ ಅಲ್ಲ,' ನಾನು ಹೇಳಿದೆ. 'ಹೊರಡುವುದಾದರೆ, ಟ್ರಕ್ಕುಗಳಿವೆ. ಟೋರ್ಟೋಸಕ್ಕೆ ಅದು ಕವಲು ದಾರಿ.'

'ನಾನು ಸ್ವಲ್ಪ ಹೊತ್ತು ಇಲ್ಲೇ ಇರ್ತೀನೆ,' ಅವನು ಹೇಳಿದ. 'ಆಮೇಲೆ ನಾನು ಹೋಗ್ತೀನಿ. ಟ್ರಕ್ಕುಗಳು ಎಲ್ಲಿಗೆ ಹೋಗ್ತವೆ?'

'ಬಾರ್ಸೆಲೋನ ಕಡೆಗೆ,' ನಾನವನಿಗೆ ಹೇಳಿದೆ.

'ಆಕಡೆ ನನಗೆ ಗುರುತಿನವರು ಯಾರೂ ಇಲ್ಲ,' ಅವನು ಹೇಳಿದ. 'ಆದರೆ ನಿಮಗೆ ಧನ್ಯವಾದಗಳು. ನಿಮಗೆ ತುಂಬಾ ಧನ್ಯವಾದಗಳು.'

ಮುದುಕ ನನ್ನತ್ತ ನೋಡಿದ. ಖಾಲಿತನ ತುಂಬಿತ್ತು ಅವನ ಕಣ್ಣಲ್ಲಿ, ತುಂಬಾ ದಣಿವಿತ್ತು ಅವನ ಮುಖದಲ್ಲಿ. ಕೆಲವು ಕ್ಷಣದ ನಂತರ, ತನ್ನ ಮನಸಿನ ದುಗುಡವನ್ನು ಯಾರ ಜೊತೆಗಾದರೂ ಹಂಚಿಕೊಳ್ಳುವುದಕ್ಕಾಗಿ, ಅವನು ಹೇಳಿದ, 'ಬೆಕ್ಕಿಗೆ ಏನೂ ಆಗುವುದಿಲ್ಲ, ನನಗೆ ಖಾತ್ರಿಯಿದೆ. ಆದರಿಂದಾಗಿ ಮನಸ್ಸಿಗೆ ಸಂಕಟ ಇಲ್ಲ. ಆದರೆ ಉಳಿದವುಗಳು... ನಿಮಗೇನು ಅನಿಸುತ್ತೆ, ಅವುಗಳ ಬಗ್ಗೆ?'

'ಅವುಗಳಿಗೆ ಬಹುಶಃ ಏನೂ ಆಗದಿರಬಹುದು.'

'ಹಾಗಂತೀರಾ?'

'ಯಾಕಾಗಬಾರದು? ಇನ್ನೊಂದು ದಂಡೆಯನ್ನು ಗಮನಿಸುತ್ತ, ನಾನು ಹೇಳಿದೆ. ಈಗ ಅಲ್ಲಿ ಯಾವ ಗಾಡಿಗಳೂ ಇರಲಿಲ್ಲ.

'ಫಿರಂಗಿ ದಾಳಿ ನಡೆಯುವಾಗ, ಏನ್ಮಾಡ್ತವೆ ಅವು, ನನಗೆ ಮಾತ್ರ ಹೋಗಲಿಕ್ಕೆ ಹೇಳಿದರು, ಫಿರಂಗಿ ದಾಳಿ ನಡೆಯುತ್ತೆ ಅಂತ ಹೇಳಿ?'

'ಪಾರಿವಾಳಗಳ ಗೂಡಿನ ಬೀಗ ತೆಗೆದು ಬಂದೆ ತಾನೆ, ನೀನು?' ನಾನು ಕೇಳಿದೆ.

'ಹೌದು.'

'ಹಾಗಾದರೆ ಸರಿ, ಅವು ಹಾರಿ ಹೋಗುತ್ತವೆ.'

'ಹೌದು, ಖಂಡಿತವಾಗಿ ಅವು ಹಾರಿ ಹೋಗುತ್ತವೆ. ಆದರೆ ಬೇರೆ ಪ್ರಾಣಿಗಳು. ಅವುಗಳ ಬಗ್ಗೆ ಯೋಚಿಸುವುದಕ್ಕೇ ಕಷ್ಟವಾಗುತ್ತಿದೆ ನನಗೆ,' ಅವನು ಹೇಳಿದ.

'ನೀನು ಸುಧಾರಿಸಿಕೊಳ್ಳುವುದಾದರೆ, ನಾನು ಹೊರಡುತ್ತೇನೆ,' ನಾನು ಒತ್ತಾಯಿಸಿದೆ. 'ಏಳು, ಮೇಲೇಳು, ಈಗ ಹೊರಡುವುದಕ್ಕೆ ನೋಡು.'

'ಧನ್ಯವಾದಗಳು,' ಎಂದು ಹೇಳುತ್ತ ನಿಧಾನಕ್ಕೆ ಮೊಣಕಾಲ ಮೇಲೆ ಭಾರ ಹಾಕಿ ಮೇಲೇಳುತ್ತಿದ್ದಂತೆ ನಿಲ್ಲಲಾಗದೆ, ಆಕಡೆಯಿಂದ ಈಕಡೆಗೆ ಓಲಾಡುತ್ತಿದ್ದ. ನಂತರ, ಕುಸಿದುಕುಳಿತ, ಬೆನ್ನು ನೆಲಕ್ಕೆ ಹಾಕಿ ಧೂಳಲ್ಲಿ,

'ನಾನು ಪ್ರಾಣಿಗಳನ್ನು ಸಾಕಿದ್ದೆ, ಅವುಗಳನ್ನು ನೋಡಿಕೊಳ್ಳುತ್ತಿದ್ದೆ,' ಅವನು ಪೆದ್ದುಪೆದ್ದಾಗಿ ಹೇಳಿದ. ಆ ಮಾತು ನನ್ನನ್ನು ಕುರಿತು ಹೇಳಿದ್ದಾಗಿರಲಿಲ್ಲ. 'ನಾನು ಪ್ರಾಣಿಗಳನ್ನು ನೋಡಿಕೊಳ್ಳುತ್ತಿದ್ದೆ.'

■

ಅವನ ಬಗ್ಗೆ ನನಗೆ ಮಾಡುವುದಕ್ಕೆ ಏನೂ ಇರಲಿಲ್ಲ. ಅದು ಈಸ್ಟರ್ ಭಾನುವಾರ, ಫ್ಯಾಸಿಸ್ಟರು ಎಬ್ರೋ ಕಡೆ ಧಾವಿಸಿ ಬರುತ್ತಿದ್ದರು. ಮೋಡಮುಚ್ಚಿದ ದಿನ, ಮೋಡಗಳು ತುಂಬಾ ಕೆಳಮಟ್ಟದಲ್ಲಿ ತೇಲುತ್ತಿದ್ದುವು. ಅದ್ದರಿಂದ ಅವರ ಯುದ್ಧ ವಿಮಾನಗಳು ಆಕಾಶಕ್ಕೆ ಹಾರಿರಲಿಲ್ಲ. ಬೆಕ್ಕುಗಳು ತಮ್ಮನ್ನು ತಾವು ನೋಡಿಕೊಳ್ಳುತ್ತವೆ ಎನ್ನುವ ಸಂಗತಿ ಮಾತ್ರ ಶುಭಕರವಾಗಿತ್ತು, ಅದು ಮಾತ್ರ ಮುದುಕ ಯಾವತ್ತೂ ಹೊಂದಿರಬಹುದಾದ ಸಂಗತಿಯಾಗಿತ್ತು.



ನಮ್ಮ ಪ್ರಗತಿಪರ ಚಿಂತನೆ ಎಡವಿದ್ದೆಲ್ಲಿ?

ಡಾ. ಟಿ.ಎನ್. ವಾಸುದೇವಮೂರ್ತಿ

ಸಂಸತ್ ಚುನಾವಣೆಗೂ ಮುನ್ನ ಎಲ್ಲ ಪ್ರಸಿದ್ಧ ಬುದ್ಧಿಜೀವಿಗಳೂ ಒಂದು ಕೋಮುವಾದಿ ಪಕ್ಷ ಅಧಿಕಾರಕ್ಕೆ ಬಂದರೆ ಅನಾಹುತವೇ ಆಗಿಬಿಡುವುದೆಂದು ನಾಡಿನಾದ್ಯಂತ ಒಂದು ಬಗೆಯ ತಲ್ಲಣವನ್ನು ಸೃಷ್ಟಿಸಿದ್ದರು. ಅದರಲ್ಲೂ ನರೇಂದ್ರ ಮೋದಿ ಪ್ರಧಾನಿಯಾಗಿಬಿಟ್ಟರೆ ಪ್ರಜಾಪ್ರಭುತ್ವವೇ ಸರ್ವನಾಶವಾಗಿ ದೇಶದಾದ್ಯಂತ ಸರ್ವಾಧಿಕಾರವೇ ರಾರಾಜಿಸುತ್ತದೆ ಎಂಬ ತರಹದ ದಿಗಿಲಿನ ವಾತಾವರಣ ನಿರ್ಮಿಸಿದ್ದರು. ಅಂದು ಬಲಪಂಥೀಯರ ಕಟಕಿ, ನಿಂದನೆ, ಆಕ್ಷೇಪಣೆಗಳನ್ನು ಲೆಕ್ಕಿಸದೆ ನಮ್ಮ ಪ್ರಗತಿಪರ ಚಿಂತಕರು ತಮ್ಮ ಸಿದ್ಧಾಂತ ಮತ್ತು ತಾವು ನಂಬಿದ್ದ ಮೌಲ್ಯಗಳನ್ನೇ ಎತ್ತಿ ಹಿಡಿಯಲು ಪ್ರಯತ್ನಿಸಿದರು. ಅವರ ಬದ್ಧತೆ ಮತ್ತು ಪ್ರಾಮಾಣಿಕತೆಗಳು ನಿಜಕ್ಕೂ ಅಭಿನಂದನೀಯ.

ಈಗ ಹೊಸ ಸರ್ಕಾರ ಬಂದಿದೆ. ಈ ಮೂರು-ನಾಲ್ಕು ತಿಂಗಳ ಮಟ್ಟಿಗಂತೂ, ಆ ಬುದ್ಧಿಜೀವಿಗಳು ಪ್ರಚಾರ ಮಾಡಿದ್ದ ಆತಂಕ ಹುಸಿಯೆಂದು ಸಾಬೀತಾಗಿದೆ. ಇದು ಯಾರಿಗೇ ಆದರೂ ಸಮಾಧಾನ ನೀಡುವ ವಿಷಯವಾಗಿದೆ. ನಿಜ, ಬೆಲೆಯೇರಿಕೆಯಾಗಿಬಹುದು. ಸಂಪುಟದ ಸಚಿವರು ೩೭೦ರ ಕಾಯಿದೆಯೆಂಬ ಹುಣ್ಣಿನ ಮೇಲೆ ಕ್ರಿಯಾವಿಸಲು ಪ್ರಯತ್ನಿಸಿರಬಹುದು. ವಿಶ್ವವಿದ್ಯಾಲಯದಿಂದ ಒಂದು ಪದವಿಯನ್ನೂ ಪಡೆಯದ

ಒಬ್ಬ ಮಹಿಳಾ ಸಂಸದೆ ಶಿಕ್ಷಿತ ಸಮುದಾಯವನ್ನು ನಿರ್ವಹಿಸುವ ಜವಾಬ್ದಾರಿಯುತ ಸ್ಥಾನ ಪಡೆದಿರುವರು, ಕೇಂದ್ರದಿಂದ ಹಿಂದಿ ಹೇರಿಕೆಯ ಪ್ರಯತ್ನ ನಡೆಯಿತು, ಅತ್ಯಾಚಾರ ಮತ್ತು ಕೋಮುಗಲಭೆಗಳು ಹಿಂದಿನಂತೆಯೇ ಎಗ್ಗಿಲ್ಲದೆ ಮುಂದುವರೆಯುತ್ತಿವೆ. ಸುದೈವವಶಾತ್ ಬುದ್ಧಿಜೀವಿಗಳು ಭಾವಿಸಿದ್ದ, ಪ್ರಜಾಪ್ರಭುತ್ವಕ್ಕೇ ಮಾರಕವಾಗಬಹುದಾದ ಜನವಿರೋಧೀ ಆಡಳಿತ ವ್ಯವಸ್ಥೆಯೇನೂ ಈತನಕ ಕಾಣಿಸಿಕೊಂಡಂತಿಲ್ಲ.

ಬುದ್ಧಿಜೀವಿಗಳು ಸಮಾಜದ ಹಿತಕ್ಕಾಗಿ ಎಲ್ಲ ಕಾಲಕ್ಕೂ ತಮ್ಮನ್ನು ತಾವು ವಿರೋಧಪಕ್ಷದ ಸ್ಥಾನದಲ್ಲೇ ಗುರುತಿಸಿಕೊಳ್ಳುವರು. ಇದು ನಿಜಕ್ಕೂ ಶ್ಲಾಘನೀಯವಾದ ಉದಾತ್ತ ನಿಲುವಾಗಿದೆ. ಏಕೆಂದರೆ ವಿರೋಧ ಪಕ್ಷದ ನೆಲೆಯಲ್ಲಿ ನಿಂತ ಯಾವುದೇ ಪ್ರಗತಿಪರ ಚಿಂತನೆ ಆ ಚಿಂತನೆಯನ್ನು ಪ್ರತಿಪಾದಿಸುವ ಕೆಲವರ ಸ್ವಾರ್ಥ, ಹುನ್ನಾರ, ಹಿತಾಸಕ್ತಿಗಳನ್ನು ಬದಿಗೆ ಸರಿಸಿ ನೋಡಿದರೆ ತನ್ನ ಸ್ವಭಾವದಲ್ಲಿ ಮಾನವ ಪರವಾದ ಕಾಳಜಿಗಳನ್ನು ಕಾಪಾಡಿಕೊಂಡಿರುತ್ತದೆ ಎಂಬುದನ್ನು ಮರೆಯಬಾರದು. ಆದರೆ ಬಚ್ಚಲ ನೀರಿನೊಂದಿಗೆ ಮಗುವನ್ನೂ ಹೊರಗೆಸೆವುದು ಎಂಬ ಇಂಗ್ಲೀಷ್ ಗಾದೆ ಮಾತಿನಂತೆ ಪ್ರಗತಿಪರ ಚಿಂತಕರ ಸ್ವಾರ್ಥ, ಪ್ರಲೋಭನೆಗಳನ್ನು ಟೀಕಿಸುವ ನೆವದಲ್ಲಿ ಒಟ್ಟು ಪ್ರಗತಿಪರ ಚಿಂತನೆಯನ್ನೇ ಸಾರಾಸಗಟಾಗಿ ತಿರಸ್ಕರಿಸುವುದು ನಿಜಕ್ಕೂ ದುಡುಕಾಗುತ್ತದೆ.

ಈ ಮಾತು ಪ್ರಗತಿಪರರೆನಿಸಿಕೊಂಡವರಿಗೂ ಅನ್ವಯಿಸಬೇಕು. ಒಬ್ಬ ಪ್ರಗತಿಪರನು ವೈದಿಕರನ್ನು ನಿಂದಿಸುವ ಉತ್ಸಾಹದಲ್ಲಿ ವೇದೋಪನಿಷತ್ತುಗಳ ಉದಾತ್ತ ಜ್ಞಾನಕ್ಕೂ ಕುರುಡಾಗುವುದು ದುರ್ದೈವದ ಸಂಗತಿಯಾಗಿದೆ. ವೇದೋಪನಿಷತ್ತುಗಳಲ್ಲಿ, ವಿಜ್ಞಾನ ತಂತ್ರಜ್ಞಾನಗಳಲ್ಲಿ, ಇಂಗ್ಲೀಷ್ ಶಿಕ್ಷಣದಲ್ಲಿ, ಶಾಸ್ತ್ರೀಯ ಸಂಗೀತದಲ್ಲಿ, ಸಂಸ್ಕೃತ ಭಾಷೆಯಲ್ಲಿ ವಿಶಿಷ್ಟ ಪರಿಶ್ರಮವಿರುವ ಒಂದು ನಿರ್ದಿಷ್ಟ ವರ್ಗವನ್ನು ಅನುಮಾನದ ಕಣ್ಣಿಂದ ನೋಡುವ ಪ್ರಗತಿಪರರು ತಮ್ಮ ಮಕ್ಕಳು ಆ ನಿರ್ದಿಷ್ಟ ವರ್ಗಕ್ಕೆ ಸಮಸಮನಾಗಿ ಆಯಾ ಕ್ಷೇತ್ರಗಳಲ್ಲಿ ಹೆಜ್ಜೆಯಿಡುತ್ತಾ ಬೆಳೆವುದನ್ನು ಕಂಡು ಒಳಗೊಳಗೇ ಹಿಗ್ಗುವುದನ್ನು ಗಮನಿಸಿದರೆ ನಿಜಕ್ಕೂ ಸೋಜಿಗವೆನಿಸುತ್ತದೆ. ಇರಲಿ, ಇಲ್ಲಿ ಚರ್ಚೆಯ ವಿಷಯ ಅದಲ್ಲ.

ಇಂದು ಪ್ರಗತಿಪರ ಎನಿಸಿಕೊಂಡ ನಿಲುವನ್ನು ಪ್ರತಿನಿಧಿಸುವ ನಮ್ಮ ಸಮಕಾಲೀನ ಚಿಂತಕರೆಲ್ಲರೂ ಆಳದಲ್ಲಿ ಗಾಂಧಿ ಮತ್ತು ಅಂಬೇಡ್ಕರ್‌ರಿಂದ ಪ್ರಭಾವಿತರಾಗಿರುವರು ಎಂಬುದನ್ನು ನಾವು ಗಮನಿಸಬೇಕು. ಈ ನೆಲೆಯಿಂದಲೇ ನಮ್ಮ ಪ್ರಗತಿಪರ ಚಿಂತನೆಯೊಳಗೆ ಸೇರಿರಬಹುದಾದ ತೊಡಕುಗಳನ್ನು ಶೋಧಿಸಬೇಕಾಗುತ್ತದೆ.

ಗಾಂಧಿ ಯಾವ ಅರ್ಥದಲ್ಲೂ ಒಬ್ಬ ಪ್ರಗತಿಪರ ವ್ಯಕ್ತಿಯಾಗಿರಲಿಲ್ಲ ಎಂಬ ಅಂಶವನ್ನು ಗಾಂಧಿಯನ್ನು ಗೌರವಿಸುವ ಎಲ್ಲ ಪ್ರಗತಿಪರರೂ ಜಾಣ್ಮೆಯಿಂದಲೋ ಅಥವಾ ಅಜ್ಞಾನದಿಂದಲೋ ಮರೆಮಾಚುವರು. ತಮ್ಮ ಬದುಕಿನುದ್ದಕ್ಕೂ ಸತ್ಯಶೋಧಕರೂ, ಪ್ರಯೋಗಶೀಲರೂ ಆಗಿದ್ದ ಗಾಂಧಿಯ ಬಗ್ಗೆ ಅಪಾರವಾದ ಗೌರವವಿದ್ದೂ ಡಾ. ಅಂಬೇಡ್ಕರ್ he was tory by birth as well as by faith (ಆತ ಜಾತಿಯಿಂದ ಮತ್ತು ಗುಣದಿಂದ ಶುದ್ಧ ಕಂದಾಚಾರಿಯಾಗಿದ್ದರು) ಎಂದು ಬಹಳ ಸ್ಪಷ್ಟವಾಗಿ ನುಡಿದಿದ್ದಾರೆ (ಸೋಷಿಯಲ್ ಅಂಡ್ ಪೊಲಿಟಿಕಲ್ ಥಾಟ್ಸ್ ಆಫ್ ಮಹಾತ್ಮಾ ಗಾಂಧಿ, ಬಿದ್ಯುತ್ ಚಕ್ರವರ್ತಿ, ಪುಟ ೧೧೧).

ಒಂದು ತಲೆಮಾರು ತನ್ನ ಕಾಲದಲ್ಲಿ ಹುಟ್ಟಿದ ಒಬ್ಬ ಸತ್ಯಾನ್ವೇಷಕನನ್ನು ಯಥಾರ್ಥವಾಗಿ ಮನಗಾಣಲು ಸೋತಲ್ಲಿ ಅಥವಾ ಇಲ್ಲದ ಆದರ್ಶಗಳನ್ನೆಲ್ಲ ಅವನ ಮೇಲೆ ಹೇರಲಾರಂಭಿಸಿದಲ್ಲಿ, ಆ ತಲೆಮಾರು ಆತನ ಚಿಂತನೆ ಮತ್ತು ಕೊಡುಗೆಗಳಿಂದಲೇ ವಂಚಿತವಾಗಿಬಿಡುತ್ತದೆ. ಗಾಂಧಿಯನ್ನು ಒಬ್ಬ ಪ್ರತಿಗಾಮಿ ಎಂದೊಡನೆ ಅದನ್ನು ನಿಂದನೆಯ ಮಾತುಗಳೆಂದು ಭಾವಿಸಕೂಡದು. ವ್ಯಕ್ತಿಗತ ನೆಲೆಯಲ್ಲಿ ಅವರು ಬಂಡಾಯಗಾರರಾಗಿದ್ದರೂ ಸಾಮಾಜಿಕ ನೆಲೆಯಲ್ಲಿ ಕಡೆತನಕ ಒಬ್ಬ ಪ್ರತಿಗಾಮಿಯಾಗಿಯೇ ಆಲೋಚಿಸುತ್ತಿದ್ದರು.

ಗಾಂಧಿ ಆಂತರ್ಯದಲ್ಲಿ ಒಬ್ಬ ಆಧ್ಯಾತ್ಮಿಕ ಸಾಧಕರಾಗಿದ್ದರೇ ವಿನಃ ಖಂಡಿತವಾಗಿ ಅವರು ಒಬ್ಬ ಉತ್ತಮ ರಾಜಕೀಯ, ಆರ್ಥಿಕ ಅಥವಾ ಸಾಮಾಜಿಕ ಚಿಂತಕರಾಗಿರಲಿಲ್ಲ. ಒಬ್ಬ ಆಧ್ಯಾತ್ಮಿಕ ಸಾಧಕ ಪಾಲಿಸುವ ಜೀವನ ಮೌಲ್ಯವನ್ನು ಒಟ್ಟಾರೆ ಸಮುದಾಯಕ್ಕೆ ಅನ್ವಯಿಸಲು ಹೊರಟರೆ ಆಭಾಸವಾಗುತ್ತದೆ. ಈ ದೋಷಪೂರ್ಣವಾದ ಅನ್ವಯವೇ ನಮ್ಮ ಬುದ್ಧಿಜೀವಿಗಳ ಎಲ್ಲ ತಪ್ಪು ಲೆಕ್ಕಾಚಾರಗಳಿಗೆ ಕಾರಣವಾಗಿದೆ. ಕೆಲವು ಸಲ ಸಂಕೀರ್ಣಮಯವಾದ ಬೌದ್ಧಿಕ ಚಿಂತನೆಗಳಿಗೆ ಹೊಳೆಯದಿರುವುದು ಸಾಮಾನ್ಯಜ್ಞಾನಕ್ಕೆ ಹೊಳೆದುಬಿಡುವುದು. ಕೆಲ ತಿಂಗಳ ಹಿಂದೆ ವಿಧಾನ ಸಭೆಯ ಸ್ಪೀಕರ್ ಕಾಗೋಡು ತಿಮ್ಮಪ್ಪನವರು ವಿಧಾನಸಭೆಯಲ್ಲಿ ಶ್ರೀ ವೈ.ಎಸ್.ವಿ. ದತ್ತ ಅವರಿಗೆ ಪ್ರತಿಕ್ರಿಯಿಸುತ್ತ ಅವರೆಲ್ಲ (ಪ್ರಗತಿಪರರು) ಗಾಂಧಿವಾದದ ಬಗ್ಗೆ ಮಾತನಾಡುವರೇ ವಿನಃ ಬದುಕಿನಲ್ಲಿ ಅದನ್ನೆಲ್ಲ ಅಳವಡಿಸಿಕೊಂಡಿಲ್ಲ ಎಂದಿದ್ದರು. ಪ್ರಾಯಶಃ ಗಾಂಧಿಯನ್ನು ಅನುಸರಿಸುವುದು ಅಪಾಯಕರವೆಂದು ಆಳದಲ್ಲಿ ಪ್ರಗತಿಪರರಿಗೂ ಮನವರಿಕೆಯಾಗಿರಬೇಕು.

ಉದಾಹರಣೆಗೆ, ಗಾಂಧಿ ತನ್ನನ್ನು ತಾನು ಹಿಂದೂತ್ವದೊಂದಿಗೆ ಗುರುತಿಸಿಕೊಂಡಿದ್ದರು. ಈ ಧೈರ್ಯವನ್ನು ಅಥವಾ ಹುಂಬತನವನ್ನು ಗಾಂಧಿಯನ್ನು ಪೂಜಿಸುವ ಯಾವ ಬುದ್ಧಿಜೀವಿಯೂ ಈತನಕ ಪ್ರದರ್ಶಿಸಿದಂತಿಲ್ಲ. ಜಾತೀಯತೆ ಭಾರತೀಯ ಸಮಾಜದ ಒಂದು ವಾಸ್ತವವಾಗಿದೆ ಎಂದು ಲೋಹಿಯಾ ಪ್ರತಿಪಾದಿಸಿದ್ದ ಕಾರಣ ಅವರನ್ನು ಅನುಸರಿಸುವ ನಮ್ಮ ಪ್ರಗತಿಪರರ ಪೈಕಿ ಕೆಲವರು ಜಾತಿಯೊಂದಿಗೆ ತಮ್ಮನ್ನು ತಾವು ಗುರುತಿಸಿಕೊಳ್ಳುವರಾದರೂ ಧರ್ಮದೊಂದಿಗೆ ಅಪ್ಪಿತಪ್ಪಿಯೂ ಗುರುತಿಸಿಕೊಳ್ಳಲು ಹೋಗುವುದಿಲ್ಲ. ಬದಲಿಗೆ, ಧರ್ಮದ ಹೆಸರಿನಲ್ಲಿ ದೇಶಗಳು ಒಂದಾಗಕೂಡದು ಎಂದು ಪ್ರಚಾರ ಮಾಡುವರು. ಇದೇ ತರಹದ ನಿಲುವನ್ನು ಬಹು ಹಿಂದೆಯೇ ಎರಡನೇ ಮಹಾಯುದ್ಧದ ನಂತರ ಬರ್ಟ್ರಂಟ್ ರಸೆಲ್ ಸಹ ತೆಗೆದುಕೊಂಡಿದ್ದ.

ಆದರೆ ಜಗತ್ತಿನ ಹಿರಿಯಣ್ಣನೆನಿಸಿದ ಅಮೆರಿಕಾವನ್ನೂ ಒಳಗೊಂಡಂತೆ ಜಗತ್ತಿನ ಎಲ್ಲ ಶಕ್ತಿಶಾಲೀ ದೇಶಗಳೂ ಧರ್ಮವನ್ನು ಮುಂದಿಟ್ಟುಕೊಂಡು ರಾಜಕಾರಣ ಮಾಡುತ್ತಿರುವುದು ಇಂದಿನ ಜಾಗತಿಕ ವಾಸ್ತವವಾಗಿದೆ. ಜಾತೀಯತೆ ಎಂಬ ಪಿಡುಗು ಸಾಮಾಜಿಕ ವಾಸ್ತವವಾಗಿದೆ ಎಂದು ಪ್ರತಿಪಾದಿಸುವ ಲೋಹಿಯಾವಾದಿಗಳು ಧರ್ಮ ಮತ್ತು ರಾಷ್ಟ್ರೀಯತೆ ಎಂಬ ಪಿಡುಗುಗಳು ಜಾಗತಿಕ ರಾಜಕಾರಣದ ವಾಸ್ತವವಾಗಿದೆ ಎಂಬುದನ್ನು ಒಪ್ಪದಿರುವುದು ವಿರೋಧಾಭಾಸವಲ್ಲವೇ? ಒಂದು ಜಾತಿಕೇಂದ್ರಿತ ರಾಜಕೀಯ ವ್ಯವಸ್ಥೆಯಲ್ಲಿ ದುರ್ಬಲ ಜಾತಿಗಳು ಸಂಘಟಿತರಾದರೆ ಸರಿ ಎನ್ನುವುದಾದಲ್ಲಿ ಜಾಗತಿಕ ನೆಲೆಯಲ್ಲಿ ಧಾರ್ಮಿಕವಾಗಿ ದುರ್ಬಲರಾದವರ ಸಂಘಟನೆಯನ್ನೂ ಉತ್ತೇಜಿಸಬೇಕಾಗುತ್ತದೆ ಅಥವಾ ಸರಿಯೆನ್ನಬೇಕಾಗುತ್ತದೆ.

ಜಗತ್ತಿನ ಎಲ್ಲ ದೇಶಗಳೂ ತನ್ನ ಪ್ರಜೆಗಳಲ್ಲಿ ರಾಷ್ಟ್ರೀಯ ಭಾವನೆಯನ್ನು ಬೆಳೆಸುತ್ತ ಅಭಿವೃದ್ಧಿಯ ಹಾದಿಯಲ್ಲಿ ಮುನ್ನಡೆಯುತ್ತಿರುವಾಗ ಭಾರತದಲ್ಲಿ ರಾಷ್ಟ್ರೀಯತೆಯ ಕಲ್ಪನೆಯೇ ಇರಲಿಲ್ಲ, ರಾಷ್ಟ್ರಭಕ್ತಿ ಎಂಬುದು ನಮ್ಮ ಸಂಸ್ಕೃತಿಯಲ್ಲಿ ಒಂದು ಪ್ರಮುಖ ಲಕ್ಷಣವೇ ಅಲ್ಲ ಎಂಬ ಪ್ರಗತಿಪರರ ಸಿದ್ಧಾಂತಗಳು ಕಡೆಗೆ ಅನ್ಯದೇಶಗಳು ನಮ್ಮನ್ನು ಆಕ್ರಮಿಸಿ ಹೊಸಕುವ ಪರಿಸ್ಥಿತಿಗೆ ಕೊಂಡೊಯ್ಯಬಹುದು. ಏಕೆಂದರೆ ಪ್ರಗತಿಪರ ಚಿಂತನೆಯ ಫಲವಾಗಿ ಪಡಮೂಡುವ ಒಂದು ಸಿದ್ಧಾಂತ ತರುವಾಯ ತಾನೂ ಒಂದು ಜಡ ಸಂಪ್ರದಾಯವಾಗಿ ಮಾರ್ಪಡುತ್ತದೆ. ಈ ವಾದವು ನಮ್ಮ ಪ್ರಗತಿಪರರ ಚಿಂತನಾಕ್ರಮದ ಎಡಬಿಡಂಗಿತನವನ್ನು ಎತ್ತಿ ತೋರಿಸುವ ಉದ್ದೇಶದ್ದೇ ವಿನಃ ಇಲ್ಲಿ ಹಿಂದುತ್ವ ಅಥವಾ ರಾಷ್ಟ್ರೀಯವಾದದ ಪ್ರತಿಪಾದನೆಯ ಯಾವುದೇ ಹುನ್ನಾರ ಖಂಡಿತ ಇಲ್ಲ. ಒಟ್ಟಿನಲ್ಲಿ ಜಾತಿ, ಜನಾಂಗ, ಧರ್ಮ, ಭಾಷೆ ಇತ್ಯಾದಿ ಅಹಮಿಕೆಗಳ ಹಂಗಿಲ್ಲದಂತೆ ಬದುಕಬೇಕೆಂಬ ಕನಸು ಸದ್ಯಕ್ಕಂತೂ ನಮ್ಮ ನಡುವೆ ವಾಸ್ತವಗೊಂಡಿಲ್ಲ.

ತಾನೊಬ್ಬ ಹಿಂದೂ ಎಂಬ ಕಾರಣಕ್ಕೇ ಗಾಂಧಿ ಹಿಂದೂಗಳನ್ನು ಸದಾ ವಿಮರ್ಶಕ ದೃಷ್ಟಿಯಿಂದ ನೋಡುತ್ತಿದ್ದರು ಮತ್ತು ಹಿಂದೂ ಅಲ್ಲದವರ ವಿಷಯದಲ್ಲಿ ಉದಾರತನ ಪ್ರದರ್ಶಿಸುತ್ತಿದ್ದರು. ಈ ನಿಲುವು ಯೋಗ್ಯನಾದ ಒಬ್ಬ ಹಿಂದೂವಿಗೆ, ಅಥವಾ ಯಾವುದೇ ಧರ್ಮೀಯನಿಗೆ ಉಚಿತವೇ ಸರಿ. ಗಾಂಧಿಯ ಈ ವರ್ತನೆಯಲ್ಲಿ ಕಂಡವರ ಮಕ್ಕಳನ್ನು ಟೀಕಿಸುವ ಮೊದಲು ನಮ್ಮ ಮನೆಮಕ್ಕಳನ್ನು ನಾವು ಹದ್ದುಬಸ್ತಿನಲ್ಲಿ ಇಡಬೇಕು ಎಂಬ ಸದ್ಗೃಹಸ್ಥನ ನೈತಿಕತೆ ಕಾಣಿಸುತ್ತದೆ. ಇದು ವೈಯಕ್ತಿಕ ನೆಲೆಯಲ್ಲಿ ಸರಿ. ಆದರೆ ಈ ಗೃಹಸ್ಥಧರ್ಮವನ್ನು ಇಡೀ ದೇಶಕ್ಕೆ ಅನ್ವಯಿಸಿದರೆ ಅನಾಹುತಗಳಾಗುತ್ತವೆ. ಹಾಗೆ ಅನ್ವಯಿಸಿದ್ದರ ಪರಿಣಾಮವಾಗಿ ಸ್ವಾತಂತ್ರ್ಯ ಬಂದ ಮೇಲೆ ವೋಟ್ ಬ್ಯಾಂಕ್ ರಾಜಕಾರಣ ಪ್ರಾರಂಭವಾಗಿ ದೇಶದ ಐಕ್ಯತೆಯಲ್ಲಿ ಬಿರುಕು ಕಾಣಿಸಿಕೊಂಡಿತು. ತನ್ನ ಆಧ್ಯಾತ್ಮಿಕ ಸಾಧನೆಗಾಗಿ ತಾನು ಪಾಲಿಸುತ್ತಿದ್ದ ಒಂದು ಮೌಲ್ಯವು ದೇಶದ ಐಕಮತ್ಯಕ್ಕೆ ಭಂಗ ತರಲಿದೆ ಎಂದು ತಿಳಿದರೆ ಗಾಂಧಿಯ ಆತ್ಮ ನಿಜಕ್ಕೂ ನೊಂದುಕೊಳ್ಳುತ್ತದೆ.

ಗಾಂಧೀವಾದ ಎಲ್ಲ ಸೆಕ್ಯುಲರ್‌ವಾದಗಳಿಗೂ ಮಾರಕವಾಗುತ್ತದೆ ಮತ್ತು ಅಪಥ್ಯವಾಗುತ್ತದೆ ಎಂಬುದು ನಮ್ಮ ಬುದ್ಧಿಜೀವಿಗಳಿಗೆ ಇಂದಿಗೂ ಅರ್ಥವಾದಂತಿಲ್ಲ. ಹಳ್ಳಿಯಲ್ಲಿ ಹುಟ್ಟಿ ಬೆಳೆಯದ ಮತ್ತು ಜೀವನೋಪಾಯಕ್ಕಾಗಿ ಎಂದೂ ಹಳ್ಳಿಯ ಆಶ್ರಯದಲ್ಲಿದ್ದು ಅಲ್ಲಿನ ಕಷ್ಟಕೋಟಲೆಗಳನ್ನು ಅನುಭವಿಸದ ಗಾಂಧಿಯಂಥವರು ಗ್ರಾಮಸ್ವರಾಜ್ಯದ ಬಗ್ಗೆ ಮಾತನಾಡುವುದೇ ಹಾಸ್ಯಾಸ್ಪದ. ಹಳ್ಳಿಗಳಲ್ಲಿ ಭವಿಷ್ಯವಿಲ್ಲ ಎಂಬುದು ಪ್ರತಿಯೊಬ್ಬ ಹಳ್ಳಿಗನಿಗೂ ಗೊತ್ತಿರುತ್ತದೆ. ಆದರೆ ಹಳ್ಳಿಗಳಲ್ಲಿ ಬದುಕನ್ನು ನಡೆಸಲೊಲ್ಲದ ಬುದ್ಧಿಜೀವಿಗಳು ಅದೇಕೆ ಗಾಂಧಿಯ ಗ್ರಾಮಸ್ವರಾಜ್ಯ ಕಲ್ಪನೆಯನ್ನು ಕೊಂಡಾಡುವರು ಮತ್ತು ಕೊನೆಯಿರದಂತೆ ಕಾಯಕ, ಶ್ರಮ, ದುಡಿಮೆ ಇತ್ಯಾದಿಗಳನ್ನು ಪ್ರಚಾರ ಮಾಡುವರೋ ಅರ್ಥವಾಗುವುದಿಲ್ಲ.

ಆಧುನಿಕ ಯುಗದಲ್ಲೂ ಪ್ರಸನ್ನರಂತಹ ಕೆಲವು ಕ್ರಿಯಾಶೀಲರಾದ ಗಾಂಧೀವಾದಿಗಳು ಯಶಸ್ವಿಯಾಗಿ ಗುಡಿಕೈಗಾರಿಕೆಗಳನ್ನು, ಗ್ರಾಮೀಣ ಉದ್ಯೋಗಗಳನ್ನು ಪೋಷಿಸಿ ಬೆಳೆಸುತ್ತಿರುವರು. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಇಂಥ ಒಳ್ಳೆಯ ಪ್ರಯತ್ನಗಳನ್ನು ಅಪವಾದಗಳಂತೆ ಕಾಣಬಹುದೇ ವಿನಃ ಇವನ್ನೇ ನಿಯಮವನ್ನಾಗಿ ಪರಿಗಣಿಸಿ ಒಟ್ಟು ಸಮಾಜಕ್ಕೆ ಅನ್ವಯಿಸಲಾಗದು. ಯಂತ್ರಗಳಿಂದಾಗುವ ಕೆಲಸವನ್ನು ಮನುಷ್ಯರ ಕೈಲಿ ಮಾಡಿಸುವುದೇ ಅಮಾನವೀಯತೆಯಾಗಿದೆ.

ಮಾನವ ಶ್ರಮ ಮತ್ತು ದುಡಿಮೆಗಳು ಇರುವಷ್ಟೂ ಕಾಲ ಸಾಮಾಜಿಕ ನ್ಯಾಯದ ಕನಸು ಕನಸಾಗೇ ಉಳಿದುಬಿಡುತ್ತದೆ. ಅಲ್ಲದೆ ಇಂದು ಸಾಮಾಜಿಕ ನ್ಯಾಯವನ್ನು (ಅನ್ನ ವಸತಿ ಇತ್ಯಾದಿ ಮೂಲಭೂತ ಅಗತ್ಯಗಳ ಪೂರೈಕೆ ಎಂಬರ್ಥದಲ್ಲಿ) ವಾಸ್ತವಗೊಳಿಸಿರುವ ದೇಶಗಳಲ್ಲಿ ಯಂತ್ರಗಳು ಶ್ರಮಸಾಧ್ಯವಾದ ಕೆಲಸಗಳಿಂದ ಮನುಷ್ಯನನ್ನು ವಿಮೋಚನೆಗೊಳಿಸಿವೆ ಎಂಬುದನ್ನು ನಾವು ಮರೆಯಬಾರದು.

ದುಡಿಯುವ ಪ್ರಜ್ಞೆಗೂ ದುಡಿಮೆಯಿಂದ ಬಿಡುಗಡೆ ಹೊಂದಿದ ಪ್ರಜ್ಞೆಗೂ ನಡುವೆ ಅಪಾರವಾದ ವ್ಯತ್ಯಾಸ ಏರ್ಪಡುತ್ತದೆ. ಮನುಷ್ಯನ ಈವರೆಗಿನ ಎಲ್ಲ ಮಹತ್ವದ ಸಾಧನೆಗಳೂ ದುಡಿಮೆಯಿಂದ ಬಿಡುಗಡೆ ಹೊಂದಿದ ಸನ್ನಿವೇಶದಲ್ಲಿ ಸಂಭವಿಸಿವೆ. ಅಥೆನ್ಸ್‌ನಲ್ಲಿ ವಿಜ್ಞಾನ, ತತ್ವಜ್ಞಾನ, ನೀತಿಶಾಸ್ತ್ರ ಸಾಹಿತ್ಯಗಳು ತಮ್ಮ ಉತ್ತುಂಗಕ್ಕೆ ತಲುಪಲು ಕಾರಣಗಳಿವೆ. ಅಲ್ಲಿನ ಸಮಾಜವು ದುಡಿಯುವ ಗುಲಾಮ ವರ್ಗ ಹಾಗು ದುಡಿಯದ ಅಭಿಜಾತ ವರ್ಗಗಳೆಂದು ಸ್ಪಷ್ಟವಾಗಿ ವಿಭಜನೆಯಾಗಿತ್ತು. ಆ ಅಭಿಜಾತ ವರ್ಗವನ್ನು ಮಾರ್ಕ್ಸ್‌ವಾದಿಗಳು ಬೂರ್ಷ್ವಾಗಳೆಂದು ಕರೆಯುತ್ತಿದ್ದರು. ಈ ಬೂರ್ಷ್ವಾ ವರ್ಗವೇ ಸಾಕ್ರಟೀಸ್, ಅರಿಸ್ಟಾಟಲ್, ಪ್ಲೇಟೋರಂತಹ ತತ್ವಜ್ಞಾನಿಗಳಿಗೆ ಜನ್ಮ ನೀಡಿದ್ದು. ಭಾರತದಲ್ಲಿಯೂ ಶ್ರಮದಿಂದ ಸಂಪೂರ್ಣ ಬಿಡುಗಡೆ ಹೊಂದಿದ್ದ ಬ್ರಾಹ್ಮಣರದ್ದು ಇದೇ ಕತೆ. ಶ್ರಮದಿಂದ ಬಿಡುಗಡೆ ಹೊಂದಿದ ಬ್ರಾಹ್ಮಣನ ಚಿತ್ತ ಸುಲಭವಾಗಿ ಮುಂದಿನ ಹಂತವನ್ನು ಪ್ರವೇಶಿಸಿತು. ಇಡೀ ಮನುಷ್ಯಜಾತಿಯೇ ಹೀಗೆ ಶ್ರಮಸಾಧ್ಯ ದುಡಿಮೆಯಿಂದ ಮುಕ್ತವಾಗುವ ದಿನವೇ ನಿಜವಾದ ಕ್ರಾಂತಿ ಹಾಗು ಸರ್ವೋದಯ ಸಂಭವಿಸುವುದು. ಮನುಷ್ಯನನ್ನು ಶ್ರಮ ಸಾಧ್ಯ ದುಡಿಮೆಯಿಂದ ಬಿಡುಗಡೆಗೊಳಿಸದೇ ವ್ಯಕ್ತಿಗೌರವ, ಸಾಮಾಜಿಕ ನ್ಯಾಯಗಳ ಬಗ್ಗೆ ಮಾತನಾಡುವುದು ಅರ್ಥಹೀನ.

ಗಾಂಧೀ ಅಥವಾ ಪ್ರಸನ್ನರ ಚಿಂತನೆಗಳಾದರೂ ದೇಶದ ಪ್ರತಿಯೊಬ್ಬ ಪ್ರಜೆಯನ್ನೂ ಶಾಶ್ವತವಾಗಿ ಶ್ರಮಜೀವಿಯನ್ನಾಗಿ ಮಾಡಿಬಿಡುತ್ತದೆ. ನಮ್ಮ ಪರಿಸರ ದಿನೇ ದಿನೇ ನಾಶವಾಗುತ್ತಿರುವ ಇಂದಿನ ಸಂದರ್ಭದಲ್ಲಿ ಗಾಂಧಿ ಸೂಚಿಸುವ ಗ್ರಾಮ ಸ್ವರಾಜ್ಯ, ಸರ್ವೋದಯ, ನಯೀತಾಲೀಂ ಇತ್ಯಾದಿಗಳು ಮೇಲ್ನೋಟಕ್ಕೆ ರಮ್ಯ ಮತ್ತು ಅನುಕರಣೀಯ ಎಂಬಂತೆ ತೋರಬಹುದು. ಆದರೆ ಯಾವುದೇ ಹೊಸ ಆವಿಷ್ಕಾರ ತನ್ನೊಂದಿಗೆ ಹೊಸ ಸಮಸ್ಯೆ, ಸವಾಲುಗಳನ್ನೂ ಹೊತ್ತು ತರುತ್ತದೆ. ವಿಜ್ಞಾನ ತಂತ್ರಜ್ಞಾನಗಳು ತಂದೊಡ್ಡುವ ಮಾರಕ ಪರಿಣಾಮಗಳನ್ನು ಎಚ್ಚರದಿಂದ ನಿವಾರಿಸಿಕೊಳ್ಳಬೇಕಾದುದು ಇಂದು ನಮ್ಮೆದುರಿಗಿರುವ ಸವಾಲಾಗಿದೆಯೇ ವಿನಃ ಯಂತ್ರಗಳನ್ನು ಕಳಚಿಟ್ಟು ಗಾಂಧೀ ಸೂಚಿಸುವ ಭೂತಕಾಲಕ್ಕೆ ಅಂದರೆ ರಾಮರಾಜ್ಯಕ್ಕೆ ಅಥವಾ ಬುಡಕಟ್ಟು ಜೀವನ ಪದ್ಧತಿಗೆ ಏಕಾಏಕಿ ಹಿಂದಿರುಗುವುದು ಪರಿಹಾರವಲ್ಲ. ಭವಿಷ್ಯದ ಸವಾಲುಗಳನ್ನು ಎದುರಿಸಲಾಗದೇ ಭೂತಕಾಲಕ್ಕೆ ಸರಿದುಬಿಡುವ ಈ ಹೃದಯ ದೌರ್ಬಲ್ಯವನ್ನು ಮನೋವಿಜ್ಞಾನಿಗಳು ರಿಗ್ರೆಷನ್ ಎಂದು ಕರೆಯುತ್ತಾರೆ.

ಬೃಹತ್ ಯಂತ್ರಗಳು ಮತ್ತು ತಂತ್ರಜ್ಞಾನದ ನೆರವಿನಿಂದ ಹಲವು ಹಳ್ಳಿಗಳ ಸಮಸ್ತ ಕೃಷಿ ಭೂಮಿಯನ್ನು ಒಗ್ಗೂಡಿಸಿ ಸಮರೋಪಾದಿಯಲ್ಲಿ ಕೃಷಿ ಚಟುವಟಿಕೆಗಳನ್ನು ನಡೆಸುವುದು ಇಂದಿನ ಕಾಲದಲ್ಲಂತೂ ಕಷ್ಟವೇನಲ್ಲ. ಮೊದಲ ಮಹಾಯುದ್ಧದಲ್ಲಿ ಸೋತು ಸುಣ್ಣವಾಗಿದ್ದ ರಷ್ಯಾಗೆ ಆಗ ತಿನ್ನಲೂ ಗತಿಯಿರಲಿಲ್ಲ. ಇಂತಹ ದೇಶವು ಸ್ಟಾಲಿನ್ ಕಾಲದಲ್ಲಿ ಯಂತ್ರಗಳ ನೆರವಿನಿಂದ ಒಂದು

ದಶಕದ ಒಳಗಾಗಿ ಹಸಿರು ಕ್ರಾಂತಿ ಮಾಡಿದ ಉದಾಹರಣೆ ನಮ್ಮ ಕಣ್ಮುಂದೆ ಇನ್ನೂ ಹಸುರಾಗಿದೆ. ನಮ್ಮ ದೇಶದ ಕೋಟ್ಯಂತರ ತುತ್ತಿನ ಚೀಲಗಳನ್ನು ಒಂದೇ ಸಲಕ್ಕೆ ತುಂಬಿಸಬೇಕಾದ ತುರ್ತು ಇಂದು ನಮ್ಮೆದುರು ನಿರ್ಮಾಣವಾಗಿದೆ. ಇಂತಹ ದೊಡ್ಡ ಹೊಣೆಗಾರಿಕೆಯನ್ನು ಬೆಳೆ ಸಾಲ ತೀರಿಸಲೂ ಹೆಣಗುತ್ತಿರುವ, ಪ್ರತಿವರ್ಷ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಬಡಪಾಯಿ ರೈತರ ಹೆಗಲಿಗೆ ಹೊರಿಸುವುದೇ?

ಗಾಂಧಿ ಎಷ್ಟು ಅವೈಜ್ಞಾನಿಕವಾಗಿ ಆಲೋಚಿಸುತ್ತಿದ್ದರು ಎಂಬುದು ಡಾ. ಅಂಬೇಡ್ಕರ್‌ಗೆ ಸರಿಯಾಗಿ ತಿಳಿದಿತ್ತು. ಡಾ. ಅಂಬೇಡ್ಕರ್ ಗಾಂಧಿಯನ್ನು ಪ್ರತಿ ಹಂತದಲ್ಲೂ ಟೀಕಿಸುತ್ತಿದ್ದರು. ಗಾಂಧಿ ಮತ್ತು ಜಿನ್ನಾ ಇಬ್ಬರೂ ದೇಶವನ್ನು ತಪ್ಪು ದಿಕ್ಕುಗಳಲ್ಲಿ, ವಿನಾಶದತ್ತ, ನಡೆಸುತ್ತಿರುವರು ಎಂದು ಅಂಬೇಡ್ಕರ್ ೧೯೪೩ರಲ್ಲಿ ಪುಣೆಯ ಒಂದು ಭಾಷಣದಲ್ಲಿ ಆತಂಕದಿಂದ ನುಡಿದಿದ್ದರು. ಅವರ ಭವಿಷ್ಯವಾಣಿ ಸುಳ್ಳಾಗಲಿಲ್ಲ. ಹೀಗೆಂದ ಕೆಲವೇ ವರ್ಷಗಳಲ್ಲಿ ಎರಡೂ ದೇಶಗಳಲ್ಲಿ ಅಮಾಯಕರಾದ ಅದೆಷ್ಟೋ ಹಿಂದೂಗಳು ಮತ್ತು ಮುಸ್ಲಿಮರು ಬರ್ಬರವಾಗಿ ಹತ್ಯೆಯಾದರು. ಎರಡೂ ದೇಶಗಳ ಲಕ್ಷಾಂತರ ಮಂದಿ ಪ್ರಜೆಗಳು ನಿರಾಶ್ರಿತರಾದರು. ಆದರೆ ಅಂಬೇಡ್ಕರ್‌ರ ಆತಂಕ ಅರ್ಥ ಮಾಡಿಕೊಳ್ಳದ ಸ್ವಾತಂತ್ರ್ಯಪೂರ್ವದ ಬುದ್ಧಿಜೀವಿಗಳು ಅಂಬೇಡ್ಕರ್‌ರನ್ನು ಗಾಂಧಿಯ ವೈರಿಯಂತೆ ಬಿಂಬಿಸಿದರು ಮತ್ತು ಸ್ವಾತಂತ್ರ್ಯೋತ್ತರದ ಬುದ್ಧಿಜೀವಿಗಳು ಇತಿಹಾಸ ಕಲಿಸಿದ ಯಾವ ಪಾಠವನ್ನೂ ನೆನಪಿನಲ್ಲಿಟ್ಟುಕೊಳ್ಳದೆ ಗಾಂಧಿ-ಅಂಬೇಡ್ಕರ್ ನಡುವೆ ಇಲ್ಲದ ಸಮನ್ವಯ ತರಲು ಪ್ರಯತ್ನಿಸಿದರು.

ಈ ಸಮನ್ವಯದ ಮೊದಲ ಹರಿಕಾರರಾದ ಲೋಹಿಯಾರನ್ನು ತಲೆಯ ಮೇಲೆ ಹೊತ್ತು ಮೆರೆಸುವ ಕರ್ನಾಟಕದ ಬುದ್ಧಿಜೀವಿಗಳಂತೂ ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋಗಿ ಅವರಿಬ್ಬರನ್ನು ಶೇಕ್ಸ್‌ಪಿಯರ್ ನಾಟಕದ ವೈರುಧ್ಯಕರವಾದ ಎರಡು ಉದಾತ್ತ ಪಾತ್ರಗಳೆಂಬಂತೆ ಅಸಂಬದ್ಧವಾಗಿ ಬಿಂಬಿಸಿದರು. ಅವರಿಬ್ಬರ ನಡುವೆ ಹುಸಿ ಸಾಮರಸ್ಯ ಬೆಸೆಯಲು ಮುಂದಾದರು. ಡಿ.ಆರ್. ನಾಗರಾಜ್ ವಿಶ್ವವಿದ್ಯಾಲಯದಲ್ಲಿ ಕಾವ್ಯ, ನಾಟಕಗಳನ್ನು ಬೋಧಿಸುವ ಉಪನ್ಯಾಸಕರಾಗಿದ್ದ ಕಾಲದಲ್ಲಿ ಬರೆದಿದ್ದ ಫ್ಲೇಮಿಂಗ್ ಫೀಟ್ ಕೃತಿಯಲ್ಲಿ ಇಬ್ಬರೂ ಪರಸ್ಪರ ಭಿನ್ನಾಭಿಪ್ರಾಯ ಹೊಂದಿದ್ದರೂ ಆಳದಲ್ಲಿ ಒಬ್ಬರಿಂದ ಮತ್ತೊಬ್ಬರು ಕಲಿತು ಬೆಳೆಯುತ್ತಿದ್ದರು ಮತ್ತು ತಮ್ಮನ್ನು ತಾವು ಪರಿವರ್ತಿಸಿಕೊಳ್ಳುತ್ತಿದ್ದರು ಎಂದೆಲ್ಲ ಕಲ್ಪಿಸಿ ಸಿದ್ಧಾಂತ ಮಾಡಿರುವರು. ಇದು ಬಸವಾದಿ ಶರಣರು ಸನಾತನ ಧರ್ಮದಿಂದಲೂ ಕಲಿತು ಬೆಳೆಯುತ್ತಿದ್ದರು ಎಂಬ ನುಡಿಗಳಷ್ಟೇ ಅಸಂಗತವಾದ ನುಡಿಗಳಾಗಿವೆ. ಗಾಂಧಿಯೊಂದಿಗೆ ರಾಜಿ ಅಥವಾ ಅನುಸಂಧಾನ ಮಾಡಿಕೊಳ್ಳುವ ಯಾವ ಆಸಕ್ತಿಯೂ ಅಂಬೇಡ್ಕರ್‌ಗೆ ಇರಲಿಲ್ಲ. ಅವರಿಬ್ಬರ ನಡುವೆ ಕಡೆತನಕ ತಿಕ್ಕಾಟ ಇದ್ದೇ ಇತ್ತು ಎಂಬ ಅಂಶವನ್ನು ಪ್ರಗತಿಪರರೆನಿಸಿಕೊಂಡ ಕೆಲವರು ಇಂದಿಗೂ ಒಪ್ಪಲು ಇಷ್ಟಪಡುವುದಿಲ್ಲ.

ದೇವನೂರ ಮಹಾದೇವರಂತೂ ಗಾಂಧಿ-ಅಂಬೇಡ್ಕರ್‌ರನ್ನು ಮಕ್ಕಳ ಹಿತ ಬಯಸುವ ಸುಶಿಕ್ಷಿತ ಅಪ್ಪ-ಅಮ್ಮನಿಗೆ ಹೋಲಿಸುವರು. ಇವೆಲ್ಲ ಹೋಲಿಕೆಗೆ ಚೆಂದ ಕಾಣಿಸುತ್ತದೆಯೇ ವಿನಃ ವಾಸ್ತವವನ್ನು ಕಾಣಲು ಸಹಾಯಕವಾಗುವುದಿಲ್ಲ. ಈ ತರಹದ ಹೋಲಿಕೆಗಳು ಗಾಂಧಿ-ಅಂಬೇಡ್ಕರ್ ಇಬ್ಬರನ್ನೂ ವಸ್ತುನಿಷ್ಠವಾಗಿ ಮನಗಾಣಲು ಆಸ್ಪದ ನೀಡದೆ ಬದ್ಧತೆಯುಳ್ಳ ಬುದ್ಧಿಜೀವಿಗಳನ್ನು ಚಾರಿತ್ರಿಕ ವಿಸ್ಮೃತಿಗೆ ತಳ್ಳುತ್ತದೆ.

ಗಾಂಧೀ-ಅಂಬೇಡ್ಕರರನ್ನು ಬೆಸೆವ ಪ್ರೇರಣೆಗೊಳಗಾದ ನಮ್ಮ ಸಮಾಜವಾದೀ ಲೇಖಕರ ಎಲ್ಲ ಕತೆ ಕಾದಂಬರಿ, ನಾಟಕಗಳಲ್ಲೂ ಆ ಕಥನದ ನಾಯಕನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ನಿಷ್ಕ್ರಿಯನಾಗಿ ನಿಲ್ಲುವುದನ್ನು ಮತ್ತು ಕಡೆತನಕ ದ್ವಂದ್ವದಲ್ಲಿ ನವೆಯುವುದನ್ನು ಈ ಹಿನ್ನೆಲೆಯಲ್ಲಿ ಗ್ರಹಿಸಬೇಕಾಗುತ್ತದೆ. ವೈಯಕ್ತಿಕವಾಗಿ ಅವೆಲ್ಲ ಉದಾತ್ತ ಪಾತ್ರಗಳೇ ಸರಿ. ಆದರೆ ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಆ ಪಾತ್ರಗಳು ನಿಷ್ಪ್ರಯೋಜನಕಾರಿ ಎಂದು ಸಾಬೀತಾಗುತ್ತವೆ. ನಮ್ಮ ಪ್ರಗತಿಪರ ಚಿಂತನೆಯಲ್ಲಿದ್ದ ಈ ಕೆಲವು ದೋಷಗಳು ಪ್ರಾಯಶಃ ಪೂರ್ಣಚಂದ್ರ ತೇಜಸ್ವಿಗೆ ಗೋಚರಿಸಿತ್ತು ಎನಿಸುತ್ತದೆ. ನಾವು ಸಮಾಜವಾದವನ್ನು ನಂಬಿ ಈ ಮೂವತ್ತು ವರ್ಷಗಳನ್ನು ಸುಮ್ಮನೆ ಹಾಳು ಮಾಡಿಕೊಂಡೆವು ಎಂದು ಅವರು ೯೦ರ ದಶಕದ ಕೆಲವು ಲೇಖನಗಳಲ್ಲಿ ಪದೇ ಪದೇ ಹೇಳಿರುವರು (ಹೊಸವಿಚಾರಗಳು, ಲೇ: ಪೂರ್ಣಚಂದ್ರ ತೇಜಸ್ವಿ ಪುಸ್ತಕ ಪ್ರಕಾಶನ, ಮೂಡಿಗೆರೆ)


ಎಲ್ಲ ಸಮಾಜಗಳೂ ನಿರ್ದ್ವಂದ್ವನಾದ, ದೃಢಚಿತ್ತದ ಒಬ್ಬ ಹೀರೋಗಾಗಿ ಹಾತೊರೆಯುತ್ತದೆಯೇ ವಿನಃ ತುಘಲಕ್, ಹ್ಯಾಮ್ಲೆಟ್ ತರಹದ ದ್ವಂದ್ವಗಳನ್ನು ಬೆದಕುವ ಬುದ್ಧಿಜೀವಿಗಳನ್ನು ಅದು ತನ್ನ ನಾಯಕನನ್ನಾಗಿ ಆರಿಸಲು ಇಷ್ಟಪಡುವುದಿಲ್ಲ. ಇದು ಯಾವುದೇ ಸಮಾಜದ ಬಹುಮುಖ್ಯ ಲಕ್ಷಣವಾಗಿದೆ ಅಥವಾ ದೌರ್ಬಲ್ಯವಾಗಿದೆ ಎನ್ನಲೂಬಹುದು. ಏಕೆಂದರೆ ದ್ವಂದ್ವಚಿತ್ತವಿಲ್ಲದ ಅಂತಹ ನಾಯಕನು ಕೆಲವು ಸಲ ಹಿಟ್ಲರ್, ಸ್ಟಾಲಿನ್‌ಗಳಂತೆ ಮೂರ್ಖರಾಗಿರಬಹುದು, ಕ್ರೂರಿಗಳಾಗಿರಬಹುದು. ಆದರೆ ಎಲ್ಲ ಕಾಲದ ಸಮಾಜವೂ ಅಂಥವಕ್ಕೆ ಕುರುಡಾಗಿರುತ್ತದೆ. ಇಂದಿಗೂ ನಾವು ಅಂತಹ ಮೂರ್ಖರ ಮತ್ತು ಕ್ರೂರಿಗಳ ಕೈಗೆ ಅಧಿಕಾರ ಸೂತ್ರಗಳನ್ನು ನೀಡಿರುವುದು ಈ ಕುರುಡುತನಕ್ಕೊಂದು ಪುರಾವೆಯಾಗಿದೆ.

ಸ್ವಾತಂತ್ರ್ಯಾನಂತರ ಗಾಂಧೀಪಕ್ಷವಾಗಿದ್ದ ಕಾಂಗ್ರೆಸ್ ಅಧಿಕಾರ ಪಡೆದ ಕಾರಣ ಸಹಜವಾಗಿಯೇ ಗಾಂಧಿ-ಅಂಬೇಡ್ಕರ್ ಬಗ್ಗೆ ಯಥಾರ್ಥವಾಗಿ ಚರ್ಚೆ, ವಾಗ್ವಾದಗಳು ಮುಂದುವರಿಯಲು ಆಸ್ಪದವಾಗಲಿಲ್ಲ. ಆದರೆ ನಮ್ಮ ಬುದ್ಧಿಜೀವಿಗಳ ಬುದ್ಧಿ ಎಲ್ಲಿ ಹೋಗಿತ್ತು? ಈ ಚಾರಿತ್ರಿಕ ವಿಸ್ಮೃತಿಯ ಪರಿಣಾಮವಾಗಿ ದೇಶದ ಮೊದಲ ಅತಿದೊಡ್ಡ ಪಕ್ಷವು ಗಾಂಧೀ ಪ್ರಣೀತವಾದ ಓಲೈಕೆಯ ರಾಜಕಾರಣದಲ್ಲಿ ತೊಡಗಿ ಅವನತಿಯ ಕಡೆಗೆ ಪಯಣಿಸಿತಲ್ಲದೆ ಮೇಲ್ವರ್ಗದ ಬಹುಸಂಖ್ಯಾತರಲ್ಲಿ ಗುಪ್ತವಾಗಿ ಅಸಹನೆಯನ್ನು ಬೆಳೆಸಿತು. ಈ ಅಸಹನೆಗೆ ಆಸ್ಪದ ನೀಡದೆ ಹೋಗಿದ್ದರೆ ಬಹುಶಃ ಇಂದು ದೇಶದಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾದ ಮತ್ತೊಂದು ರಾಜಕೀಯ ಪಕ್ಷ ಹುಟ್ಟುತ್ತಲೇ ಇರಲಿಲ್ಲವೇನೋ. ಏಕೆಂದರೆ ಸ್ವಾತಂತ್ರ್ಯಪೂರ್ವ ಕಾಲದ ಕಾಂಗ್ರೆಸ್ ಬಹುತೇಕ ಸವರ್ಣೀಯರೇ ತುಂಬಿದ್ದ ಕಟ್ಟಾ ಬಲಪಂಥೀಯ ಪಕ್ಷವಾಗಿತ್ತು. ಅಂದಿನ ಕಾಂಗ್ರೆಸ್ಸಿಗರ ಬಲಪಂಥೀಯ ಧೋರಣೆಗೆ ಬೇಸತ್ತು ಅಂಬೇಡ್ಕರ್ ಕಾಂಗ್ರೆಸ್‌ನಿಂದ ಆಚೆಗೆ ನಡೆದರು, ಅವರ ಕಂದಾಚಾರದ ಮೌಲ್ಯಗಳಿಗೆ ಹೇಸಿ ಸುಭಾಷ್ ಚಂದ್ರಬೋಸ್ ರಾಜಿನಾಮೆ ನೀಡಿದರು ಮತ್ತು ಕಾಂಗ್ರೆಸ್‌ನಲ್ಲಿ ನೆಹರೂಗಿಂತಲೂ ಹಿರಿಯ ಕಾರ್ಯಕರ್ತರಾಗಿದ್ದ ಜಿನ್ನಾ ಕಾಂಗ್ರೆಸ್‌ನಿಂದ ಹೊರನಡೆದು ಮುಸ್ಲಿಂಲೀಗ್ ಸ್ಥಾಪಿಸಲು ಮುಂದಾದರು. ಈ ಬೆಳವಣಿಗೆಗಳನ್ನು ನಿರೀಕ್ಷಿಸಿರದಿದ್ದ ಕಾಂಗ್ರೆಸ್ ತನ್ನಿಂದಾದ ಅಚಾತುರ್ಯವನ್ನು ಸರಿಪಡಿಸಿಕೊಳ್ಳಲು ಇಂದಿಗೂ ದಲಿತರ ಮತ್ತು ಮುಸ್ಲಿಮರ ಓಲೈಕೆಯನ್ನು ಮುಂದುವರಿಸುತ್ತಲೇ ಇದೆ.

ಇಂದು ದೇಶದ ರಾಜಕಾರಣದಲ್ಲಿ ವಿರೋಧ ಪಕ್ಷವೇ ಇಲ್ಲವೆಂಬ ಸ್ಥಿತಿ ನಿರ್ಮಾಣವಾಗಿದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆಯ ಕಾವಲುಗಾರನಂತಿರಬೇಕಾದ ವಿರೋಧ ಪಕ್ಷವನ್ನು ರೂಪಿಸಬೇಕಾದ ಪ್ರಗತಿಪರ ಚಿಂತನೆಗಳೆಲ್ಲವೂ ಇಂದು ದಿಕ್ಕೆಟ್ಟು ನಿಂತಿವೆ. ಗತಕಾಲವನ್ನು ದ್ವಂದ್ವದಲ್ಲಿ ನಿಂತು ಅಸಂಬದ್ಧವಾಗಿ ವ್ಯಾಖ್ಯಾನಿಸಿಕೊಂಡುದರ ಪರಿಣಾಮವಾಗಿ ಈ ನಿರ್ವೀರ್ಯತೆ ಕಾಣಿಸಿಕೊಂಡಿದೆ. ಇಂದಿನ ಪ್ರಗತಿಪರ ಧಾರೆಗಳು ತನ್ನ ಚಿಂತನೆಯ ಮೂಲಧಾತುಗಳನ್ನು ಮತ್ತೊಮ್ಮೆ ಹೊಸದಾಗಿ ರೂಪಿಸಿಕೊಳ್ಳಬೇಕಾದ ಅಗತ್ಯವಿದೆ. ಇಂದು ಆಡಳಿತ ಪಕ್ಷ ಭವಿಷ್ಯಮುಖಿಯಾಗಿದೆ ಮತ್ತು ವಿರೋಧ ಪಕ್ಷ ಗತಕಾಲದ ವೈರುಧ್ಯಕರ ಸಿದ್ಧಾಂತಗಳನ್ನು ಅಸಂಬದ್ಧವಾಗಿ ಸಮನ್ವಯಿಸುತ್ತ ಕಾಲಹರಣ ಮಾಡುತ್ತಿದೆ. ಇನ್ನಾದರೂ ನಮ್ಮ ಪ್ರಗತಿಪರ ಚಿಂತನೆ ಗತಕಾಲದ ಹೊರೆಯನ್ನು ಕೆಳಗಿಳಿಸಿ ಭವಿಷ್ಯದತ್ತ ಅಲ್ಲದಿದ್ದರೂ ವರ್ತಮಾನದಲ್ಲಿ ಸ್ಥಿರವಾಗಿ ನಿಲ್ಲಬೇಕಾದ ಜರೂರಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಮೋದಿ ಅಲೆಯನ್ನು ನಿಯಂತ್ರಿಸುವ ಶಕ್ತಿಯನ್ನು, ಬಿಜೆಪಿಯನ್ನೂ ಒಳಗೊಂಡಂತೆ, ಭಾರತದ ಯಾವ ರಾಜಕೀಯ ಪಕ್ಷವೂ ಪಡೆದುಕೊಂಡಿರಲಿಲ್ಲ. ಈ ಕೊರತೆಯನ್ನು ತುಂಬಿಕೊಡುವ ಉದ್ದೇಶದಿಂದ ನಮ್ಮ ಪ್ರಗತಿಪರ ಚಿಂತಕರು ತಾತ್ವಿಕವಾಗಿ ಮೋದಿ ಅಲೆಯ ವಿರುದ್ಧ ವಿರೋಧ ಪಕ್ಷದ ನೆಲೆಯಲ್ಲಿ ನಿಂತರೇನೋ ಸರಿ. ಆದರೆ ಅದೇಕೆ ತಮಗೆ ತಾವೇ ಅನಗತ್ಯ ದುಗುಡ, ಆತಂಕಗಳನ್ನು ನಿರ್ಮಿಸಿಕೊಂಡರೆಂಬುದು ತಿಳಿಯುವುದಿಲ್ಲ. ವಿರೋಧ ಪಕ್ಷಕ್ಕೂ ಶತ್ರುಪಕ್ಷಕ್ಕೂ ನಡುವೆ ಅಪಾರವಾದ ವ್ಯತ್ಯಾಸವಿರುತ್ತದೆ ಎಂಬ ಪ್ರಾಥಮಿಕ ವಿವೇಕವನ್ನೂ ಕಳೆದುಕೊಂಡು ಸಮಾಜದಲ್ಲೂ ತಲ್ಲಣವನ್ನು ಸೃಷ್ಟಿಸಿದರು? ಅವರ ನಂಬಿಕೆಗಳು ಗಾಂಧಿ-ಅಂಬೇಡ್ಕರ್ ನಡುವಣ ಹುಸಿ ಸಮನ್ವಯದ ತಳಹದಿಯ ಮೇಲೆ ನಿಂತಿದ್ದರಿಂದ ಅವರು ಹಾಗೆ ಕಂಪಿಸಿದ್ದರೇ? ಇವೆಲ್ಲ ಆರೋಗ್ಯಕರವಾದ ದಿಕ್ಕಿನಲ್ಲಿ ಯೋಚಿಸಲು ಬಯಸುವ ಪ್ರಗತಿಪರರು ಆತ್ಮವಿಮರ್ಶೆ ಮಾಡಿಕೊಳ್ಳಬೇಕಾದ ವಿಷಯಗಳಾಗಿವೆ. ಈ ಪ್ರಶ್ನೆಗಳನ್ನು ಬಗೆಹರಿಸಿಕೊಳ್ಳದೆ ಯಥಾಸ್ಥಿತಿಯಲ್ಲಿ ಮುಂದುವರಿದದ್ದೇ ಆದಲ್ಲಿ ಇನ್ನು ಕೆಲವೇ ವರ್ಷಗಳಲ್ಲಿ ಪ್ರಗತಿಪರ ಚಿಂತನೆ ಎಂಬುದು ಬಲಪಂಥೀಯ ವಾದಿಗಳ ಕೈಲಿ ಒಂದು ಹಾಸ್ಯಾಸ್ಪದ ವಸ್ತುವಾಗುತ್ತದೆ. ಇಲ್ಲವೇ ಬಲಪಂಥೀಯರಲ್ಲಿ ಹಿಂಸಕತನ ಬೆಳೆಸತೊಡಗುತ್ತದೆ. ಒಂದು ಪ್ರಗತಿಪರ ಚಿಂತನೆ ಬಹುಸಂಖ್ಯಾತ ಸಹಜೀವಿಗಳಲ್ಲಿ ಹಿಂಸಕತನವನ್ನು ಪ್ರಚೋದಿಸುವುದಾದಲ್ಲಿ ಆ ಚಿಂತನೆಯ ಪ್ರಗತಿಪರತೆಯನ್ನೇ ನಾವು ಅನುಮಾನಿಸಬೇಕಾಗುತ್ತದೆ.

ನಂ. ೧೯೯, ೩ನೇ ಅವೆನ್ಯೂ, ಟೀಚರ್ಸ್ ಕಾಲೋನಿ
ಕೋರಮಂಗಲ, ಬೆಂಗಳೂರು - ೫೬೦ ೦೩೪
ಮೊಬೈಲ್ : ೯೪೮೦೦೩೯೫೭೬



ಮಾನವೀಯತೆ ಮತ್ತು ಅಸ್ತಿತ್ವದ ಪ್ರಶ್ನೆ

ಕೇಶವಶರ್ಮ. ಕೆ

ಮಾನವೀಯತೆಯನ್ನು ಕುರಿತು ನಾವು ಮಾತಾಡುವಾಗ ಅದು ಸ್ವಯಂ ಸಂಪೂರ್ಣವಾಗುವುದು ಮನುಷ್ಯನಲ್ಲಿಯೇ ಎಂಬುದನ್ನು ಮನಗಾಣಬೇಕು. ಮಾನವೀಯತೆಯೆನ್ನುವುದು ಒಂದು ಸರಳ ತೀರ್ಮಾನವಲ್ಲ. ಅದಕ್ಕೆ ಅದರದೇ ಆದ ಹಿನ್ನೆಲೆಯಿರುತ್ತದೆ. ಮಾನವೀಯತೆಯೆನ್ನುವುದು ನಮ್ಮ ವಾಸ್ತವತೆಗಳಲ್ಲಿ ಒಂದು. ಈ ಕುರಿತು ಹೇಳುವಾಗ ಸಾರ್ತ್ರೆಯು ಮಾನವೀಯತೆಯನ್ನು ವಿಶಿಷ್ಟ ಅರ್ಥಗಳಲ್ಲಿ ಬಳಸುತ್ತಾನೆ. ಅದು ಮನುಷ್ಯನ ನಿಜಗಳಲ್ಲಿ ಒಂದು ಎನ್ನುವುದು ಅವನ ಪ್ರಮುಖ ನಿಲುವು. ಆದರೆ ಯಾವುದನ್ನು ನಾವು ಮೌಲ್ಯವೆಂದು ಕರೆಯುತ್ತೇವೆಯೋ ಅದು ಅಸ್ಪಷ್ಟ. ಹಾಗೆ ನೋಡುವುದಿದ್ದರೆ ಮನುಷ್ಯತ್ವವೆನ್ನುವುದು ನೈತಿಕತೆಗಳಲ್ಲಿ ಒಂದು. ನಾವು ಯಾವುದಕ್ಕೆ ಬದ್ಧವಾಗಿರುತ್ತೇವೆ ಎನ್ನುವುದೇ ಬಹಳ ಮುಖ್ಯ. ಅಷ್ಟೇ ಅಲ್ಲ-ಯಾವುದಕ್ಕೆ ಕಮಿಟ್ ಆಗಿದ್ದೇವೆಯೋ ಅದಕ್ಕೆ ಒಂದು ಸನ್ನಿವೇಶ ಎನ್ನುವುದು , ಅಥವಾ ಒಂದು ಕ್ರಿಯೆ ಎನ್ನುವುದೇ ಇಲ್ಲ, ನಮ್ಮ ಯಾವುದೇ ಒಂದು ಚಟುವಟಿಕೆಯನ್ನು ಇಟ್ಟುಕೊಂಡು ಇದು ನಮ್ಮ ಬದ್ಧತೆ ಎಂದು ಹೇಳುವುದೇ ಕಷ್ಟ. ಯಾವುದೇ ಒಂದು ನಮ್ಮ ಚಟುವಟಿಕೆಯನ್ನು ಇಟ್ಟುಕೊಂಡು ಇದು ನಮ್ಮ ಬದ್ಧತೆಯೆಂದು ಹೇಳುವುದು ತುಂಬಾ ಕಷ್ಟವೆಂದು ಸಾರ್ತ್ರೆ ಹೇಳುತ್ತಾನೆ. ಇದಕ್ಕೆ ಪೂರಕವಾಗಿ ಅವನು

ಮತ್ತೊಂದು ಮಾತನ್ನು ಹೇಳುತ್ತಾನೆ? 'ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಂದು ವಿಶ್ವಾತ್ಮಕ ಎಂಬ ಗುಣವಿರುತ್ತದೆ.'

ನಾವು ಸ್ವಾತಂತ್ರ್ಯದ ಕುರಿತು ಬಹಳ ಮಾತುಗಳನ್ನು ಹೇಳುತ್ತೇವೆ. ಆದರೆ ಯಾವುದನ್ನು ನಾವು ಸ್ವಾತಂತ್ರ್ಯವೆಂದು ಕರೆಯುತ್ತೇವೆ ಎನ್ನುವುದೇ ನಿಜವಾದ ಸಮಸ್ಯೆಯಾಗಿದೆ. ನನಗೆ ಸಂಪೂರ್ಣ ಸ್ವಾತಂತ್ರ್ಯ ಬೇಕು ಅನ್ನುವುದು ಒಂದು ಬಯಕೆ ಮಾತ್ರ. ಅದು ನಮ್ಮ ಆದರ್ಶ. ಆದರೆ ಆ ತರಹದ ಸ್ವಾತಂತ್ರ್ಯ ಯಾವಾಗಲೂ ಸಾಧ್ಯವಾಗುವುದಿಲ್ಲ. ಯಾಕೆಂದರೆ ಸ್ವಾತಂತ್ರ್ಯ ಮತ್ತು ಬದ್ಧತೆಯು ಜೊತೆಗೆ ಹೋಗುವುದು ಅಸಾಧ್ಯ. ನಾವು ಬದ್ಧವಾಗಿರುವಾಗ ನಮಗೆ ಈ ಪ್ರಶ್ನೆಯು ಹಾಸ್ಯಾಸ್ಪದವಾಗಿಯೇ ಕಾಣಿಸುತ್ತದೆ. ಯಾವುದೇ ಒಂದು ವಿಷಯಕ್ಕೆ ನಾವು ಕಮಿಟ್‌ಮೆಂಟ್ ಇಟ್ಟುಕೊಂಡಾಗ ಈ ರೀತಿಯ ಪ್ರಶ್ನೆಯು ಬರುವುದಿಲ್ಲ. ಯಾವುದರ ಬಗೆಗೆ ನಾವು ಬದ್ಧತೆಯನ್ನು ಇಟ್ಟುಕೊಂಡಿರುತ್ತೇವೆಯೋ ಅದು ನಮಗೆ ಮುಖ್ಯವೆಂದು ಅನಿಸುತ್ತದೆ. ಆಗ ನಾವು ಸ್ವಾತಂತ್ರವನ್ನು ಕುರಿತು ಹೆಚ್ಚು ಮಾತಾಡಲು ಹೋಗುವುದಿಲ್ಲ. ಅದಕ್ಕಿಂತ ಹೆಚ್ಚಾಗಿ ನಮ್ಮ ಬದ್ಧತೆಯನ್ನು ನಾವು ಪ್ರಧಾನವೆಂದು ಮಾತ್ರ ಭಾವಿಸುತ್ತೇವೆ. ನಾವು ಇಟ್ಟುಕೊಳ್ಳಬೇಕಾದ ಬದ್ಧತೆಯು ಯಾವುದು ಎನ್ನುವುದು ಎನ್ನುವುದು ಮಾತ್ರ ನಮ್ಮ ಆಯ್ಕೆಗೆ ಸಂಬಂಧಿಸಿದೆಯೆಂದು ಸಾರ್ತ್ರೆಯು ಹೇಳುತ್ತಾನೆ.

ಸಾರ್ತ್ರೆಯು ಅಹಂ (ಇಗೋ). ನಾನು (ಐ) ಮತ್ತು ಸ್ವಂತಿಕೆ (ಸೆಲ್ಫ್) ಅನ್ನುವುದನ್ನು ವರ್ಗೀಕರಿಸುತ್ತಾನೆ.

ಇದನ್ನು ನಾವು ಆತ್ಮ ಪ್ರಜ್ಞೆ ಅಹಂ ಮತ್ತು ವ್ಯಕ್ತಿಯ ಅನನ್ಯತೆಯೆಂದೂ ಹೇಳಬಹುದು. ಇದು ನನಗೆ ಬೇಕು ಎನ್ನುವುದು ಸ್ವಾತಂತ್ರ್ಯವಾಗಿರಬಹುದು ಆದರೆ ಅದರಿಂದ ಅವರು ಸ್ವಾತಂತ್ರ್ಯವನ್ನು ಪಡೆದುಕೊಂಡಂತೆ ಆಗುವುದಿಲ್ಲ. ಆಗ ಅದು ನಮ್ಮ ಅಪೇಕ್ಷೆ ಮಾತ್ರವೇ ಆಗಿರುತ್ತದೆ. ಅಹಮಿಕೆಯೆನ್ನುವುದು ಎಲ್ಲರಿಗೂ ಇರುತ್ತದೆ. ಆದರೆ ಅವುಗಳ ಸ್ವರೂಪ ಮಾತ್ರ ಬೇರೆ. 'ನಾನು'ಎನ್ನುವುದು ಮೂಲಭೂತವಾಗಿ ಅಹಮಿಕೆಯ ಪರಿಣಾಮವೂ ಆಗಿರುತ್ತದೆ.

ಇದಕ್ಕೆ ಪೂರಕವಾಗಿ ಸಾರ್ತ್ರೆಯು ಮತ್ತೊಂದು ಅಂಶವನ್ನು ಹೇಳುತ್ತಾನೆ. ಅದು ಶ್ರೇಣೀಕರಣಕ್ಕೆ ಸಂಬಂಧಪಟ್ಟಂತೆ ಇದೆ. ಶ್ರೇಣೀಕರಣವು ಯಾವಾಗಲೂ ಒಂದು ಸಮಾಜಕ್ಕೆ ಶಾಪವೇ ಆಗಿರುತ್ತದೆ. ಸಮಾಜದ ನಡುವೆ ಇರುವ ಈ ರೀತಿಯ ವರ್ಗೀಕರಣವು ತಾರತಮ್ಯ ನೀತಿಯನ್ನು ಅನುಸರಿಸುತ್ತದೆ. ಮತ್ತು ವರ್ಗೀಕರಣದಿಂದ ಮನುಷ್ಯನನ್ನು ಬೇರೆ ಬೇರೆ ಮಾಡಲಾಗುತ್ತದೆ. ಇದರ ಹಿಂದೆ ನಾನು ಬೇರೆ ಅವನು ಬೇರೆಯೆಂಬ ಕಲ್ಪನೆಯು ಮಾತ್ರವೇ ಇರುತ್ತದೆ.

ಇಲ್ಲಿಯೇ ಮತ್ತೊಂದು ವಿಷಯವನ್ನು ನಾವು ಗಮನಿಸಬಹುದು-ಸ್ವಾತಂತ್ರ್ಯ ಮತ್ತು ಅಹಂ ಈ ಎರಡನ್ನು ನಾವು ಯೋಚಿಸಿದರೆ ಸ್ವಾತಂತ್ರ್ಯವೆನ್ನುವುದು ಮುಖ್ಯವಾದುದು. ತಾನು ಏನು ಅವನು ಏನು ಎಂಬುದರ ತಿಳುವಳಿಕೆಯು ಇಲ್ಲದೇ ಹೋಗಬಹುದು. ಯಾರಿಗೆ ತಾನು ಪರಾಶ್ರಿತನಾಗಿದ್ದೇನೆ ಎಂಬ ತಿಳಿವಳಿಕೆಯು ಇರುವುದಿಲ್ಲವೋ ಅವರ ಅರಿವಿನ ಪ್ರಶ್ನೆಯು ಭಿನ್ನ. 'ಸ್ವಂತಿಕೆ' 'ಈಗೋ' ಹಾಗೂ 'ಅನನ್ಯತೆ' ಇಂಥ ಸಂದರ್ಭಗಳಲ್ಲಿ ಬೇರೆಯಾಗಿರುತ್ತವೆ. ನಾನು

ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದರ ತಿಳುವಳಿಕೆಯೂ ಅಷ್ಟೆ ಮುಖ್ಯ. ಹಾಗೆ ನೋಡುವುದಿದ್ದರೆ ಏನನ್ನೂ ಆಯ್ಕೆ ಮಾಡದಿರುವುದೇ ಆಯ್ಕೆಯೂ ಆಗಿಬಿಡಬಹುದು. ಈ ಆಯ್ಕೆಯು ಕೂಡಾ ಅಷ್ಟು ಸುಲಭವಲ್ಲ. ಈ ದೃಷ್ಟಿಯಿಂದಲೇ ಸಾರ್ತ್ರೆಯು ಅಸ್ತಿತ್ವವನ್ನು ಕುರಿತು ಹೇಳುವಾಗ ಅಸ್ತಿತ್ವ ಎನ್ನುವುದು ಬಹಳ ಮುಖ್ಯವೆಂದು ಹೇಳುತ್ತಾನೆ.

ಹಾಗೆಯೇ ನಾವು ಇಲ್ಲಿ ನಮ್ಮ ಸ್ವಾತಂತ್ರ್ಯವನ್ನು ಕುರಿತು ಯೋಚಿಸಬೇಕಾಗುತ್ತದೆ. ಸ್ವಾತಂತ್ರವನ್ನು ಕಾಪಾಡಲೂ ನಾವು ಕಾಯಬೇಕಾಗುತ್ತದೆ. ಅದು ಸರಳವಲ್ಲ. ನಾವು ನಮ್ಮ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು ಎಂದರೆ ಅದು ನಮ್ಮ ಅನನ್ಯತೆಯನ್ನು ಸ್ಥಾಪಿಸಿಕೊಳ್ಳುವುದೂ ಹೌದು. ಸ್ವಂತಿಕೆ ಮತ್ತು ಅನನ್ಯತೆಯೆಂದರೆ ನಾವು ಆಗುವುದೇ ಹೊರತು ಮತ್ತೇನೂ ಅಲ್ಲವೆನ್ನವುದು ಗಮನಾರ್ಹ. ಇಲ್ಲಿ ನಾವು ಗಮನಿಸಬೇಕಾದ್ದು 'ಆಗುವುದು'. ಇದಕ್ಕೂ 'ಇರುವುದು' ಎನ್ನುವುದಕ್ಕೂ ವ್ಯತ್ಯಾಸವಿದೆ. ಆಗುತ್ತಲೇ ಇರುವುದು ಕೂಡಾ ಬಹಳ ಮುಖ್ಯ. ಇರುವುದು ಎಂದರೆ ಹೇಗಿದ್ದೇವೆಯೋ ಅದೇ ರೀತಿ. ಆದರೆ ಆಗುವುದು ಎಂದರೆ ನಾವು 'ಆಯ್ಕೆ' ಮಾಡಿಕೊಂಡಿರುವುದು. ಇದನ್ನು ನಮ್ಮ ಆಯ್ಕೆಯ ಸ್ವಾತಂತ್ರ್ಯವೆಂದು ಹೇಳುತ್ತೇವೆ. ಯಾವಾಗ ಆಯ್ಕೆಯನ್ನು ಮಾಡಿಕೊಂಡಿರುತ್ತೇವೆಯೋ ಆಗ ಅದರ ಜವಾಬ್ದಾರಿಯೂ ನಮ್ಮದೇ ಆಗಿರುತ್ತದೆ. ಇದಕ್ಕೆ ಅಂದರೆ ನಾವು ಆಯ್ಕೆಯನ್ನು ಮಾಡಿಕೊಂಡದ್ದಕ್ಕೆ ದೇವರನ್ನು ದೂಷಿಸಿ ಫಲವಿಲ್ಲ. ಅನೇಕರು ಆಯ್ಕೆಯನ್ನು ಮಾಡಿಕೊಂಡಿರುತ್ತಾರೆ. ಅದರ ಸ್ವಾತಂತ್ರವನ್ನು ಅನುಭವಿಸುತ್ತಾರೆ. ಆದರೆ ಸಮಸ್ಯೆಯು ಬಂದಾಗ ಅದಕ್ಕೆ ವಿಧಿಯನ್ನು ದೂಷಿಸುತ್ತಾರೆ. ಇದನ್ನು ಇನ್ನಷ್ಟು ಸರಳಗೊಳಿಸಬಹುದು. ನಾವು ಮದುವೆಯನ್ನು ಆಗುವಾಗ ಗಂಡನ್ನು ಅಥವಾ ಹೆಣ್ಣನ್ನು ಆಯ್ಕೆ ಮಾಡಿಕೊಂಡಿರುತ್ತೇವೆ. ಈ ಆಯ್ಕೆಯು ನಮ್ಮದೇ. ಒಂದು ಸಾಂಪ್ರದಾಯಿಕವಾಗಿ ತಂದೆ ತಾಯಂದಿರು ತೋರಿಸಿದ ಗಂಡನ್ನು, ಅಥವಾ ಹೆಣ್ಣನ್ನು ಮದುವೆಯಾದೆವು ಎಂದು ಇಟ್ಟುಕೊಳ್ಳೋಣ-ಆಗ ನಾವು ಆಯ್ಕೆಯನ್ನು ಪಾಲಕರಿಗೆ ಬಿಡುತ್ತೇವೆ-ಮುಂದೆ ಏನಾದರೂ ಸಮಸ್ಯೆಯು ಬಂದರೆ ನಾವು 'ಆಯ್ಕೆಯು ನನ್ನದು ಆಗಿರಲಿಲ್ಲ. ಆದುದರಿಂದ ಸಮಸ್ಯೆಯನ್ನು ಬಗೆ ಹರಿಸುವುದು ಪಾಲಕರ ಜವಾಬ್ದಾರಿ' ಜವಾಬ್ದಾರಿಯೂ ನಮ್ಮದಲ್ಲ. ತನ್ನ ಒಪ್ಪಿಗೆಯಿಲ್ಲದ ಮದುವೆಯಲ್ಲಿ ಏನಾಗುತ್ತದೆ? ಅದು ದೇಹ ಮತ್ತು ಮನಸ್ಸಿನ ಮೇಲೆ ಪರಿಣಾಮವನ್ನು ಬೀರುತ್ತದೆ. ಈಗ ಇದರ ಮತ್ತೊಂದು ಸಂಗತಿಯನ್ನು ನಾವು ಗಮನಕ್ಕೆ ತಂದು ಕೊಳ್ಳಬಹುದು-ಅದು ಲವ್ ಮ್ಯಾರೆಜಿಗೆ ಸಂಬಂಧ ಪಟ್ಟಿದೆ. ಲವ್ ಮ್ಯಾರೆಜಿನಲ್ಲಿ ಆಯ್ಕೆಯೂ ನಮ್ಮದೇ. ಅದರ ಜವಾಬ್ದಾರಿಯೂ ನಮ್ಮದೇ. ಸಾಂಸಾರಿಕ ಕಷ್ಟ ಬಂದರೆ ನಾವು ಹೇಳುವುದು ಇದು ನನ್ನ ಹಣೆಬರ. ವಿಧಿವಾದದ ಒಂದು ನಮೂನೆಯು ಇದು. ವಿಧಿವಾದಿಗಳಲ್ಲವಾದರೆ ನಾವು ಹೇಳುವುದು ಹೀಗೆ-'ಇದರಲ್ಲಿ ಬಂದ ಸಮಸ್ಯೆಯೂ ನನ್ನದೇ. ಇದರ ಹೊಣೆಗಾರಿಗೆಯೂ ನನ್ನದೇ ನಾನು ಇದನ್ನು ಹೊರುತ್ತೇನೆ.' ಇಂಥಾ ಸಂದರ್ಭದಲ್ಲಿ ಆಯ್ಕೆ ಮತ್ತು ಸ್ವಾತಂತ್ರ್ಯ ಎಂದು ಹೇಳುತ್ತೇವೆ. ಇಲ್ಲಿರುವುದು ಜವಾಬ್ದಾರಿಯ ವರ್ಗಾವಣೆಯ ತಂತ್ರ. ಸ್ವಾತಂತ್ರ್ಯವು ನಮ್ಮದಲ್ಲ, ಅದು ಮಾತ್ರವೇ ಇರುವುದಿಲ್ಲ-ಜೊತೆಗೆ ಜವಾಬ್ದಾರಿಯೂ ಇರುತ್ತದೆ. ಆದುದರಿಂದ ಇಲ್ಲಿ ದೇವರ ಮೇಲೆ ಭಾರ ಹಾಕುವ ಪ್ರಶ್ನೆ ಬರುವುದಿಲ್ಲ. ನಾವು ನಮ್ಮ ಜವಾಬ್ದಾರಿಯನ್ನು ತಿಳಿದುಕೊಂಡಾಗ ಮಾತ್ರ ಹೊಣೆಯನ್ನು ಹೊತ್ತುಕೊಳ್ಳುತ್ತೇವೆ. ಇದು ನಮ್ಮ ಅಸ್ತಿತ್ವದ ಪ್ರಶ್ನೆಯೂ ಹೌದು. ಸಂಪೂರ್ಣವಾದ ಸ್ವಾತಂತ್ರ್ಯದ ನಿಲುವು ಅಸ್ತಿತ್ವವಾಗಿರುತ್ತದೆ.

ಹಾಗೆಂದು ನಾವು ಯಾವುದನ್ನೂ ಪೂರ್ವ ನಿಯೋಜನೆ ಮಾಡುವಂತೆಯೂ ಇಲ್ಲ. ಮುಂದೆ ಏನು ಅನ್ನುವುದು ನಮ್ಮ ನಮ್ಮ ನಿಶ್ಚಯಕ್ಕೆ ಮಾತ್ರವೇ ಸಂಬಂಧ ಪಟ್ಟಿಲ್ಲ. ನಾವು ಯಾವುದನ್ನೂ ಮೊದಲೇ ನಿಶ್ಚಯಿಸಲು ಬರುವುದಿಲ್ಲ. ಮುಂದೆ ಏನೋ ಆಗುತ್ತದೆಯೆಂದು ಇವತ್ತು ನಿಶ್ಚಯಿಸುವುದು ಕೂಡಾ ಕಷ್ಟವೆಂದು ಅಸ್ತಿತ್ವವಾದಿಗಳ ನಿಲುವು. ಮುಂದೆ ಆಗುವುದು ನಮ್ಮ ಕೈಯಲ್ಲಿ ಇಲ್ಲ. ನಮ್ಮ ಚಟುವಟಿಕೆ ಮತ್ತು ನಾವು ಆಗುವುದು ಯಾವಾಗಲೂ ಪ್ರಶ್ನೆಯೇ ಆಗಿರುತ್ತದೆ. ಹುಟ್ಟಿದ ಕೂಡಲೇ ಯಾರೂ ಒಳ್ಳೆಯವರು, ಕೆಟ್ಟವರು, ಹೀಗೆ ಏನೋ ಆಗಿರುವುದಿಲ್ಲ. ಅದು ಪೂರ್ವ ನಿಶ್ಚಿತವೂ ಅಲ್ಲ. ಇಲ್ಲಿ ನಮ್ಮ ಹೊಣೆಗಾರಿಕೆಯ ಪ್ರಶ್ನೆ ಬರುತ್ತದೆ. ನಮಗೆ ನಮ್ಮ ಹೊಣೆಯು ನಮ್ಮದೇ ಎಂಬುದರ ಅರಿವು ಇಲ್ಲದೇ ಹೋದರೆ ಕಷ್ಟ.

ತಾನು ಏನು ಮಾಡಬೇಕು ಎಂಬುದರ ಅರಿವು ನಮಗಿರಬೇಕು. ಮತ್ತು ತಾನು ಏನು ಮಾಡುತ್ತಿದ್ದೇನೆ ಎಂಬುದರ ಹೊಣೆಗಾರಿಕೆಯೂ ನಮ್ಮದೇ. ಅದಕ್ಕೆ ಬೇರೆಯವರನ್ನು ಹೊಣೆಗಾರರನ್ನಾಗಿ ಮಾಡುವುದು ಅಸಂಗತ. ಹಾಗೆ ನೋಡುವುದಿದ್ದರೆ ನಮ್ಮನ್ನು ನಾವೇ ರೂಪಿಸಿಕೊಳ್ಳಬೇಕಾಗುತ್ತದೆ. ಕ್ರಿಯೆ, ನಿಶ್ಚಯ, ಜವಾಬ್ದಾರಿ ಎಲ್ಲವು ನಮ್ಮದೇ ಆಗಿರುತ್ತದೆ.

ಇದನ್ನು ನಾವು ಬರಿಯ ನಿರಾಶೆಯೆಂದು ಭಾವಿಸಬೇಕಾಗಿಲ್ಲ. ಖಚಿತ ನಿಶ್ಚಯವೂ ಇಲ್ಲದೆ ನಾವು ಏನೂ ಮಾಡುವಂತಿಲ್ಲ.

ಆದರ್ಶವು ಅಮೂರ್ತವಾಗಿರಬಾರದು. ನಾವು ಕೈಗೊಳ್ಳುವ ಅನೇಕ ವ್ಯಾಪಾರಗಳು ಅಮೂರ್ತವಾದಷ್ಟೂ ತೊಡಕಾಗುವುದೂ ಅಷ್ಟೇ ನಿಜ. ಹಾಗೇ ವ್ಯಕ್ತಿಯನ್ನು ಸ್ವಾತಂತ್ರ್ಯಗೊಳಿಸದೇ ನಾವು ಏನೂ ಮಾಡುವಂತಿಲ್ಲ. ಈ ದೃಷ್ಟಿಯಿಂದ ಸ್ವ ಇಚ್ಚೆ ಎನ್ನುವುದೂ ಅಷ್ಟೇ ಮುಖ್ಯ. ಇಲ್ಲಿ ಇಚ್ಚೆಯೆನ್ನುವುದನ್ನು ನಾವು ಸರಳ ಅರ್ಥದಲ್ಲಿ ತೆಗೆದುಕೊಂಡರೆ ಕೇವಲ ಬಯಕೆ ಎನ್ನುವ ಅರ್ಥ ಮಾತ್ರ ಬರುತ್ತದೆ. ಸ್ವಾತಂತ್ರ್ಯವನ್ನು ಪಡೆಯುವುದು ನಮ್ಮ ಇಚ್ಚೆ ಆಗಿರಬಹುದು. ಆದರೆ ಅದರ ಅರಿವು ನಮಗೆ ಇರಬೇಕು. ಅದು ಮುಖ್ಯ. ಹಾಗೆ ನೋಡುವುದಿದ್ದರೆ ಅನೇಕರು ತಿಳಿದಿರುವಂತೆ ಆಯ್ಕೆ ಮತ್ತು ಸ್ವಾತಂತ್ರ್ಯ ಎರಡೂ ಬೇರೆ ಬೇರೆಯಲ್ಲ. ನಾವು ಹಾಗೆ ತಿಳಿದಿದ್ದೇವೆ. ಒಂದು ದೃಷ್ಟಿಯಿಂದ ಸ್ವಾತಂತ್ರ್ಯ ಮತ್ತು ಸಮಾನತೆಯು ಜೊತೆಗೆ ಇರಬೇಕಾಗುತ್ತದೆ.

ತಾನು ಏನಾಗಿರಬೇಕೆಂಬುದು ಬಹಳ ಮುಖ್ಯ. ನಾವು ಏನಾಗಿದ್ದೇವೆ ಮತ್ತು ನಾವು ಏನಾಗಬೇಕಿತ್ತು ಎನ್ನುವುದರ ನಡುವೆ ಬಹಳ ಅಂತರವಿದೆ.

ಇದರ ಕುರಿತು ಹೇಳುವಾಗ ನಾವು ಮತ್ತೊಂದು ಅಂಶವನ್ನು ಗಮನದಲ್ಲಿ ಇಡಬೇಕು. ನಾವು ಏನಾಗಬೇಕು ಎನ್ನುವುದು ನಮ್ಮ ಆದರ್ಶ. ಈ ಆದರ್ಶವೂ ನಮ್ಮ ವಾಸ್ತವತೆಗೆ ಅಥವಾ ನಮ್ಮ ಸಹಜತೆಗೆ ಹತ್ತಿರವಾದಷ್ಟು ಅನುಕೂಲ ಹೆಚ್ಚು. ನಾವು ಏನಾಗಿದ್ದೇವೆ ಎನ್ನುವುದು ನಮ್ಮ ವಾಸ್ತವ. ನಾವು ಏನಾಗಬೇಕು ಎನ್ನುವುದು ನಮ್ಮ ಆದರ್ಶ. ಇವುಗಳನ್ನು ನಾವು ಬೇರೆ ಮಾಡುವಂತಿಲ್ಲ. ಒಂದು ಸಂದರ್ಭದಲ್ಲಿ ಸಾರ್ತ್ರೆ ಹೀಗೆ ಹೇಳಿದ. ಅವನ ಮಾತು ಕೀನ್ ನಾಟಕದಲ್ಲಿ ಬರುತ್ತದೆ. 'ಸಹಜತೆ ಅನ್ನುವುದು ಒಂದು ದೊಡ್ಡ ಕಲೆಯ ಕಳಪೆ ನಕಲು.'

ವ್ಯಕ್ತಿವಾದ, ಪರಕೀಯತೆ, ಸಂಗ ದೂರವೆನ್ನುವುದು ತಾತ್ವಿಕವಾಗಿ ಮುಖ್ಯ ಪ್ರಶ್ನೆಯಾಗಿದೆ. ವ್ಯಕ್ತಿಯ ಪರಕೀಯತೆ ಎನ್ನುವುದು ಶುರುವಾಗುವುದು ಬರಿಯ ಏಲಿಯನೇಶನ್ನಿನಿಂದ ಅಲ್ಲ.

ಸಾರ್ತ್ರೆ ವ್ಯಕ್ತಿವಾದವನ್ನು ವ್ಯಾಖ್ಯೆ ಮಾಡುವುದು ಕೇವಲ ವ್ಯಕ್ತಿ ಮಟ್ಟದಲ್ಲಿ ಅಲ್ಲ. ಪರಕೀಯತೆ, (ಏಲಿಯನೇಶನ್)ಅಂದರೆ ನಾವು ಸ್ವತಃ ಮಾಡಿಕೊಂಡದ್ದು ಅಲ್ಲ. ಮತ್ತೂ ಹೇಳಬೇಕೆಂದರೆ ಪರಕೀಯತೆಯನ್ನು ಕೇವಲ ವ್ಯಕ್ತಿ ಮಟ್ಟದಲ್ಲಿ ಮಾತ್ರ ಅನುಭವಿಸಿದಾಗ ಅದು ಕೇವಲ ಏಕಾಂತವಾಗುತ್ತದೆ. ಸಾರ್ತ್ರೆಯ ಈ ಮಾತನ್ನು ಕೆಲವರು ತಪ್ಪು ಅರ್ಥ ಮಾಡಿಕೊಂಡವರೂ ಇದ್ದಾರೆ. ವ್ಯಕ್ತಿ ಮಟ್ಟದ ಪರಕೀಯತೆಯು ಮನಸ್ಸಿನಿಂದಲೇ ಹುಟ್ಟಿರಬಹುದು. ಇದಕ್ಕಿಂತ ಭಿನ್ನವಾದುದು ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಕೀಯತೆ. ಸಮಾಜವೇ ಕೆಲವೊಮ್ಮೆ ಪರಕೀಯತೆಯನ್ನು ಸೃಷ್ಟಿ ಮಾಡುತ್ತದೆ. ಅದು ಬಂಡವಾಳವಾದದಿಂದಲೂ ಇರಬಹುದು. ವಿಜ್ಞಾನಕ್ಕೆ ಒಂದು ಜನರಲ್ ಲಾ ಎನ್ನುವುದು ಇದೆ. ಈ ರೀತಿಯ ಜನರಲ್ ಲಾವನ್ನು ಪರಕೀಯತೆಗೆ ಹಾಗೆಯೇ ಅನ್ವಯಿಸುವಂತಿಲ್ಲ. ಯಾವಾಗಲೂ ಜನರಲ್ ಲಾ ಎನ್ನುವುದು ಕೆಲವು ಸಾಮಾನ್ಯವಾದ ಲಾ ವನ್ನು ಅವಲಂಬಿಸಿರುತ್ತದೆ.

ಇದನ್ನು ಹೇಳುವಾಗ ಸಾರ್ತ್ರೆಯು ಸ್ವಾತಂತ್ರ, ಜವಾಬ್ದಾರಿ, ವಿಶ್ವಾತ್ಮಕ ನ್ಯಾಯದ ಕುರಿತು ಹೆಚ್ಚು ಮಾತಾಡುತ್ತಾನೆ. ಸ್ವಾತಂತ್ರ್ಯವೆನ್ನುವುದು ಅನುಭವಕ್ಕೆ ಸಂಬಂಧ ಪಟ್ಟಿದೆ. ಜವಾಬ್ದಾರಿ ಮತ್ತು ಸ್ವಾತಂತ್ರ್ಯಕ್ಕೆ ನಾವು ಭಾವಿಸಿದ್ದಕ್ಕಿಂತ ಹೆಚ್ಚು ಅರ್ಥವಿದೆ. ಸಾರ್ತ್ರೆ ಹೇಳುತ್ತಾನೆ - ಸ್ವಾತಂತ್ರವೆನ್ನುವುದು ದೊಡ್ಡದು. ಅನುಭವಿಸುವುದು ತಿಳಿದಿರಬೇಕು. ಇದನ್ನು ನಾವು ಅರ್ಥ ಮಾಡಿಕೊಳ್ಳಬೇಕಾದರೆ ಜವಾಬ್ದಾರಿ ಎಂಬ ಪದವನ್ನೂ ಜೊತೆಗೆ ಸೇರಿಸಿಕೊಳ್ಳಬೇಕು. ನಾವು ಸ್ವಾತಂತ್ರ್ಯವನ್ನು ಪಡೆದುಕೊಳ್ಳುವುದು ಅಂದರೆ ಇನ್ನೊಬ್ಬರಿಗೆ ಆಜ್ಞೆಯನ್ನು ನೀಡುವುದೂ ಅಲ್ಲ. ಹಾಗೆ ನೋಡುವುದಿದ್ದರೆ ಆಜ್ಞೆ ಎನ್ನುವುದು ಒಂದು ರೀತಿಯಿಂದ ಹಿಂಸೆಯೇ ಆಗಿರುತ್ತದೆ.

ಇಲ್ಲಿ ಮತ್ತೊಂದು ಪ್ರಶ್ನೆಯು ಬರುತ್ತದೆ-ಅದು ಅಸ್ತಿತ್ವಕ್ಕೆ ಸಂಬಂಧಪಟ್ಟಿರುವುದು. ಅಸ್ತಿತ್ವ ಎನ್ನುವುದು ಮನಸ್ಸಿಗೂ ಸಂಬಂಧ ಪಟ್ಟಿದೆ. ಅಸ್ತಿತ್ವ ಎನ್ನುವುದು ಕೇವಲ ನಮ್ಮ ಅನುಭವಕ್ಕೆ ಸಂಬಂಧ ಪಟ್ಟಿರುವುದಾದರೂ ಅಸ್ತಿತ್ವ ಬಾಹ್ಯದ ನಿಯಂತ್ರಣಕ್ಕೂ ಒಳಪಟ್ಟಿದೆ. ಅಸ್ತಿತ್ವ ಎನ್ನುವುದು ಕೇವಲ ನಮ್ಮ ಮನಸ್ಸಿಗೆ ಸಂಬಂಧ ಪಟ್ಟಿರುವುದೂ ಅಲ್ಲ. ಹಾಗೆಯೇ ನಮ್ಮ ಆಲೋಚನೆಗೆ ಮತ್ತು ವಸ್ತುವಿಗೆ , ಘಟನೆಗಳಿಗೆ ಸಂಬಂಧವಿದೆ. ಒಂದು ಅರ್ಥದಲ್ಲಿ ಆಲೋಚನೆಯೂ ಕೂಡಾ ತಾತ್ವಿಕವೇ.

ಸಾರ್ತ್ರೆಯು ಮತ್ತೊಂದು ವಿಷಯವನ್ನು ಪ್ರಸ್ತಾಪಿಸುತ್ತಾನೆ-ಅದು ಸೈಕಾಲಾಜಿಕಲ್ ಇಗೋ ಎನ್ನುವುದಕ್ಕೆ ಸಂಬಂಧ ಪಟ್ಟಿರುವುದು. ನಮ್ಮ ಸೈಕಾಲಜಿಕಲ್ ಇಗೋ ಬೇರೆ. ಮಾನಸಿಕ ಅಹಮಿಕೆಯು ಬೇರೆ. ಇದು ನಮ್ಮ ಅಸ್ತಿತ್ವವನ್ನು ಭಿನ್ನವೆಂದು ಹೇಳುತ್ತದೆ. ಹಾಗೆಯೇ ಅಸ್ತಿತ್ವ ಮತ್ತು ಇಗೋಕ್ಕೆ ಸಂಬಂಧವಿದೆ. ಮನಸ್ಸಿನ ಅವಲಂಬನೆ ನಮ್ಮ ಇಗೋಕ್ಕೆ ಸಂಬಂಧ ಪಟ್ಟಿದೆ ಅನ್ನುವುದು ಗಮನಾರ್ಹ.

ಮತ್ತೊಂದು ಪ್ರಶ್ನೆಯು ಬರುತ್ತದೆ-ವಿಶ್ವಾತ್ಮಕ ಅನ್ನುವುದು 'ಡೈರೆಕ್ಟಿಲಿ ಗಿವನ್ ಟು ಅಸ್' ವಿಶ್ವದ ಗ್ರಹಿಕೆಯು ನಮ್ಮ ಪ್ರಜ್ಞೆಗೆ ಸಂಬಂಧಿಸಿದ್ದು. ಈ ಜಗತ್ತಿನಲ್ಲಿರುವ ಟೊಳ್ಳುತನವನ್ನು ಅರ್ಥಮಾಡಿಕೊಳ್ಳುವ ಶಕ್ತಿಯು ನಮಗಿದೆ. ಅದರ ಅರಿವು ನಮಗೆ ಇರಬೇಕು ಎನ್ನುವುದು ಸಾರ್ತ್ರೆಯ ಮೂಲಭೂತವಾದ ನಿಲುವು.

ಅನ್ಯಾಯಗಳಲ್ಲಿ ಸಣ್ಣದು ಮತ್ತು ದೊಡ್ಡದು ಎಂಬ ಪ್ರಶ್ನೆಯೇ ಇಲ್ಲ. ಅನ್ಯಾಯ ಯಾವಾಗಲೂ ಅನ್ಯಾಯವೇ ಆಗಿರುತ್ತದೆ. ಆದುದರಿಂದ ನಮ್ಮ ಅಸ್ತಿತ್ವ ಮತ್ತು ನ್ಯಾಯ ಮತ್ತು ಅನ್ಯಾಯದ ಪ್ರಶ್ನೆಯು ಜಟಿಲವಾಗಿರುತ್ತದೆ. ನಿಜ ಮತ್ತು ಅದರ ಪ್ರಸ್ತುತಿಗೂ ಇರುವ ಸಂಬಂಧವೂ ಗಮನಾರ್ಹ. ನಿಜವು ವಾಸ್ತವದಲ್ಲಿ ಬೇರೆ ರೀತಿಯಲ್ಲಿ ಹಾಜರಾಗುತ್ತದೆ.

ಆದುದರಿಂದ ನಿಜದ ಸಾರ (ಎಸೆನ್ಸ್) ಮತ್ತು ಅದರ ಅಸ್ತಿತ್ವ (ಎಕ್ಸಿಸ್ಟ್) ಬಹಳ ಮುಖ್ಯ. ವಾಸ್ತವ ಮತ್ತು ಅದರ ಸಾಧ್ಯತೆಯು ಭಿನ್ನ. ಯಾವುದೋ ಒಂದು ವಿಷಯವನ್ನು ಕಲ್ಪಿಸಿಕೊಳ್ಳುವುದು ಎಂದರೆ ಅದು ಮನಸ್ಸಿನ ಸಮಸ್ಯೆ.

ಇಲ್ಲಿ ನಮ್ಮ ಅಸ್ತಿತ್ವ ಮತ್ತು ಸಾಧ್ಯತೆಯು ಭಿನ್ನವಾಗಿರುತ್ತದೆ. ಯುನಿರ್ವಸಲ್ ಅನ್ನುವುದು ಒಬ್ಬ ವ್ಯಕ್ತಿಯನ್ನು ಅವಲಂಬಿಸಿಕೊಂಡಿಲ್ಲ. ವಿಶ್ವದ ಅಮೂರ್ತತೆ-ವ್ಯಕ್ತಿಯ ವಿಶಿಷ್ಟತೆಗಳ ನಡುವೆ ದ್ವಂದ್ವವಿದೆಯೆನ್ನುವುದನ್ನು ನಾವು ಗಮನಿಸಬೇಕು. ವಿಶ್ವದ ಅಮೂರ್ತತೆಯ ಕುರಿತು ನಾವು ಪ್ರಸ್ತಾಪಿಸುವಾಗ ವ್ಯಕ್ತಿಯ ವಿಶಿಷ್ಟತೆಯು ಅಷ್ಟು ಮುಖ್ಯವಲ್ಲವೆಂಬುದು ಗಮನಾರ್ಹ.

ವಿಶ್ವಾತ್ಮಕತೆಯೆನ್ನುವುದು ಬಹಳ ಟೆಕ್ನಿಕಲ್ ಕೂಡಾ ಅಲ್ಲ. ವಿಶ್ವಾತ್ಮಕತೆಯನ್ನು ಒಂದು ಅರ್ಥದಲ್ಲಿ(ಸೆನ್ಸ್‌ನಲ್ಲಿ) ಕರೆಯಲು ಬರುವುದಿಲ್ಲ. ಆದುದರಿಂದ ಅದರ ಅರ್ಥವು ಭಿನ್ನವಾಗುತ್ತಾ ಹೋಗುತ್ತದೆ. ಯಾವುದನ್ನು ಲೋಕದ ದೃಷ್ಟಿಯಿಂದು ಕರೆಯುತ್ತೇವೆಯೋ ಅದು ಯಾವಾಗಲೂ ಹಾಗೆಯೇ ನಮ್ಮ ತಿಳಿಯುವಿಕೆಗೆ ಸಂಬಂಧಪಟ್ಟಿರುತ್ತದೆ. ತಿಳಿಯುವಿಕೆ ಎನ್ನುವುದು ಮನಸ್ಸಿಗೆ ಸಂಬಂಧಿಸಿದ್ದು. ಆದರೆ ಅದು ನಮ್ಮ ಮನಸ್ಸನ್ನು ಆವರಿಸಿಕೊಳ್ಳುವ ಕ್ರಮ, ಉಳಿದ ಸಂಗತಿಗಳಿಂತ ಬೇರೆಯಾಗಿರುತ್ತದೆ. ತಿಳಿಯುವಿಕೆ ಅಂದರೆ ನಾವು ಗ್ರಹಿಸಿಕೊಳ್ಳುವುದೂ ಹೌದು. ತಿಳಿಯುವುದು ಎಂದರೆ ಅದು ನಮ್ಮ ಪ್ರಜ್ಞೆಗೆ ಸಂಬಂಧಿಸಿದ ವಿಚಾರ. ಪ್ರಜ್ಞೆಯಲ್ಲಿ ಬರುವ ಅನೇಕ ಸಂಗತಿಗಳಿಗೆ ನಿಜವಾದ ರಚನೆಯೆನ್ನುವುದು ಇರುವುದಿಲ್ಲ. ಸಿನಿಮಾದಂತೆ ಅದಕ್ಕೆ ಒಂದು ಪ್ರೊಜೆಕ್ಟರ್ ಇರುವುದಿಲ್ಲ. ಅವು ಚಿತ್ರ ರಹಿತವೂ (ಫೀಚರ್‌ಲೆಸ್) ಕೂಡಾ ಆಗಿರಬಹುದು. ಎಲ್ಲಾ ಕಂಟೆಂಟ್ ಬರುವುದು ಹೊರಗಿನಿಂದಲೇ ಆದರೆ ಔಟ್ಲೈಡ್ ಅನ್ನುವುದು ನಮ್ಮ ಸಂವೇದನೆಯಿಂದಲೇ ಬರುತ್ತದೆ. ನಮ್ಮ ಸಂವೇದನೆಗೆ ಸಂಬಂಧಪಟ್ಟಂತೆ ಮತ್ತೊಂದು ಸಂಗತಿಯನ್ನು ಇಲ್ಲಿ ಹೇಳ ಬಹುದು. ವಿಷಯ-ವಸ್ತು, ವಾಸ್ತವ-ಭ್ರಮೆ, ಕಲ್ಪನೆ-ಅಭಿವ್ಯಕ್ತಿ, ಫ್ಯಾಂಟಸಿ-ವಾಸ್ತವ ಇವು ನಮ್ಮ ಎದುರು ಇರುವ ದ್ವಂದ್ವಗಳೇ ಆಗಿದೆ. 'ಪ್ರೀತಿ ಅನ್ನುವುದು ಬಡವರ ಪ್ರತಿಭೆ'(ಕೀನ್ ನಾಟಕ). ಇದು ಕೀನ್ ನಾಟಕದಲ್ಲಿ ಬರುವ ಸಂಗತಿ. ಪ್ರೀತಿ ದ್ವೇಷ ಮುಂತಾದವುಗಳು ನಮ್ಮ ನಮ್ಮ ಸಂವೇದನೆಗಳು.

ನಮ್ಮ ಅಸ್ತಿತ್ವವು ಈ ವಿಷಯಗಳಿಗೆ ಸಂಬಂಧಪಟ್ಟಂತೆ ವಿಶೇಷವಾಗಿರುತ್ತದೆ. ಪ್ರೀತಿಯನ್ನು ದ್ವೇಷವನ್ನು ನಾವು ವ್ಯಕ್ತಪಡಿಸುವ ಕ್ರಮಗಳು ಭಿನ್ನ. ಈ ರೀತಿಯ ಭಾವನೆಗಳನ್ನು ನಾವು ವ್ಯಕ್ತ ಪಡಿಸುವ ಕ್ರಮಗಳು ಕೂಡಾ ಬೇರೆ. ವಿಷುವಲ್ ಅಭಿವ್ಯಕ್ತಿಯು ಅಮೂರ್ತತೆಯನ್ನು ಹಿಡಿದು ಇಡುವ ಪ್ರಯತ್ನಗಳಾಗಿವೆ. ಕೆಲವು ಸಂಗತಿಗಳಿಗೆ ವಿವರಣೆಯು ಸಿಗುವುದಿಲ್ಲ. ಹಾಗೆಯೇ ಸ್ವಯಂ ಸಂಪೂರ್ಣ (ಸೆಲ್ಫ್ ಸಫಿಶಿಯಂಟ್) ಅನ್ನುವುದು ನಮ್ಮ ಎದುರು ಇರುವ ಪ್ರಮುಖ ಸಂಗತಿಯಾಗಿದೆ.

ಕೆಲವು ಸರ್ತಿ ಜೀವನದಲ್ಲಿ ನಡೆಯುವುದಕ್ಕೆ ಕಾರಣವು ಇರಬೇಕೆಂದೇನಿಲ್ಲ. ಕಾರಣವಿಲ್ಲದೇ ನಡೆಯುವುದಕ್ಕೆ ನಾವು ಅಸಂಗತವೆಂದು ಕರೆಯುತ್ತೇವೆ. ಇದು ತತ್ವಜ್ಞಾನದಲ್ಲಿ ಬರುವಂಥದ್ದು. ಅನ್ಯದ ನಿರಾಕರಣೆ ಮತ್ತು ಸ್ವಂತದ ಚಹರೆಯೆನ್ನುವುದಕ್ಕೆ ಪಶ್ಚಿಮದ ತತ್ವಜ್ಞಾನದಲ್ಲಿ ದೊಡ್ಡ ತಳಹದಿಯಿದೆ. ಮನುಷ್ಯನು ಆಗುವುದು ಎಂದರೆ ಅವನಿಗೆ ಪ್ರಜ್ಞೆಯು ಇದೆಯೆಂದು ಮಾತ್ರ ಅರ್ಥ. ಅದು ಅವನ ಅಸ್ತಿತ್ವಕ್ಕೆ ಮಾತ್ರ ಸಂಬಂಧ ಪಟ್ಟಿರುವುದು. ಹಾಗೂ ಪ್ರಜ್ಞೆಯೆನ್ನುವುದು ಗ್ರಹಿಕೆಗೆ ಅನ್ವಯವಾಗುತ್ತದೆ. ಆದರೆ ಕೆಲವನ್ನು ನಮ್ಮ ಪ್ರಜ್ಞೆಯ ಮೇಲೆ ಹೇರಲಾಗುತ್ತದೆ.

ಇಲ್ಲಿ ಅನನ್ಯತೆಯ ಪ್ರಶ್ನೆಯೆನ್ನವುದು (ಲಾ ಆಫ್ ಐಡೆಂಟಿ) ಬಹಳ ಮುಖ್ಯ. ಸಾರ್ತ್ರೆಯ ಪ್ರಕಾರ- ಪ್ರಜ್ಞೆಯು ಕೂಡ ಪಾರದರ್ಶಕ. ಪ್ರತಿಯೊಂದು ಪ್ರತಿಕ್ರಿಯೆಗೂ ಒಂದು ಉದ್ದೇಶವು ಇರಬಹುದು ಎನ್ನುವುದು ಅವನ ನಿಲುವು.

ಸಾರ್ತ್ರೆಯ ಪ್ರಕಾರ ಜವಾಬ್ದಾರಿಯ ಜೊತೆಗೆ ಸ್ವಾತಂತ್ರವೂ ಇರುತ್ತದೆ. 'ನಾನು' 'ನನಗೆ' ಎಂದು ಹೇಳುವಾಗಲೇ ಈ ಪರಿಕಲ್ಪನೆಗಳು ಪ್ರಾರಂಭವಾಗುತ್ತವೆ. ಅಷ್ಟೇ ಅಲ್ಲ ಮನುಷ್ಯನ ಅಹಮಿಕೆಯು (ಇಗೋ) ಅವನ ಮಾನಸಿಕವಾದ ಸ್ಥಿತಿಯನ್ನು ಸೂಚಿಸುತ್ತದೆ. ಸಾರ್ತ್ರೆಯ ಪ್ರಕಾರ ಆಯ್ಕೆಯೂ ಕೂಡಾ ಇಚ್ಛೆಗೆ ಸಂಬಂಧ ಪಟ್ಟಿದೆ. ಹಾಗೆಯೇ ನಮ್ಮ ಗುಣ ಮಟ್ಟ ಮತ್ತು ನಮ್ಮ ಕ್ರಿಯೆಗೆ ಸಂಬಂಧವಿದೆ. ಸಾರ್ತ್ರೆಯ ಪ್ರಕಾರ ಇಗೋ ಮ್ಯಾಜಿಕಲ್ ನೋಶನ್ ಮಾತ್ರ. ಮನುಷ್ಯನ ಅಸ್ತಿತ್ವ ಅನ್ನುವುದಕ್ಕೆ ಸರಿಯಾದ ಚೌಕಟ್ಟು ಅನ್ನುವುದೇ (ಫ್ರೇಂ ವರ್ಕ) ಇಲ್ಲ. ಅದೇ ರೀತಿ ಈ ಜಗತ್ತಿನಲ್ಲಿ ಮನುಷ್ಯ, ಮರಗಿಡಗಳು ನಾಯಿ, ದನಗಳು, ವಿವಿಧ ಪ್ರಾಣಿಗಳು ಅಸ್ತಿತ್ವ ಪಡೆದುಕೊಂಡಿವೆ. ನಮ್ಮ ದಿನಂದಿನದ ಬದುಕಿನಲ್ಲಿ ಇರುವ ವಿನಯ, ಅವಿನಯ, ಸಿಟ್ಟು ಅಳು. ಮುಂತಾದವುಗಳನ್ನು ನಾವು ಬದಲಾಯಿಸಲು ಸಾಧ್ಯ.

ಅವುಗಳು ನಮ್ಮ ನೈತಿಕ ನಿಲುವಿಗೆ (ಎತಿಕಲ್ ವ್ಯಾಲ್ಯೂ) ಸಂಬಂಧ ಪಟ್ಟಿವೆ. ನೈತಿಕ ಮೌಲ್ಯಕ್ಕೂ ನಮ್ಮ ನೈತಿಕ ಚಟುವಟಿಕೆಗೂ (ಪ್ರಾಕ್ಟೀಸಿಗೂ) ಸಂಬಂಧವಿದೆ. ಯಾವುದನ್ನು ನಾವು ನೈತಿಕ ಮೌಲ್ಯವೆಂದು ಕರೆಯುತ್ತೇವೆಯೋ ಅದು ನಮ್ಮ ಚಟುವಟಿಕೆಯಿಂದಲೇ ತಿಳಿಯುತ್ತದೆ. ಒಳ್ಳೆಯ ಅಂಶಗಳನ್ನು ನಾವು ಹೊಗಳುತ್ತೇವೆ. ಕೆಟ್ಟ ನಡವಳಿಕೆಯನ್ನು ನಾವು ಬೈಯುತ್ತೇವೆ. ಅಂದರೆ ಇವುಗಳಿಗೂ ನಮ್ಮ ಸಾಮಾಜಿಕ ನಿಲುವುಗಳಿಗೂ ಇರುವ ಹೊಂದಾಣಿಕೆ ಸೂಕ್ಷ್ಮವಾದುದು. ನಮ್ಮ ನಿಲುವುಗಳು ನಮ್ಮ ಸಾಮಾಜಿಕ ಮತ್ತು ರಾಜಕೀಯ ಕ್ರಿಯೆಗಳಿಂದಲೇ ಬಂದಿರುತ್ತವೆ. ಹಾಗೂ ನಮ್ಮ ಕೆಲವು ಗುಣಗಳು ನಮ್ಮ ಆಯ್ಕೆಗೆ ಸಂಬಂಧಪಟ್ಟಿವೆ. ಮತ್ತೆ ಕೆಲವು ಗುಣಗಳು ನಮ್ಮ ನಿಯಂತ್ರಣದ ಆಚೆಗೆ ಇರುತ್ತದೆ. ಆದರೆ ನಮ್ಮ ಅಭಿವ್ಯಕ್ತಿಯು ಕಪಟವಾದರೆ ಅದು ನಾಟಕೀಯ ಅಷ್ಟೆ. ಯಾವಾಗ ನಾವು ನಮ್ಮ ನಿಲುವುಗಳನ್ನು ಸರಿಯಾಗಿ ವ್ಯಕ್ತಪಡಿಸುತ್ತೇವೆ ಎನ್ನುವುದು ಕೂಡಾ ಅಷ್ಟೇ ಮುಖ್ಯ. ಒಂದು ಅರ್ಥದಲ್ಲಿ ನಮ್ಮ ನಿಜವಾದ ಪ್ರಾಮಾಣಿಕ ನಿಲುವುಗಳೇ ಅಥೆಂಟಿಕ್ ಆಗಿರುತ್ತವೆ. ಮನುಷ್ಯನ ಅಸ್ತಿತ್ವವೆನ್ನುವುದು ತತ್ವಜ್ಞಾನದ ಜಿಜ್ಞಾಸೆಯೂ ಹೌದು. ಅದು ಸತ್ಯದ ಸಿದ್ಧಾಂತವನ್ನು ಹೇಳುತ್ತದೆ. ಅಸ್ತಿತ್ವದ ಪ್ರಶ್ನೆಯು ನಿರ್ದಿಷ್ಟವಲ್ಲ. ಮನುಷ್ಯ ಮೊದಲಿಗೆ ಅಸ್ತಿತ್ವವನ್ನು ಪಡೆದುಕೊಂಡಿರುತ್ತಾನೆ ಅದರ ಅನಂತರ ಅವನು ತನಗೆ ಬೇಕಾದ ಜಗತ್ತನ್ನು ಸಾಮಾಗ್ರಿಯನ್ನಾಗಿ ಮಾಡಿಕೊಳ್ಳುತ್ತಾನೆ. ಇದು ಮನಸ್ಸಿನ ಚಟುವಟಿಕೆ. ನಮ್ಮ ಗುಣಗಳಿಗೂ ನಮ್ಮ ಮಾನಸಿಕ ಸೂಚನೆಗಳಿಗೂ (ನೋಶನ್‌ಗಳಿಗೂ) ಸಂಬಂಧವಿದೆ. ಸಾರ್ತ್ರೆಯಲ್ಲಿ ನಮ್ಮ ಸಮಗತೆ ಎನ್ನುವುದು

(ಬೀಯಿಂಗ್ ಯುನೀಕ್‌ನೆಸ್) ಅನ್ನುವುದು ಬಹಳ ಮುಖ್ಯ. ನಮ್ಮ ಬಗೆಗೆ ನಮಗೇ ಸರಿಯಾದ ಅರಿವು ಅಗತ್ಯವೆನ್ನುವುದನ್ನು ಸಾರ್ತ್ರೆಯು ಪ್ರತಿಪಾದಿಸಿದ. ನಾವು ಏನಾಗಬೇಕಿತ್ತು ಅನ್ನುವುದೂ ನಮ್ಮ ಜೀವನದ ಮುಂದಿರುವ ಅರಿವು ಎಂದು ಅವನು ಹೇಳುತ್ತಾನೆ. ಇದರ ಸೂಚನೆಯು ಕಾರ್ನಾಡರ ಹಯವದನ ನಾಟಕದಲ್ಲಿ ಬರುತ್ತದೆ. ಪದ್ಮಿನಿಗೆ ಬೇಕಾಗಿರುವುದು ಸಮಗ್ರತೆಯುಳ್ಳ ಗಂಡಸು. ಅವನು ದೊರೆಯುವುದಿಲ್ಲ ಎನ್ನುವುದು ಬೇರೆ ಪ್ರಶ್ನೆ. ಅದು ಆಗುಪಿಕೆಗೆ ಸಂಬಂಧ ಪಟ್ಟದ್ದೆ. ಅದು ಅವಳಿಗೆ ಬೇಕಾಗಿದೆ. ಈ ಜಗತ್ತಿನ ನಿಜವಾದ ಸನ್ನಿವೇಶದಲ್ಲಿ ಒಬ್ಬ ವ್ಯಕ್ತಿಯೆನ್ನುವುದರ ಅರ್ಥವೂ ಬಹಳ ಮುಖ್ಯ. ಅಷ್ಟೇ ಅಲ್ಲ ನಮ್ಮನ್ನು ನಾವು ಅರ್ಥ ಮಾಡಿಕೊಳ್ಳುವುದೂ ಅಗತ್ಯ. ಧನಾತ್ಮಕ (ಪಾಸಿಟಿವ್) ಮತ್ತು ಋಣಾತ್ಮಕ (ನೆಗೆಟಿವ್) ಎನ್ನುವ ಗುಣಗಳಿರುತ್ತವೆ. ಅದನ್ನು ನಾವು ಗಮನಿಸಬೇಕು. ಇವು ನಮ್ಮ ಆಲೋಚನೆಗೆ ಸಂಬಂಧ ಪಟ್ಟದ್ದೆ. ಯಾವುದನ್ನು ನಾವು ಹೇಗೆ ಗ್ರಹಿಸುತ್ತೇವೆ ಎನ್ನುವುದೂ ಬಹಳ ಮುಖ್ಯ. ಧನಾತ್ಮಕ ಚಿಂತನೆಯನ್ನು ನಾವು ಸರಳವಾಗಿ ಆಶಾವಾದ ಎಂದೂ ಋಣಾತ್ಮಕ ಚಿಂತನೆಯನ್ನು ನಿರಾಶಾವಾದವೆಂದು ಕರೆಯುತ್ತೇವೆ. ಹಾಗಿದ್ದರೆ ಇದು ಹೇಗೆ ತಿಳಿಯುತ್ತದೆ? ನಿರಾಸೆ ಮತ್ತು ಆಸೆ ಎರಡೂ ಅರ್ಥವಾಗುವುದು ನಮ್ಮ ಚಟುವಟಿಕೆಯಲ್ಲಿ. ವ್ಯಕ್ತಿಯ ಪೊಸಿಟಿವ್ ಮತ್ತು ನೆಗೆಟಿವ್ ಎನ್ನುವ ಗುಣಗಳು ನಿರ್ಣಯಗೊಳ್ಳುವುದು ಕ್ರಿಯೆಯನ್ನು ಅವಲಂಬಿಸಿದೆ ಎಂದು ಸಾರ್ತ್ರೆಯು ಹೇಳುತ್ತಾನೆ. ಅವನ ಪ್ರಕಾರ- ಸೆಲ್ಫ್ ಮತ್ತು ಇಗೋ ಅನ್ನುವುದು ಪರಿವರ್ತನೆಗೆ ಗುರಿಯಾಗುತ್ತವೆ.

ಸಾರ್ತ್ರೆಯಲ್ಲಿ ಅಸ್ಮಿತೆ (ಸೆಲ್ಫ್) ಮತ್ತು ಅಹಂ (ಇಗೋ) ಎರಡೂ ಬಾಹ್ಯದಿಂದ ಪ್ರಜ್ಞೆಗೆ ಬರುವ ಅಂಶವಾಗಿದೆ.

ದೇಹ ಮತ್ತು ಅದಕ್ಕೆ ಇರುವ ಚರಿತ್ರೆಯು ಬಹಳ ದೊಡ್ಡ ಚರಿತ್ರೆಯನ್ನು ಹೊಂದಿದೆ. ದೇಹದ ಅಸ್ತಿತ್ವವು ಭೌತಿಕ ಚರಿತ್ರೆಗೆ ಸಂಬಂಧಿಸಿದೆ. ದೇಹದ ಚಟುವಟಿಕೆ, ಮನಸ್ಸಿನ ಚಟುವಟಿಕೆ ಮತ್ತು ನಾವು ನಡೆಸುವ ಇತರ ಕ್ರಿಯೆಗಳಿಗೆ ಇರುವ ಸಾಧ್ಯತೆಯು ಭಿನ್ನವಾಗಿರುತ್ತದೆ. ಹೋಮೋಸೆಕ್ಸ್‌ನಿಂದ ಚರಿತ್ರೆಯು ನಿರ್ಮಾಣವಾಗುವುದಿಲ್ಲ. ಇದಕ್ಕೂ ಮನುಷ್ಯರ ಅಸ್ತಿತ್ವಕ್ಕೂ ಸಂಬಂಧವಿದೆ ಎನ್ನುವುದನ್ನು ಮರೆಯುವಂತಿಲ್ಲ. ಮತ್ತೆ ನಾವು ಯೋಚನೆಯನ್ನು ಮಾಡಬೇಕು : ಅಸ್ತಿತ್ವವಾದವೆಂದರೆ ತಾನು ಉಳಿದವರಿಗಿಂತ ಪ್ರತ್ಯೇಕವೆಂದು ಹೇಳುವುದೂ ಬಹಳ ಮುಖ್ಯವಾಗಿರುವುದು ಸಾರ್ತ್ರೆಯಲ್ಲಿ. ಅಸ್ತಿತ್ವವಾದವು ತನ್ನ ಪಾಡಿಗೆ ತಾನು ಸ್ವತಂತ್ರವೆಂದು ಹೇಳಿದರೂ ಅದರ ಸಮಸ್ಯೆಯು ಸಂಕೀರ್ಣವಾಗಿದೆ. ಅದು ವರ್ಗದ ಕುರಿತು ಮಾತನ್ನಾಡುವುದಿಲ್ಲ. ಸಾಧ್ಯವಾದಷ್ಟು ಮಟ್ಟಿಗೆ ಅದು ತನ್ನನ್ನು ತಾನೇ ಮುಕ್ತವೆಂದು ಹೇಳಿಕೊಂಡಿದೆ. ವ್ಯಕ್ತಿಗಿರುವ ಸಾಮಾಜಿಕ ಕಾರ್ಯವನ್ನು ಅದು ನಿರಾಕರಿಸುವುದೂ ಅಷ್ಟೇ ನಿಜ. ವ್ಯಕ್ತಿ ಮತ್ತು ಅವನ ಶಕ್ತಿ ಮಾತ್ರವೇ ಅಸ್ತಿತ್ವವಾದದಲ್ಲಿ ಮುಖ್ಯವಾಗಿದೆ.

ಕನ್ನಡಭಾರತಿ, ಕುವೆಂಪು ವಿಶ್ವವಿದ್ಯಾನಿಲಯ
ಶಂಕರಭಟ್ಟ

ಬೇಂದ್ರೆ ನೆನಪುಗಳು

ಕುಸುಮಾಕರ ದೇವರಗೆಣ್ಣೂರು

ನಾನೀಗ ಬೇಂದ್ರೆಯವರ ಕುರಿತು ಕೆಲವು ನೆನಪುಗಳನ್ನು ಹೇಳ್ತಾ ಇದ್ದೇನೆ. ಅವರ ಕಾವ್ಯದ ಬಗ್ಗೆ ಸಾಕಷ್ಟು ಜನ ಬರೆದಿದ್ದಾರೆ, ಓದಿದ್ದಾರೆ, ಕಾವ್ಯ ಕೇಳಿದ್ದಾರೆ. ಅವರ ಬಗ್ಗೆ ನಾನು ಮಾತಾಡೋದಕ್ಕಿಂತಲೂ, ಅವರ ಜೀವನದಲ್ಲಿನ ಕೆಲವು ನೆನಪಿನ ಬಗ್ಗೆ ಮಾತಾಡ್ತೀನಿ. ಅವು ಯಾವ ಕಾವ್ಯಕ್ಕಿಂತಲೂ ಕಡಿಮೆ ಏನಲ್ಲ. ಒಂದು ದಿವಸ ಬೆಳಗ ಮುಂಜಾನೆ ಚುಮುಚುಮು ನಸುಕಿನ್ಯಾಗ ಅವರ ಮನಿಯೊಳಗ ಮಾತಾಡ್ತಾ ಕೂತಿದ್ವಿ, ನಾನೊಂದು ಪ್ರಶ್ನೆ ಕೇಳಿದ್ದೆ ಸಾಹಿತ್ಯದಲ್ಲಿನ ಶೀಲ ಅಶ್ಲೀಲತೆಯ ಕುರಿತು; ಬೇಂದ್ರೆ ಉತ್ತರ ಕೊಟ್ಟೋತಾ ಕೂತಿದ್ರು. ಮಾತು ಬಹಳ ವೇಗದೊಳಗೆ ನಡೆದಿತ್ತು. ಬೇಂದ್ರೆ ಅವರ ಮಾತಿನ ರೀತಿ ಹೇಳಬೇಕಂದ್ರ: ಒಬ್ಬ ಇರಲಿ ಎದುರು ಹತ್ತು ಮಂದಿ ಇರಲಿ, ಸಾವಿರ ಮಂದಿ ಇರಲಿ, ಒಂದೇ ರೀತಿಯಿಂದ ಮಾತಾಡೋದು. ಅವರ ಮಾತಿನ ರೀತಿ ಎಂದರೆ ಚಕಮಕ ಚಂಚಲ, ಚಕಮಕ ಚಲಮಲ ಮಿಂಚಿನ ಗೊಂಚಲ ಇದ್ದಾಂಗ. ಅವರ ಮಾತುಗಳನ್ನ ಒಂದು ಹೊಳೆಗೆ ಹೋಲಿಸಬಹುದು. ಒಮ್ಮೆ ಗಂಭೀರವಾಗಿ ಹರೀತದ. ಒಮ್ಮೆ ಕುಲುಕುಲು ನಕ್ಕೋತ ಹರೀದ. ಒಮ್ಮೆ ಭಯ ತರಿಸ್ತದ. ಒಮ್ಮೆ ಮೇರೆ ಮೀರಿ ಬರ್ತದ, ಇಂತಹ ಮಾತು ಆ ಮಾತು ನಡೆದಾಗ ಬಾಗಿಲು ತೆಗದೇ ಇತ್ತು. ಏಳೆಂಟು ವರ್ಷದ ಇಬ್ಬರು ಹುಡುಗೀರು ಒಳಗ ಬಂದ್ರು.. ಅವರೊಳಗಿನ ಒಬ್ಬ

ಹುಡುಗಿ ಬಂದವಳೆ ಬೇಂದ್ರೆ ಅವರ ತೊಡಿ ಮೇಲೆ ಬಿದ್ದು ಅಳ್ಳಿಕ್ಕೆ ಹತ್ತಿಬಿಟ್ಲು. ಒಂದೇ ಸಮನೆ ಅಳಲಿಕ್ಕೆ ಹತ್ತಿಬಿಟ್ಲು ಜೋರ್ ಜೋರಾಗಿ. ಬೇಂದ್ರೆ ಅವರು ಸಮಾಧಾನ ಮಾಡ್ಲಿಕ್ಕ ಪ್ರಯತ್ನ ಮಾಡಿದ್ರು. 'ಏನಾಯ್ತು?' ಆ ಹುಡುಗಿ ಏನಾದ್ರು ಹೇಳಲೊಲ್ಲಳು. ಆಮೇಲೆ ಹತ್ತಿರದೊಳಗ ನಿಂತಂತ ಗೆಳತಿ ಇದ್ಲಲ್ಸ, ಆ ಗೆಳತಿ ಒಂದು ಉತ್ತರ ಪತ್ರಿಕಾ ಬೇಂದ್ರೆಯವರ ಕೈಯಾಗೆ ಕೊಟ್ಲು. ಬೇಂದ್ರೆಯವರು ನೋಡಿದ್ರು. ಮೊದಲನೆ ಪುಟದ ಮ್ಯಾಲೆ ನಟ್ಟ ನಡುವೆ ೨ ಸಾಲು ಇಂಗ್ಲಿಷ್‌ನ್ಯಾಗ ಬರದಿತ್ತು. ಹಿಂದೆ ಪ್ರಶ್ನೆ ಸಂಖ್ಯೆ ೧ ಅಂತಿತ್ತು. ೨ ಸಾಲಿತ್ತು. ಶಿಕ್ಷಕರು ಅದ್ರ ಮ್ಯಾಲೆ ಚಂದಾಗಿ ಕೆಂಪು ಮಸೀಲೆ ಗೀಟು ಹೊಡೆದು ಮಾರ್ಜಿನ್‌ದೊಳಗ ಶೂನ್ಯ ಗುಣ ಕೊಟ್ಟಿದ್ರು. ಬೇಂದ್ರೆಯವ್ರಿಗೆ ಸ್ವಲ್ಪ ಅರ್ಥ್ವಾಯ್ತು. ಓಹೋ ಇದೇನೋ ಆಗ್ಯೇದ. ಹುಡುಗೀನ ಎಬ್ಸಿದ್ರು. ಏನಾಯ್ತು ಅಂತ ಕೇಳಿದ್ರು. ಬೇಂದ್ರೆಯವರಿಗೆ ಹೇಳಿದ್ಲು ಅವ್ಳ ಹೀಗಾಯ್ತು ಅಂತ. ಎಲ್ಲರಿಗೂ ಅವರು ಲೆಕ್ಕೆ ೬, ೭ ಅಂಕ ಕೊಟ್ಟಾರ. ನನಗೆ ಮಾತ್ರ ಶೂನ್ಯ ಕೊಟ್ಟಾರ. ನನಗೆ ಬಾಳ ದೊಡ್ಡ ಅಪಮಾನ ಆತಿದು. ನನಗ್ಯಾಕ್ ಹಿಂಗ್ ಕೊಟ್ಟಾರ? ಅವರು ಹೇಳಿದ್ಹಂಗ ನಾ ಬರದೀನಿ ಆ ಹುಡುಗಿ ಹಟ ಮಾಡಿದ್ಲು. 'ಪ್ರಶ್ನೆ ಪತ್ರಿಕಾ ತಾ' ಬೇಂದ್ರೆಯವ್ರು. ಪ್ರಶ್ನೆ ಪತ್ರಿಕಾ ಕೊಟ್ಲು ಆ ಹುಡುಗಿ. ನೋಡಿದ್ರು ಪ್ರಶ್ನೆ ಒಂದು. Write an essay on any one of the following ಅಂತಿತ್ತು. ಏನಿತ್ತು ಮುಂದ... from six to seven lines ಅಂತಿತ್ತು. ಬೇಂದ್ರೆಯವರಿಗೆ ನಗಿ ಬಂತು. ನನಗೂ ತೋರ್ಸಿದ್ರು, ನಾನೂ ನಕ್ಕೆ. ಆ ಹುಡುಗಿ ಮತ್ತೂ ಸಿಟ್ಟಿಗೆ ಬಂದ್ಲು. ನಗ್ತೀರೇನು? ಅಂತ ಕೇಳಿದ್ಲು. ಏನಾಗಿತ್ತು ಅಂದ್ರ ೧ ೨ ೩ ೪ ೫ ೬ನೇ ಸಾಲಿನಿಂದ ಆ ಹುಡುಗಿ ಬರೀಲಿಕ್ಕೆ ಪ್ರಾರಂಭ ಮಾಡಿದ್ಲು ೭ನೇ ಸಾಲಿಗೆ ಮುಗ್ಸಿಬಿಟ್ಟಿದ್ಲು. ನಾನು ಅವರು ಹೇಳಿದ ಹಾಗೇನೆ ನಿಬಂಧ ಬರೆದೇನಿ. ನನಗೆ ಶೂನ್ಯ ಕೊಟ್ಟಾರ. ಉಳಿದವರ್ಯಾರೂ ಹಿಂಗ ಬರದಿಲ್ಲ. ಮೊದಲನೆ ಸಾಲಿನಿಂದ ಬರ್ದಾರೆ. ಏಳೂ ಸಾಲು ಬರ್ದಾರ.

ಇವರೆಂದು ೨ ಸಾಲಿನ ನಿಬಂಧಕ್ಕ ಏನ್ ಮಾರ್ಕ್ಸ್ ಕೊಡಬೇಕವ್ರು? ಇಲ್ಲ ಅವರು ಹೇಳಿದ್ದು from six to seven lines ಅಂತ. ನಾ ಹಂಗ ಬರ್ದೇನಿ. ನಂದು ತಪ್ಪಿಲ್ಲ ಆ ಹುಡುಗಿ ಹಠ. ಬೇಂದ್ರೆಯವ್ರು ಆ ಹುಡುಗೀನ ಸಮಾಧಾನ ಮಾಡಿ, ನೀ ಯೋಚನೆ ಮಾಡ್ಬೇಡ ನಾ ನಿನ್ನ ಗುರುಗಳಿಗೆ ಭೆಟ್ಟಿಯಾಗ್ತೇನಿ. ನಿನಗೆ ಆಗಿರೋ ಅನ್ಯಾಯವನ್ನ ಸರಿಪಡಿಸ್ತೀನಿ. ನೀ ಯೋಚನಿ ಮಾಡಬ್ಯಾಡ ಅಂತ ಹೇಳಿ ಕಳ್ಸಿದ್ರು.

ಮಾತು ಇಲ್ಲಿಗೆ ಮುಗೀಬಹುದಾಗಿತ್ತು. ಆದ್ರ ಮುಗಿಲಿಲ್ಲ. ಆವತ್ತು ಸುರುವಾದ ಮಾತು ಮುಂದ ೨೫-೩೦ ವರ್ಷ ತನಕ ನಮ್ಮ ಚರ್ಚೆಯೊಳಗ ಬಂದಿತ್ತು. ಬೇಂದ್ರೆಯವರು ನನ್ನನ್ನೊಂದು ಪ್ರಶ್ನೆ ಕೇಳಿದ್ರು. ನೋಡು ಇಂತದ್ದು ನಾನು ಕಲಿಯೋ ಮುಂದೂ ಮಾಡಿಲ್ಲ ನಮ್ಮ ಕಾಲಕ್ಕೂ ಕೇಳ್ತಿದ್ರು from six to seven lines ಹಾಗೆ ಹೀಗೆ ಅಂತ. ಯಾರೂ ಹಿಂಗ ನಾವು ಮಾಡಿದ್ದಿಲ್ಲ. ನೀನೂ ಮಾಡಿಲ್ಲ ಮುಂದೆ ನಿನ್ನ ಅನುಭವಕ್ಕೂ ಬಂದಿಲ್ಲ. ಇಂತಾದ್ದು ಈ ಹುಡುಗಿಗೆ ಹಿಂಗ ಅರ್ಥ ಯಾಕ್ ಆತು? ಅಂದ್ರೆ communication... ನಾವು ಆಡೋ ಮಾತು ಇನ್ನೊಬ್ಬರಿಗೆ ಮುಟ್ಟಿಸಬೇಕಾದ್ರೆ ಹ್ಯಾಗೆ ಮುಟ್ಟಿಸಬೇಕು. ಅವ್ಳ ಸರಿಯಾಗಿ ಮುಟ್ಸೇನಿ ಅಂತ್ಲೆ ತಿಳ್ಕೊಂಡಾಳ. ಉಳಿದ ಹುಡುಗೀರೆಲ್ಲ ಸರಿಯಾಗೀನೆ ತಿಳ್ಕೊಂಡಾರ. ಆದ್ರ ಈ ಹುಡುಗಿ ಒಬ್ಬಾಕಿ ಹಿಂಗ್ ಯಾಕ್ ತಿಳ್ಕೊಂಡ್ಲು? ಈ insight ಎಲ್ಲಿ ಬಂತು, ಯಾಕೆ ಬಂತು? ಇದು ಸರಿಯೊ ತಪ್ಪೊ ಬಿಟ್ಟುಬಿಡೋಣು. ಏನು ಮಾತು ಪ್ರಾರಂಭ ಮಾಡಿದ್ರು ಅಂದ್ರ, ಜಗತ್ತಿನಲ್ಲಿ ಮಾನವನ ಇತಿಹಾಸ ಪ್ರಾರಂಭವಾದ ಕಾಲದಿಂದ,

ಮಾತು ಪ್ರಾರಂಭವಾದ ದಿವಸದಿಂದ ಹಿಡಿದು ಒಬ್ಬರ ಮಾತು ಇನ್ನೊಬ್ಬರಿಗೆ ತಿಳಿಲಾರದೆ ಏನು ಗೊಂದಲ ಉಂಟಾತು, ಆ ಗೊಂದಲದಿಂದ ಏನಾತು ಅಂಬೋದನ್ನ ಎಲ್ಲಾ ಚರ್ಚಾ ಮಾಡ್ಲಿಕ್ ಹತ್ತಿದ್ರು. ಭಾರತೀಯ ತತ್ತ್ವಜ್ಞಾನ, ಪಾಶ್ಚಿಮಾತ್ಯ ತತ್ತ್ವಜ್ಞಾನ ಹೀಗೆಲ್ಲಾ ಅನೇಕ ಸಂಗತಿಗಳ, ಇತಿಹಾಸದ ಉದಾಹರಣೆ ಕೊಟ್ರು. ಇಲ್ಲಿ ಸ್ಪಷ್ಟ ಮಾಡಬೇಕಂದ್ರೆ ಒಂದು ಉದಾಹರಣೆ ಕೊಟ್ಟು ಆವತ್ತು ಹೇಳಿದ್ದನ್ನ ಹೇಳತೇನಿ; ನಾವೇನು ತಿಳ್ಕೊತೀವಿ. ಒಂದು ಶಬ್ದಕ್ಕ ಒಂದು ಅರ್ಥ ಇರ್ತದ. ಅದು ಖಚಿತವಾಗಿ ಸಿದ್ಧ ಆಗಿರ್ತದ. ಆ ಅರ್ಥ ಎಂದೆಂದೂ ಭಿನ್ನ ಆಗೋದಿಲ್ಲ ಅಂತ ನೀವು ತಿಳ್ಕೊಂಡಿರ್ತೀರಿ. ನನಗ ಅವರು ಹೇಳ್ತಾ ಇದ್ರು. ಉದಾಹರಣೆ ಕೊಟ್ಟು ಹೇಳಿದ್ರು. ತಿಳ್ಕೊಪ್ಪಾ self realisation ಅಂತ ಒಂದು ಶಬ್ದ ಅದ. ಅಲ್ಲೆ ಏನ್ ಮಾಡಿದ್ರು, ಹತ್ರ ಇದ್ದ ಒಂದು ಮೂರು ಪುಸ್ತಕ ತೆಗಿಲಿಕ್ ಹೇಳಿದ್ರು. ಮೂರು ಪುಸ್ತಕದೊಳಗ ಒಂದು ಲಾಸ್ಕಿ (Harold Laski) ಪುಸ್ತಕ, ಒಂದು ಬರ್ಟ್ರಾಂಡ್ ರಸಲ್ (Bertrand Russell) ನ ಪುಸ್ತಕದ್ದು, ಒಂದು ಭಾರತೀಯ ತತ್ತ್ವಜ್ಞಾನದ ಪುಸ್ತಕ ಇತ್ತು. ನೋಡು ಇದರೊಳಗ self realisation ಅಂತ ಒಂದು ಶಬ್ದ ಅದ. ಆ self realisation ಶಬ್ದಕ್ಕ ಏನ್ ಅರ್ಥ? ನಿನ್ ತಲ್ಯಾಗ ಒಂದು ಅರ್ಥ ಅದ. ನನ್ನ ತಲ್ಯಾಗ ಒಂದು ಅರ್ಥ ಅದ. ಖಚಿತವಾಗಿ ಸಿದ್ಧಪಡಿಸಿದಂತಹ ಅರ್ಥ. ನೀ ತಿಳ್ಕೊ. ಲಾಸ್ಕಿ ಪುಸ್ತಕ ತೆಗಸಿದ್ರು. self ಲೈನ್ ಮೇಲೆ ಒಂದು ವಾಕ್ಯ ಇತ್ತು. ಆ ವಾಕ್ಯ ಓದ್ಲಿಕ್ಕೆ ಹೇಳಿದ್ರು. ಕನ್ನಡದೊಳಗ ಆ ವಾಕ್ಯದ ಅರ್ಥ ಹೀಗಾಗ್ತಿತ್ತು. self realisation-ಜೀವನದಲ್ಲಿ ಸಾಧ್ಯವಾಗುವುದಕ್ಕಾಗಿ ಆ ಎಲ್ಲಾ ಅವಶ್ಯಕತೆಗಳನ್ನು ಪೂರೈಸುವುದು ಅತ್ಯಾವಶ್ಯಕವಾಗಿದೆ ಅಂತಿತ್ತು. ಇನ್ನೊಂದು ವಾಕ್ಯ ಬಹಳ ಮೋಜಿನದು. ಬರ್ಟ್ರಾಂಡ್ ರಸೆಲ್‌ನ ಪುಸ್ತಕದಲ್ಲಿ ಸೆಲ್ಫ್ ರಿಯಲೈಸೇಷನ್ ಕುರಿತ ವಾಕ್ಯ. ಅದು ಹ್ಯಾಗೆ ಇತ್ತು ಅಂತ ಕೇಳಿದ್ರೆ– Man is not a solitary animal ಮನುಷ್ಯ ಒಂಟಿ ಜೀವ ಅಲ್ಲ, ಎಲ್ಲಿಯವರೆಗೂ ಸಮಾಜ ಜೀವನವು ಅಸ್ತಿತ್ವದಲ್ಲಿ ಇದೆಯೋ ಅಲ್ಲಿಯವರೆಗೆ ಸೆಲ್ಫ್ ರಿಯಲೈಸೇಷನ್ ಈ ತತ್ತ್ವ ನೈತಿಕತೆಯ ನೆಲೆಗಟ್ಟಿನ ಮೇಲೆ ಮುಖ್ಯವಾದ ತತ್ತ್ವ ಆಗುವುದಿಲ್ಲ. ಅಂದ್ರೆ ಸೆಲ್ಫ್ ರಿಯಲೈಸೇಷನ್ ಎಲ್ಲಿವರೆಗೆ ಮನುಷ್ಯನ ಗುರಿ ಆಗಿದೆಯೋ ಅಲ್ಲಿಯ ತನಕ ಸಮಾಜದಲ್ಲಿ ನೀತಿನೆ ಸಾಧ್ಯ ಇಲ್ಲ ಅಂತ ಬರಿತಾನೆ ರಸೆಲ್. ಈಗ ನಮ್ಮ ಭಾರತೀಯ ತತ್ತ್ವಜ್ಞಾನ ಪುಸ್ತಕ ತೆಗೆದು ನೋಡು ಅಂದ್ರು. ಅದರೊಳಗೇನಿತ್ತು ಮನುಷ್ಯ ಜೀವನದ ಪರಮಾರ್ಥ ಎಂದರೆ ಆತ್ಮಸಾಕ್ಷಾತ್ಕಾರ-ಸೆಲ್ಫ್ ರಿಯಲೈಸೇಷನ್. ನೋಡು ತಮ್ಮಾ ಈಗ ನಿನ್ನ ತಲಿಯೊಳಗ ಸೆಲ್ಫ್ ರಿಯಲೈಸೇಷನ್ ಅಂದ್ರ ಒಂದೇ ಒಂದು ಘಟ್ಟಿ ಅರ್ಥ ಅಂತ ನೀ ತಿಳ್ಕೊಂಡಿದ್ರಿ ಅಂದ್ರ ನಿನಗ ಲಾಸ್ಕಿ ಅಂದದ್ದು ಅರ್ಥ ಆಗೋದಿಲ್ಲ. ರಸೆಲ್ ಅಂದದ್ದು ಅರ್ಥ ಆಗೋದಿಲ್ಲ. ಆದ್ದರಿಂದ ಮೊದಲೇನದ್ದು ಕಮ್ಯುನಿಕೇಷನ್-ಸಂವಾದ ಅನ್ನೋದು ಎಷ್ಟು ಮಹತ್ವದ್ದದ. ಜಗತ್ತಿನೊಳಗ ನೋಡು ಎಲ್ಲಿ ನೋಡಿದ್ರೂನು ಸ್ವಗತಗಳವ, ಮೋನೋಲಾಗ್ಸ್ ಅವ ಸಾಲಿಲಾಕಿಸ್ ಅವ. ಡೈಲಾಗ್ಸ್ ಇಲ್ಲ ಹೇಳಿದ್ರು. ಹೀಗೆ ಹೇಳ್ತಾ ಹೇಳ್ತಾ ಎಷ್ಟೆಲ್ಲಾ ಕಥಿಗಳನ್ನ ಅವ್ರು ಹೇಳಿದ್ರು.

ಆಮೇಲೆ ನನಗೆ ಹೇಳಿದ್ರು, ಆ ಹುಡುಗಿ ಏನ್ ಹೇಳಿದ್ಲು? ನಾನಂದೆ 'ಏನ್ ಹೇಳ್ತಾಳೆ ಅವಳು.' ಬರೇ ನಿಮ್ಮ ತೊಡಿ ಮ್ಯಾಲೆ ಬಿದ್ದು ಅತ್ಲು, ಅತ್ಲು ಅದೇ ಖರೆ ಅದ. ಆ ಅಳೂದ್ರೊಳಗ ಏನೇನೋ ಹೇಳಿದ್ಲು? 'ಆ ಅಳು ಏನು ಹೇಳಿತು?' ಕೇಳಿದ್ರು. ಆ ಅಳು ಏನ್ ಹೇಳ್ತದ್ರಿ? ಅಂತಂದೆ ನಾನು. ನೀ ಎಂದಾರೆ ಅತ್ತೀಯೊ ಇಲ್ಲೊ ? ಅತ್ತೇನಿ. ನೆನಪು ಮಾಡಿಕೊಳ್ಳಕ್ಕೆ ಸಾಧ್ಯ ಅದೇನು?

ನನಗೇನು ಅತ್ತು ತೋರ್ಸು ಅಂತಿರೇನು? ಇಲ್ಲನೀ ಅಳಬೇಕಾದ ಕಾರಣ ಇಲ್ಲ ಹೇಳಿ ಅವ್ರು ಆ ಸಣ್ಣ ಮಗುವಿನ ಅಳುವಿನ ನಾನಾ ಪ್ರಕಾರದ ಪ್ರಭೇದಗಳನ್ನ ಆಡಿ ತೋರ್ಸಿದ್ರು, ಅತ್ತು ತೋರ್ಸಿದ್ರು. ಅವ್ರು ಕಲ್ಸೋ ರೀತಿ ಹೀಗಿತ್ತು. ಉದಾಹರಣಾರ್ಥವಾಗಿ ಹಠಮಾರಿ ಅಳು, ದೈನ್ಯದ ಅಳು, ಸತ್ಯಾಗ್ರಹದ ಅಳು ಅಂತಾ ಅನೇಕ ಭಿನ್ನ ಭಿನ್ನ ಅಳುಗಳು. ಯಾವುದ್ರೊಳಗ ಅಹಂಕಾರ ಅದ, ಯಾವುದ್ರೊಳಗ ದರ್ಪ ಅದ. ಹಿಂಗೆ ನಾನಾ ಪ್ರಕಾರದ ಅಳುವಿನ ದನಿಗಳನ್ನು ತೆಗೆದು ತೋರ್ಸಿದ್ರು. ಆ ಅಳುವಿನ ಮೂಲಕವಾಗೇನೆ ಬಹಳ ಮಹತ್ವದ ಮಾತು ಹೇಳಿದ್ರು ಅವಳು. ನೋಡು ಶಬ್ದಗಳು ಸಂವಾದಕ್ಕ ಬಹಳ ಅಗತ್ಯ ಅವ ಅಂತ ಅನಿಸಿದ್ರೂನು ಎಲ್ಲಾ ಸಂವಾದ ಶಬ್ದಗಳಿಂದಲೆ ಆಗ್ತದ ಅನ್ನೋದು ಬಾಳ ದೊಡ್ಡ ಭ್ರಮಾ ಅಂತ ಹೇಳಿದ್ರು. ಇಂಥಾ ಮಾತು ಭಾಳ ಅಪರೂಪವಾದದ್ದು. ಮುಂದೆ ಜೀವನದೊಳಗ ಕಾವ್ಯ ಕಲಸೋ ಮುಂದ, ಸಂವಾದ ಮಾಡೋ ಮುಂದ ಅವ್ರು ಈ ಎಲ್ಲಾ ಮಾತುಗಳನ್ನ ನೆನಪು ಮಾಡ್ತಾ ಇದ್ರು.

ಇನ್ನೂ ಒಂದು ಸಲ ಭಾಳ ಮೋಜಿನ ಕಥೆ ಹೇಳಿದ್ರು. ಆ ಕಥೆನೂ ಭಾಳ ಮೋಜಿನದಿತ್ತು. ಏನಪ್ಪಾ ಆ ಕಥೆ ಅಂದ್ರ: ಒಬ್ಬ ರಾಜ ಇದ್ದ. ಒಂದು ದಿವಸ ಆಸ್ಥಾನದೊಳಗ ಯಾರೋ ಒಬ್ರು ಕನ್ನಡಿ ತಂದಿಟ್ಟಿದ್ರಂತ. ಆ ರಾಜ ಕನ್ನಡೀನೆ ನೋಡಿದ್ದಿಲ್ಲಂತ. ತಪ್ಪಿ ಆ ದಿವಸ ಅಂವ ಅಲ್ಲಿಟ್ಟ ಕನ್ನಡಿಯೊಳಗ ಮಾರಿ ನೋಡ್ಕೊಂಡ. ನೋಡ್ಕೊಂಡ ಕೂಡ್ಲೆ ಅಳಲಿಕ್ಕೆ ಸುರು ಮಾಡಿಬಿಟ್ಟ. ಬಾಳಷ್ಟು ಅಳಲಿಕ್ಕ ಹತ್ತಿದ. ಯಾಕ್ ಅಳ್ತಿ? ಅಂತ ಕೇಳಿದ್ರು ಅಂವ ಏನೂ ಉತ್ತರ ಹೇಳಲಿಲ್ಲ. ಬರಿ ಅಳ್ತಾನೆ ಕೂತ. ಆಗ ಅಂವ ಅಳತಾನಂತ ಪ್ರಧಾನಿ ಅಳಲಿಕ್ಕೆ ಹತ್ತಿದ. ಪ್ರಧಾನಿ ಅಳತಾನಂತ ಸೇನಾಪತಿ ಅಳಲಿಕ್ಕೆ ಹತ್ತಿದ. ಸಭಿಕರು ಅಳಲಿಕ್ಕೆ ಹತ್ತಿದ್ರು. ಎಲ್ಲರೂ ಅಳಲಿಕ್ಕೆ ಹತ್ತಿದ್ರು. ಕಡೇಗೊಬ್ಬ ಕೇಳಿದ; 'ಅಪಾ ನೀ ಎಷ್ಟೊತ್ತಾರು ಅಳು. ಆದ್ರ ನೀ ಯಾಕ್ ಅಳ್ತಿ ಹೇಳು.' ನೋಡು ತಮಾ ಈ ಕನ್ನಡಿ ಅದsಲ ಈ ಕನ್ನಡಿಯೊಳಗ ನನ್ನ ಮಾರಿ ನೋಡ್ಕೊಂಡೆ. ನಾ ಹೀಂಗಿದ್ದೀನಾ, ನಾ ಇಷ್ಟು ಭಯಾನಕ ಇದ್ದೀನಾ? ಅಂತ ಭಾಳ ಕೆಟ್ಟ ಅನಿಸಿ ಅಳ್ಲಿಕ್ಕೆ ಹತ್ತಿದೆ. ಮತ್ತ ನೀವ್ ಯಾಕ್ ಅಳ್ಲಿಕ್ ಹತ್ತೀರಿ? ಕೇಳಿದ ರಾಜ. ಆಗ ಪ್ರಧಾನಿ ಹೇಳ್ತಾನ–ಸ್ವಾಮಿ ನೀವು ಒಂದ್ ದಿವ್ಸ ನಿಮ್ಮ ಮಾರಿ ನೋಡ್ಕೊಂಡ್ ಅಳ್ಲಿಕ್ ಹತ್ತಿದ್ರಿ. ದಿನಾ ನಿಮ್ಮ ಮಾರಿ ನೋಡ್ತೇವಿ ನಾವು. ನಾವು ಎಷ್ಟು ಅಳಬೇಕು? ಅಂತ ನಾವ್ ಅಳಲಿಕ್ ಹತ್ತಿದ್ವಿ. ಒಂದೇ ದಿವ್ಸ ನೋಡಿ ನಿಮಗ ಇಷ್ಟು ದುಃಖ ಆತು. ನಾವು ದಿನಾ ಈ ಮಾರಿ ನೋಡ್ಬೇಕಾಗ್ತದ? ಹೇಳಿದ.

'ಏನಪ್ಪಾ ಇದರ ಅರ್ಥ? ಈ ಕಥಿ ನಿನಗ ಯಾಕ್ ಹೇಳಿದೆ ಅಂತ ಕೇಳಿದ್ರ, ಅಪಾ ನಿನ್ನ ಅಂತಃಕರಣದ ಕನ್ನಡಿಯೊಳಗ ನಿನ್ನನ್ನ ನೀ ನೋಡ್ಕೊಳ್ಳಲಿಕ್ಕೆ ಕಲಿ. ನಿನಗೆ ಸಾಮಾನ್ಯವಾಗಿ ನಾನು ಹ್ಯಾಗಿದ್ದೀನಿ ಅಂಬೋದು ಗೊತ್ತಿರೋದಿಲ್ಲ. ನಿನ್ನ ಮುಖವಾಡಗಳಿರ್ತಾವ. ನೀನು ಅದನ್ನ ತೆಗೆದು ನೋಡ್ಲಿಕ್ಕೆ ಕಲಿಬೇಕೆ ಹೊರತಾಗಿ ಯಾವ್ಯಾವ್ದೋ ಹೊರಗಿನ ಸಂಗತಿಗಳನ್ನ ತಂದು ನಿನ್ನ ರೂಪ ಶೃಂಗರಿಸಿಕೊಳ್ಳಲಿಕ್ಕೆ ಹೋಗಬ್ಯಾಡ. ನಿನ್ನ ನಿಜವಾದ ವ್ಯಕ್ತಿತ್ವ ಬೆಳಿಬೇಕು ಅನ್ನೋದು ಬಾಳ ಮಹತ್ವದ್ದು.' ಈ ರೀತಿ ಬಾಳ ಮೋಜಿನ ಸಂಗತಿಗಳನ್ನ ಹೇಳ್ತಾ ಇದ್ರು.

ಅವ್ರು ಎಷ್ಟೋ ಸಾರೆ ಮಾತಾಡೋ ಮುಂದ ಅಡ್ಡಾಡ್ತಾನೇ ಮಾತಾಡೋದು. ಬರವಣಿಗೆ ಇರ್ಲಿ ಏನೇ ಇರ್ಲಿ, ಅವರ ರೀತಿಗಳಲ್ಲಿ ನಗೆ ಅನ್ನೋದು ಬಾಳ ಇರ್ತಿತ್ತು. ಕಟಕಿ, ವ್ಯಂಗ್ಯ ಬಹಳ ಕಡಿಮೆ. ಅದರೊಳಗ ಕಥೆಗಳನ್ನ ಬಾಳ ಹೇಳ್ತಾ ಇದ್ರು. ಶಿಕ್ಷಣದ ಕುರಿತು ಹೇಳೊ ಮುಂದ ಒಂದ್ಸಲ ಏನ್

ಹೇಳಿದ್ರು– 'ನೋಡು ಆ ಹುಡುಗಿ ಅಳ್ತಾ ಇದ್ಲಲ್ಲ. ಆ ಅಳೋ ಹುಡುಗಿಯ ಹಠ ಏನಿತ್ತು ಅಂದ್ರ. 'ನಾನು ಸರಿಯಾಗಿದ್ದೇನೆ. ತನಗೆ ಅನ್ಯಾಯ ಆಗಿದೆ, ಅಪಮಾನ ಆಗಿದೆ. ಆದ್ರೆ ಅವಳಿಗೆ ನನಗೆ ಶೂನ್ಯ ಯಾಕ ಕೊಟ್ಟಾರ ಅನ್ನೋದನ್ನ ತಿಳ್ಕೊಳೊ ಮನಸ್ಸಿರಲಿಲ್ಲ. ನಾನು ಸರಿ ಇದ್ದೇನೆ. ಇನ್ನೊಬ್ರು ತಪ್ಪಿದ್ದಾರೆ. ತನಗೆ ಅನ್ಯಾಯ ಆಗಿದೆ. ಅಂದ್ರೆ ತಿಳುವಳಿಕೆ ಅಂಬೋದನ್ನ ಸಣ್ಣವಯಸ್ಸಿನೊಳಗ ಸಹಿತ ಕಲೀಲಿಕ್ಕೆ ಬರ್‍ತದ. ಆದ್ರ ನಾವು ನಮ್ಮ ಅಹಂಕಾರದ ಭಾರದೊಳಗ ನಮಗೆ ಉಂಟಾಗುವಂತಹ ತಿಳುವಳಿಕೆಗಳನ್ನೆಲ್ಲ ಕಳಕೊಳ್ಳಲಿಕ್ಕೆ ಹೋಗ್ತೇವಿ. ಮುಖ್ಯವಾಗಿ ಏನಾಗ್ತದ ನಮ್ಮ ಮನಸ್ಸನ್ನ ನಾವು ಶಾಂತ ಇಡಲಿಕ್ಕ ಪ್ರಯತ್ನ ಮಾಡೋದಿಲ್ಲ. ಏನಾಗ್ತದ ಗೊತ್ತೇನು? ಒಂದು ದಿವ್ಸ. ಒಬ್ಬ ಮನುಷ್ಯ ಒಂದು ನಾಟಕ ನೋಡಲಿಕ್ಕ ಹೋಗ್ತಾನ. ಅದು ಮುಗಿದ ಕೂಡ್ಲೆ ಇನ್ನೊಂದು ಏನೋ ಮಾಡ್ಲಿಕ್ಕೆ ಹೋಗ್ತಾನ. ಒಟ್ಟು ಸರಕಾರದವರು ಏನ ಮಾಡ್ತಾರ ಜನರಿಗೆ–ನೀವು ತೊಡಗಿ ಅದ್ರಾಗ ಅಂತಾರ. ಅಧಿಕಾರ ವರ್ಗದವರು ತೊಡಗ್ರಿ ಅದ್ರಾಗ ಅಂತಾರ. ನೀವು ಶಾಂತ ಕೂತು ವಿಚಾರ ಮಾಡಬೇಡ್ರಿ. ನೀವು ಶಾಂತ ಕೂತು ವಿಚಾರ ಮಾಡಿದ್ರ ನಮಗ ಧಕ್ಕಿ ಬರ್‍ತದ ಅಂತಾರ. ಆದ್ದರಿಂದ ಒಬ್ಬ ಮನುಷ್ಯ ವಿಚಾರ ಮಾಡೋದು ಬಾಳ ಅಗತ್ಯ ಅದ. ವಿಚಾರ ಮಾಡಬೇಕಾದ್ರೆ ಇನ್ನೊಬ್ಬ ಮ್ಯಾಲೆ ಅವಲಂಬಿಸಬೇಕು ಅಂತಲ್ಲ. ವಿಚಾರದೊಳಗ ಸಹಿತ ಸ್ವಾವಲಂಬ ಅಂಬೋದು ಬಾಳ ಮಹತ್ವದ್ದು.' ಅವರು ಒಂದು ರೀತಿಯಿಂದ ನನಗ ಕಲಿಸಿದ್ರು ಅಂತ ಅನ್ನೋಣ. ಅವರು ಕಲಿಸಿದ್ರು ಅನ್ನೋಕ್ಕಿಂತನು ಕಲಿಯೋದ್ರ ಕಡೆ ಹೆಚ್ಚು ಲಕ್ಷ ಕೊಡು ಅಂತ ಅಂತಿದ್ರು. 'ಕಲಸೋದು ಬಹಳ ಮಹತ್ವ ಅಲ್ಲ. ನನ್ನ ತಲಿಯೊಳಗೇನೋ ಇರ್‍ತದ. ನನ್ನ ತಲಿಯಾಗ ಇದ್ದದ್ದೆಲ್ಲಾ ನಿನ್ನ ತಲಿಯಾಗ ತುಂಬ್ತೇನಿ ಅಂತ ತಿಳ್ಕೊಬ್ಯಾಡ. ಮೊದಲೇದ್ದು ಒಬ್ಬ ಒಳ್ಳೆಯ ಗುರುವಿನ ಮುಖ್ಯ ಧ್ಯೇಯ ಏನು? ಅಂದ್ರ ಎಂದೊ ತನ್ನ ಕಡೆ ಬಂದಂತಹ ಒಬ್ಬ ವಿದ್ಯಾರ್ಥಿ ಗುರುವಿನಿಂದ ಸ್ವತಂತ್ರನಾಗಿ ತನ್ನ ಕಾಲ ಮೇಲೆ ನಿಂದ್ರತಾನಲ ಅದು ಬಾಳ ದೊಡ್ಡ ಜಯ ಗುರುವಿನದು. ಅಂವ ನಿಜವಾದ ಗುರು. ಕ್ಷಣಕ್ಷಣಕೂ ಗುರುವಿನ ಮಾರಿ ನೋಡ್ಕೊತ ಗುರುವಿನ ಮೇಲೆ ಅವಲಂಬಿಸುವಂತಹ ಶಿಷ್ಯ ಆ ಗುರುವಿನ ಪರಾಜಯ ಅಂತ ತಿಳ್ಕೊ ಅಂತಂದ್ರು. ಸಣ್ಣ ಸಣ್ಣ ಸನ್ನಿವೇಶಗಳಿರ್‍ತಾವಲ ಆ ಸಣ್ಣ ಸನ್ನಿವೇಶಗಳನ್ನೂ ಕೂಡಾನು ಭಾಳ ಅರ್ಥಪೂರ್ಣ ಮಾಡೊ ಪ್ರಯತ್ನ ಮಾಡ್ತಿದ್ರು.

ಇನ್ನೊಂದು ನೆನಪು ಹೇಳ್ತೇನಿ. ಬೇಂದ್ರೆಯವರು ಹನ್ನೆರಡು ವರ್ಷ ಕಾಲ ದಯಾನಂದ ಕಾಲೇಜಿನೊಳಗ ಸ್ನೇಹ ಸಮ್ಮೇಳನದ ಅಧ್ಯಕ್ಷರಾಗಿ ಇದ್ರು. ವರ್ಷಾ ವರ್ಷಾನು ಅಷ್ಟೇ ಉತ್ಸಾಹದಿಂದ, ಅಷ್ಟೇ ಸಂತೋಷದಿಂದ ಅವ್ರು ಕೆಲ್ಸ ಮಾಡ್ತಿದ್ರು. ಒಂದು ಸಲ ಪ್ರಾಧ್ಯಾಪಕರು ಕೇಳಿದ್ರು; ಏನ್ ಬೇಂದ್ರೆ ಎಷ್ಟು ವರ್ಷ ಆತು ಮಾಡ್ಲಿಕ್ ಹತ್ತಿ ಹುರುಪಿನಿಂದ. ಇನ್ನಾ ನಿನ್ನ ಹುರುಪು ಕಡಿಮೆ ಆಗಿಲ್ಲಲ್ಲ. ನನಗ ಬಾಳ ಆಶ್ಚರ್ಯ ಅನ್ನಿಸ್ತದ. ಆಗ ಬೇಂದ್ರೆ ಒಂದು ಮಾತು ಹೇಳಿದ್ರು; ಬಾಳ ಮೋಜಿನ ಮಾತದು. ಇಂತಾ ಮಾತು ಹ್ಯಾಂಗ್ ಬರ್‍ತಿತ್ತೊ ಗೊತ್ತಿಲ್ಲ. ಏನ್ ಮಾತು ಹೇಳಿದ್ರು ಅಂದ್ರ–'ನೋಡು ತಮ್ಮಾ ತಾಯಿಗೆ ಅದು ಎಂಟನೆ ಹೆರಿಗೆ ಇರಬಹುದು. ಆದ್ರ ಹುಟ್ಟಿ ಬರೋ ಮಗುವಿಗೆ ಅದು ಮೊದಲನೆ ಹೆರಿಗೆ, ಮೊದಲನೆ ಹುಟ್ಟೇ ಅಲಾ. ಆದ್ದರಿಂದ ನೋಡು ಆ ಹುಡುಗರಿಗಾಗಿ–ಮಗುವಿಗಾಗಿ ತಾನು ಮಾಡಬೇಕಾಗ್ತದ–ತಾಯಿ ಮೊದಲನೇ ಮಗುವನ್ನ ಎಷ್ಟು ಉತ್ಸಾಹದಿಂದ. ಎಷ್ಟು ಆನಂದದಿಂದ, ಎಷ್ಟು ವಾತ್ಸಲ್ಯದಿಂದ ಜನ್ಮ ಕೊಡ್ತಾಳೋ ಅಷ್ಟೇ ಉತ್ಸಾಹದಿಂದ, ಅಷ್ಟೇ ಆನಂದದಿಂದ, ವಾತ್ಸಲ್ಯದಿಂದ ಎಂಟನೇ ಮಗು ಯಾಕೆ ಪ್ರತಿ

ಮಗುವಿಗೂ ಜನ್ಮ ಕೊಡ್ತಾಳೆ. ಇದು ತಾಯಿಯ ದೊಡ್ಡ ಗುಣ. ಹಿಂಗ ಅಂತಾ ಅಂತಾ ಒಂದು ಮಾತು ಹೇಳಿದ್ರು; 'ಜೀವನಕ್ಕೆ ಬರಬಹುದಾದ ಶಾಪ ಯಾವುದು ಗೊತ್ತದೆ ಏನು?' 'ಆ ಶಾಪ ಇನ್ನೊಬ್ರು ಕೊಡೋದಿಲ್ಲ.' ಜೀವನಕ್ಕೆ ಬರೋ ಶಾಪ ಯಾವುದದೆ? ನನಗೆ ತಿಳಿದಂತೆ ಆ ಪ್ರಶ್ನೆಗೆ ನಾಲ್ಕೈದು ಉತ್ತರ ಕೊಟ್ಟೆ. ಅವ್ರು ಅವುಗಳನ್ನೇನು ನಿರಾಕರಣ ಮಾಡಲಿಲ್ಲ. ಆದ್ರೆ ಒಂದು ಮಾತು ಹೇಳಿದ್ರು. ಆ ಮಾತು ಹೇಳೊ ಮುಂದ ಒಂದು ಮೋಜಿನ ಮಾತು ಹೇಳಿದ್ರು; 'ನಿನಗ ನೀರು ಕುಡಿದು ಎಂದಾರೂ ಸಂತೋಷ ಆಗ್ಯದೇನು?'. ನಾನು ಸ್ವಲ್ಪ ನೆನಪು ಮಾಡ್ಕೊಳ್ಳಲಿಕ್ಕೆ ಪ್ರಯತ್ನ ಪಟ್ಟೆ. ಆಗ ಅವ್ರು ಏನು ಹೇಳಿದ್ರು ಅಂದ್ರ, ಬಾಳ ಮೋಜಿನ ಮಾತದು-'ಯಾವ ದಿವಸ ಮನುಷ್ಯ ರೂಢಿಯಿಂದ ನಡ್ಕೊತಾನೋ ಯಾವ ಕೆಲಸದೊಳಗೂ ಅಂವನಿಗೆ ಆನಂದವೇ ಇಲ್ಲ. ಸೂರ್ಯೋದಯ, ಚಂದ್ರೋದಯ, ನಕ್ಷತ್ರ ಇರಲಿ, ಗಾಳಿ ಇರಲಿ, ಹೊರಗೆ ಹುಲ್ಲಿನ ಮ್ಯಾಲೆ ಬರಿಗಾಲಿನಲ್ಲಿ ನಿಂತ್ರು ಅಂವಗ ತಂಪು ಹತ್ತೋದಿಲ್ಲ. ತಂಗಾಳಿ ಬೀಸಿದ್ರ ಮೈ ಪುಳಕಿತ ಆಗೋದಿಲ್ಲ. ನೀರು ಕುಡಿದ್ರ ಸಂತೋಷ ಆಗೋದಿಲ್ಲ. ಮನುಷ್ಯ ಯಂತ್ರದ್ಹಂಗ ಆಗ್ತಾನಲ್ಲ ಇದು ಬಾಳ ದೊಡ್ಡ ಶಾಪ. ಇದಕ್ಕಿಂತ ದೊಡ್ಡ ಶಾಪ ಇನ್ನೊಂದಿಲ್ಲ ಅಂಬೋದು ನೀವು ತಿಳ್ಕೊಳ್ಳಲಿಕ್ಕ ಪ್ರಯತ್ನ ಮಾಡಬೇಕು. ನಿನ್ನ ಜೀವನ ಮರಗಟ್ಟಬಾರದು ಹಾಗೆ ನೋಡ್ಕೋಬೇಕು. ಕ್ಷಣ ಕ್ಷಣ ಇರಬೇಕು. ನೋಡು ತಮಾ ನಂದೊಂದು ಕವಿತಾ ಅದಲ್ಲ, ಯುಗ ಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ. ಆ ಕವಿತೆಯೊಳಗೆ ಭಾಳ ದೊಡ್ಡ ಮಾನವ ಜಾತಿಯ ವ್ಯಾಖ್ಯೆ ಅದ. ಏನು ಅಂತ ಕೇಳಿದ್ರ... ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಕೂಡಲೆ ನವೀನ ಜನನ ಆಗಬೇಕು. ಆದ್ರೆ ಹಾಗೆ ಆಗೋದಿಲ್ಲ. ನಾವು ಎಂತಹ ದುರ್ದೈವಿಗಳು. ಸೃಷ್ಟಿಯಲ್ಲಿ ನಿಸರ್ಗದಲ್ಲಿ ಕ್ಷಣಾಕ್ಷಣಕ್ಕೂ ಹೊಸತನ ಬರ್ತದ ಅದ್ರ ನಮ್ಮ ನಮ್ಮ ಜೀವನಗಳಲ್ಲಿ ಮಾತ್ರ ನಾವು ಅದೇ ತರಹ. ನಿನ್ನೆ ಉಂಡದ್ದೇ ಊಟ ನಿನ್ನೆ ಮಲಗಿದ್ದೇ ನಿದ್ದೆ. ತಮ್ಮಾ ನಿನ್ನಿನ ನಿದ್ದಿಗಿಂತ ಇವತ್ತಿನ ನಿದ್ದಿ ಹೊಸ ನಿದ್ದಿಯಾಗಬೇಕು. ನಿನ್ನೆ ಉಂಡ ಊಟಾನೇ ನಾವು ಉಂಡಿರಬಹುದು. ಆದ್ರೆ ನಾವು ಹೊಸದಾಗಿ ಊಟ ಮಾಡಬೇಕು. ಜೀವನ ಹೊಸದು ಆಗಬೇಕು. ನಿತ್ಯ ನಿತ್ಯ ಹೊಸದು ಆಗಬೇಕು ಅನ್ನೋದು ಬಹಳ ಮಹತ್ವದ್ದದೆ. ಅದು ಆಗಬೇಕಾತಂದ್ರ ಹ್ಯಾಗೆ ದೇಹ ಸ್ನಾನ ಮಾಡಿದ ಮೇಲೆ ಶುದ್ಧ ಆಗ್ತದಲ. ಹಾಗೆ ಮನಸ್ಸು ಸ್ನಾನ ಮಾಡಲಿಕ್ಕೆ ಕಲೀಬೇಕಪ್ಪ.' ಹೀಗೆ ಅನೇಕ ಸಂಗತಿಗಳನ್ನ ಉದಾಹರಣೆ ಮೂಲಕವಾಗಿ, ಕಥೆಗಳ ಮೂಲಕವಾಗಿ ಹೇಳ್ತಾ ಇದ್ರು. ಶಿಕ್ಷಣದ ಬಗ್ಗೆನು ಒಂದು ದಿವ್ಸ ಭಾಳ ಸಂತೋಷದ ಸಂಗತಿಯನ್ನ ಹೇಳಬೇಕಾದ್ರ ಒಂದು ಕಥೆ ಹೇಳಿದ್ರು. ಏನು ಆ ಕಥೆ ಅಂದ್ರ ಬಾಳ ವಿಚಿತ್ರ ಕಥೆ ಅದು. ಆ ಕಥೆಯೇನು ಹೊಸದು ಅಂತಲ್ಲ, ಎಷ್ಟೋ ಜನರಿಗೆ ಗೊತ್ತೂ ಇರಬಹುದು. ಅವ್ರು ಕಥೆಗಳನ್ನು ಭಾಳ ಚಂದ ಹೇಳ್ತಿದ್ರು. ಆ ಕಥೆ ಒಂದು ರಾಷ್ಟ್ರ ಆ ರಾಷ್ಟ್ರದೊಳಗ ಕಣ್ಣಿದ್ದವರೇ ಇಲ್ಲ, ಎಲ್ಲಾ ಕುರುಡರೇ ಇದ್ದಾರೆ. ಆದರೆ ಅಂತಹ ರಾಜ್ಯದಲ್ಲಿ ಒಂದು ಸಲ ಒಂದು ಮಗು ಹುಟ್ತದೆ. ಆ ಮಗೂಗೆ ವರ್ಷ ಆದ ಕೂಡಲೆ ತನ್ನ ತಾಯಿ ಜೊತೆ ಮಾತಾಡಲಿಕ್ಕೆ ಹತ್ತತದ. ನೋಡು ಆ ಹಸುರು ಬಣ್ಣ ಹೆಂಗದ ನೋಡು, ಈ ಜಿಂಕೆ ನೋಡು, ಆ ಚಂದ್ರ ನೋಡು ಹ್ಯಾಗೆ ಹೊಳಿತಾ ಇದ್ದಾನೆ. ಆ ಹೂವಿನ ಬಣ್ಣ ನೋಡು ಹ್ಯಾಗೆ ಇದೆ ಅಂತ ಮಾತಾಡಲಿಕ್ಕ ಹತ್ತಿತು. ಅವ್ರ ಮನಿಯೊಳಗ ಗಾಬರಿ ಆದ್ರು. ಏನೋಪ್ಪ ಇದು ಭಾಳ ವಿಚಿತ್ರ ಆಗೇದ್ಯಲ. ತಂದೀಗೂ ಕಾಳಜಿ ಆತು, ಅಜ್ಜ ಎಲ್ಲರಿಗೂ ಕಾಳಜಿ. ನೆರೆಮನೆಯವ್ರಿಗೂ ಏ ಅವ್ರ ಮನೆಯಾಗ ಒಂದು ಹುಡುಗ ಹುಟ್ಟ್ಯದ. ಆ ಹುಡುಗನಿಗೆ ಏನೋ ತಿಳೀಲಾರದ ಜಡ್ಡಾಗೇದಂತ. ಯಾಕ್ರಿ ಹೆಂಗ್ ಜಡ್ಡಾಗೇದ? ಹೀಗ್ ಮಾತಾಡ್ತದದು...

ಅದು ನೋಡು ಇದು ನೋಡು ಅಂತ ಏನೇನೋ ಹೇಳ್ತದದು. ಆಮೇಲೆ ದೊಡ್ಡ ವೈದ್ಯನ್ನ ಕರ್ಸಿದ್ರು. ಅಂವ ಬಂದ. ಅವ್ನು ಕುರುಡ್ನೆ. ಆ ರಾಜ್ಯವೇ ಕುರುಡರದ್ದು. ಆ ಕುರುಡರ ರಾಜ್ಯ. ಅಂವ ಕೂಸಿನ್ನ ಮಲಗ್ಸಿ ಅದರ ಕಾಲಿಂದ ಹಿಡಿದು ಎಲ್ಲಾ ಕಡೆ ತನ್ನ ಕೈ ಆಡಿಸ್ಗೋತ ಆಡಿಸ್ಗೋತ ಮುಖದ ತನಕ ಬರ್ತಾನ. ಬಂದ ಕೂಡಲೆ ಅವನ ಎರಡು ಕೈಗಳಿಗೆ ಕಣ್ಣು ಹತ್ತತಾವ. ಹ್ಞಾಂ! ಇಲ್ಲ್ಯದ ನೋಡು ರೋಗ. ಏನು ರೋಗ ಅಂತಂದ್ರ ಈ ಮಗುವಿಗೆ ಹುಟ್ತಾನೆ ಒಂದು ವಿಚಿತ್ರವಾದಂಥ ತುಂಬಾ ವಿರಳವಾದಂಥ ಒಂದು ರೋಗ ಆಗಿದೆ. ಆದ್ರೆ ಬಹಳ ಕಾಳಜಿ ಮಾಡೋ ಕಾರಣ ಇಲ್ಲ. ನನ್ನ ಕಡೆ ಸುಲಭವಾದ ಉಪಾಯಗಳವೆ. ಏನು ಸುಲಭವಾದ ಉಪಾಯ ಅಂದ್ರೆ. ಇದೇನು ರೋಗ ಈ ಎರಡು ಕಣ್ಣು ಅವಲ್ಲ. ಈ ಕಣ್ಣುಗಳನ್ನ ಕಿತ್ತಿಹಾಕಿಬಿಟ್ರ ಮುಗಿದುಹೋಯ್ತು. ಈ ಹುಡುಗ ಹಿಂಗ ಮಾತಾಡೋದನ್ನ ಬಿಡತದ. ಕಣ್ಣ ತೆಗೆದ ಮೇಲೆ ಅದು ಮಾಯೋದು ಇರ್ತದಲ, ಒಂದೆರಡು ತಿಂಗಳ ಪಥ್ಯ ಗಿಥ್ಯ ಮಾಡೋದಿರ್ತದ ಔಷಧ ಕೊಡತೇವಿ. ಏನು ಬಹಳ ಕಾಳಜಿ ಮಾಡಬೇಡ್ರಿ ಅಂತ ಹೇಳಿ ಆ ಎರಡು ಕಣ್ಣುಗಳನ್ನ ತೆಗಿತಾನಂತ ಅಂವ. ಬೇಂದ್ರೆಯವರು ಈ ಕಥೆಯನ್ನ ಬಹಳ ವಿಷಾದದಿಂದ ಹೇಳ್ತಾ ಇದ್ರು. 'ಯಾಕೆ ಹೇಳ್ತೇನಿ ಗೊತ್ತದೇಯೇನು ಅಂದ್ರ, ನಮ್ಮ ದೇಶದಲ್ಲಿಯ ಶಿಕ್ಷಣದ ಪದ್ಧತಿ ಹೀಗೆ ಇದೆ. ಜನ್ಮತಃ ಮಕ್ಕಳಿಗೆ ಕುತೂಹಲ, ವಿಸ್ಮಯ, ತಿಳ್ಕೊಬೇಕಂಬೊ ಆತುರ, ಕಾತರ ಎಲ್ಲಾ ಇರ್ತದೆ. ಅದನ್ನೇ ಕಡಿತಿವಿ ನಾವು. ನೋಡು ಜೀವನದಲ್ಲಿ ಬಾಳ ದೊಡ್ಡ ದುರಂತ ಏನು ಅಂತ ಕೇಳಿದ್ರೆ passion for truth easily silenced by the undisputed authoritative answers. ಇದು ಆಗಬಾರದು ಎಂಬೋದು ಬಹಳ ಮಹತ್ವದ ಮಾತದ'. ಆದ್ದರಿಂದನೇ ಬೇಂದ್ರೆಯವರು ಒಂದು ಪ್ರಶ್ನೆಗೆ ಒಂದೇ ಉತ್ತರ ಇರ್ತದೆ ಅಂತೇನು ಹೇಳ್ತಿದ್ದಿಲ್ಲ. ಎಷ್ಟೋ ಉತ್ತರ ಇರಬಹುದು. ಆ ಉತ್ತರಗಳು ನಿನ್ನ ಬೆಳವಣಿಗೆ ಪ್ರಕಾರ ಇರ್ತಾವ. ನೀನು ಬೆಳೀಬೇಕು.

ಅವರು ಒಂದು ಮೋಜಿನ ಮಾತು ಹೇಳಿದ್ರು. 'ನೋಡು ಪ್ರಶ್ನೆಗಳು ಇರ್ತಾವಲ್ಲ, ಆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಯಾರಿಂದಲೂ ಹುಡುಕಲಿಕ್ಕೆ ಹೋಗಬ್ಯಾಡ ನೀನು. ನೀನು ಉತ್ತರ ಕಂಡ್ಕೊಳ್ಳಲಿಕ್ಕೆ ಪ್ರಯತ್ನ ಮಾಡು. ಅದು ಭಾಳ ಮಹತ್ವದ ಸಂಗತಿ. ಉತ್ತರಗಳು ನಿನ್ನವಾದ್ರೆ ನೀನು ಕಣ್ಣು ತೆಗೆದು ನಡ್ಕೊತಿ'. ಹೀಗೆಲ್ಲಾ ಹೇಳ್ತಾ ಇದ್ರು.

ಇನ್ನೊಂದು ನೆನಪಿಗೆ ಬರ್ತೇನಿ. ಒಂದು ದಿವಸ ಬೆಳಗು ಮುಂಜಾನೆ ನಾವಿಬ್ರೂ ಕಾಲೇಜಿಗೆ ಹೋದ್ವಿ. ಸೂಟಿ ಇತ್ತು ಅವತ್ತು. ಲಗು ಹೋದೇವು. ನಮ್ಮ ದಯಾನಂದ ಕಾಲೇಜಿಗೆ ದೊಡ್ಡ ಕ್ರೀಡಾಂಗಣ ಇತ್ತು. ಆ ಕ್ರೀಡಾಂಗಣದೊಳಗ ಹುಡುಗುರು ಫುಟ್‌ಬಾಲ್ ಆಡ್ತಿದ್ರು. ನನಗೆ ಸ್ಪಷ್ಟ ನೆನಪಿದೆ. ೫೪ ವರ್ಷ ಆಗಿತ್ತು ಆಗ ಬೇಂದ್ರೆ ಅವ್ರಿಗೆ. ಹುಡುಗರನ್ನೆಲ್ಲಾ ನೋಡಿದ್ರು. ಎಲ್ಲಾ ಹುಡುಗ್ರಿಗು ಅವ್ರ ಪರಿಚಯ ಇತ್ತು. ಅವ್ರು ಕನ್ನಡ ಪ್ರಾಧ್ಯಾಪಕರಾದ್ರೂನು, ಹೆಚ್ಚಾಗಿ ಅವ್ರು ಅಲ್ಲಿಯ ಜನಜೀವನದಲ್ಲೇ ಬೆರೆತಿದ್ರು. ಕ್ರೀಡಾಂಗಣಕ್ಕೆ ಇಳಿದ್ರು, ಇಳಿದವ್ರೆ ಗಂಡುಗಚ್ಚೆ ಹಾಕಿದ್ರು. ಆಮೇಲೆ ಹುಡುಗ್ರು ಕೇಳಿದ್ರು 'ಏನ್ ಸರ್ ಗಂಡುಗಚ್ಚೆ ಹಾಕಿ ಕ್ರೀಡಾಂಗಣಕ್ಕೆ ಬಂದ್ರಿ. ಹೇ ಫುಟ್‌ಬಾಲ್ ಆಡಬೇಕಂತ ಇಚ್ಛಾ ಆಗೇದ? ಬ್ರಿ' ಹುಡುಗ್ರು. ಬೇಂದ್ರೆಯವ್ರು ನಗುನಗ್ತಾ ಹೋಗಿ ಗ್ರೌಂಡ್ ನಾಗ ನಿಂತ ಮೇಲೆ ಒಬ್ಬಂವ ಕೇಳಿದ; 'ನೀವ್ರು ಎಲ್ಯಾಡಬೇಕಂತಿರಿ? ಗೋಲ್‌ಕೀಪರ್ ಆಗ್ತೀರೊ, ಫಾರ್ವರ್ಡ್ ಆಗ್ಬೇಕಂತೀರೋ? ಏನೋ ಇರ್ತಾವಲ ಇಂತಾದ್ದು ಅಂತಾದ್ದು ಆಗಬೇಕಂತಿರೊ?' ಆ

ನಗೆಯೊಳಗೆ ಅಪ್ಪಿಗೆ ಏನ್ ಅನ್ನಿಸ್ತು. 'ಮುದುಕ ಬೇಂದ್ರೆ ಆಡ್ತಾನ. ೨ ನಿಮಿಷ ಸುಮ್ನೆ ಹುರುಪಲೆ ಬಂದಾನ' ಅಂತ ಅಪ್ಪಿಗೆ ಭ್ರಮಾ ಆಗಿತ್ತು. ಬೇಂದ್ರೆಯವ್ರು ಹೇಳಿದ್ರು ನಗನಗ್ತಾ, 'ಏನಪ್ಪಾ... ನನಗೆ ವಯಸ್ಸಾಗದ ನಿಜ. ಆದ್ರೆ, ನೀವು ಎಲ್ಲಿ ಆಡು ಅಂತೀರಿ ಅಲ್ಲೆ ಆಡ್ತೇನಿ' ಅಂದ್ರು. ಆಮೇಲೆ ಸುಮ್ನೆ ಕೆಣಕಬೇಕಂತ ಒಬ್ಬ ಹುಡುಗ ಏನಂದ, 'ಇಲ್ಲಿ, ಗೋಲ್‌ಕೀಪರ್ ಏನು ಬ್ಯಾಡ. ಫಾರ್ವರ್ಡ್ ಅಂತೇನೋ ಇರ್ತದಲ ಅದು ಆಡಿ.' 'ಆಗಲಿ' ಬೇಂದ್ರೆಯವರು ಒಂದು ಗಂಟೆಯವರೆಗೆ ಆ ವಯಸ್ಸಿನಲ್ಲಿಯೂ ಅವರು ದಣಿಲಾರದೆ ಆಡಿದ್ರು. ಇದು ಬಾಳ ಅದ್ಭುತವಾದ ಸಂಗತಿ. ಇಂಥಾದ್ದನ್ನು ಮಾಡಿದ್ರು ಅಂಬೋದು ಕರ್ನಾಟಕದಾಗ ಬಾಳ ಮಂದಿಗೆ ಗೊತ್ತಿಲ್ಲ. ಅವ್ರು ಸಣ್ಣವರಿದ್ದಾಗ ಆಡಿರ್ಬೋದು. ಆದ್ರೆ ಆ ದಿವಸ ಬೇಂದ್ರೆಯವರು ಅಲ್ಲಿ ಏನು ಹುಡುಗ್ರ ಮನಸ್ಸನ್ನ ಗೆದ್ರು, ಪಾಧ್ಯಾಪಕರ ಮನಸ್ಸನ್ನ ಗೆದ್ರು. ಇದು ಬಾಳ ಅದ್ಭುತವಾಗಿತ್ತು.

ಹಾಗೆ ಒಂದು ಸಲ ಏನಾಯ್ತು ಅಂತಂದ್ರೆ ಹೀಗೆ ನಾವು ಅಡ್ಡಾಡ್ತಾ ಇರೊ ಮುಂದ ಒಂದು ಸಲ ಯಾವುದೊ ಒಂದು ಬ್ಯಾಂಕ್ ಇರೊ ದಾರಿನಾಗ ಬಂದ್ವಿ. ಆ ಬ್ಯಾಂಕಿನಲ್ಲಿ ಬೇಂದ್ರೆಯವರ ವ್ಯವಹಾರ ಖಾತೆ ಇರ್ಲಿಲ್ಲ. ಅದು ದಯಾನಂದ ಕಾಲೇಜಿನವರ ಬ್ಯಾಂಕ್ ವ್ಯವಹಾರ ಎಲ್ಲಾ ಅಲ್ಲೆ. ಬೇಂದ್ರೆಯವರ ವ್ಯವಹಾರ ಎಲ್ಲಾ ನೋಡ್ಕೋತಾ ಇದ್ದದ್ದು ಬೇರೆ ಯಾರೊ. ವ್ಯವಹಾರ ಅನ್ನಲಿಕ್ಕೇನು ಬಾಳ ದೊಡ್ಡ ವ್ಯವಹಾರ ಏನು ಇದ್ದಿದ್ದಿಲ್ಲ. ಬೇಂದ್ರೆಯವ್ರು ಸಹ ಬ್ಯಾಂಕಿಗೆ ಹೋಗ್ತಿದ್ದಿಲ್ಲ. ಆದ್ರೆ ಅವತ್ತು ಅಪ್ಪಿಗೆ ಆ ಬ್ಯಾಂಕಿನಲ್ಲೊಂದು ಖಾತೆ ತೆರಿಬೇಕು ಅನ್ನೋ ತಲಿಯೊಳಗೆ ವಿಚಾರ ಬಂತು. ಬೇಂದ್ರೆಯವ್ರು ಬ್ಯಾಂಕಿನೊಳಗ ಹೊಕ್ರು. ಒಳಗ ಹೊಕ್ರೆ, ಬೇಂದ್ರೆಯವ್ರ ಪರಿಚಯ ಜನರಿಗೆ ಇತ್ತು ಅಂದ್ರೆ ಅಲ್ಲಿಯ ಗ್ರಾಹಕರು ಎದ್ದು ನಿಂತ್ರು, 'ಬೇಂದ್ರೆ ಬಂದಾರ... ಬೇಂದ್ರೆ ಬಂದಾರ...' ಅಂತ. ಒಳಗಿನ ಸಿಬ್ಬಂದಿ ಗೌರವದಿಂದ ಎದ್ದು ನಿಂತ್ರು ಬೇಂದ್ರೆಯವ್ರು ಬಂದಾರ. ಬೇಂದ್ರೆಯವ್ರ ದನಿ ಕೇಳಿ ಮ್ಯಾನೇಜರ್ ಹೊರಗ ಬಂದ್ರು. ಬೇಂದ್ರೆಯವ್ರನ್ನ ಕರ್ಕೊಂಡು ಒಳಗ ಹೋದ್ರು. ಆಮೇಲೆ ಒಂದು ಅರ್ಧಗಂಟೆಯವರೆಗೆ ಆ ಬ್ಯಾಂಕಿನ ವ್ಯವಹಾರ ಎಲ್ಲಾ ಎಷ್ಟು ನಿಶ್ಶಬ್ದ ಆಗಿತ್ತಲ್ಲ. ನಾನು ಹೇಳೊ ಮಾತನ್ನ ಬಹುಶಃ ಈಗಿನ ಕಾಲದ ಜನ ಸುಳ್ಳು ಅಂತ ತಿಳ್ಕೊಳ್ಳೊ ಅಷ್ಟು ಅವಿಶ್ವಸನೀಯ ಅನ್ನಿಸ್ತದ. ಬೇಂದ್ರೆಯವ್ರು ಮಾತು ಪ್ರಾರಂಭ ಆಗಿತ್ತು. 'ಖಾತೆ ತೆಗಿಬೇಕಂತ ಮಾಡೇನಿ.' ಆಮೇಲೆ ಅಪ್ಪಿಗೆ ಒಂದು ರೀತಿ ವ್ಯವಹಾರದೊಳಗಿಂದ ಹೇಳಬೇಕಂದ್ರ ವ್ಯವಹಾರ ಜ್ಞಾನ ಕಡಿಮೆ. ಅಂದ್ರೆ ಬ್ಯಾಂಕಿನ ಖಾತೆ ತೆಗ್ಯೋದು ಹ್ಯಾಗೆ ಅಂಬೋದು ಕೂಡಾನು ಅಪ್ಪಿಗೆ ಗೊತ್ತಿದ್ದಿಲ್ಲ. ಅನೇಕ ಫಾರ್ಮ್‌ಗಳಿದ್ವು. ಆ ಫಾರ್ಮ್ ತುಂಬೂದು ಸಾಧ್ಯ ಇರ್ಲಿಲ್ಲ. ಮ್ಯಾನೇಜರ್ ಹೇಳಿದ್ರು 'ಎಲ್ಲಾ ನಾನು ಮಾಡ್ತೇನಿ. ನೀವು ಕೇವಲ ಹಸ್ತಾಕ್ಷರ ಹಾಕೋದು.' ಆಮೇಲೆ ಒಳಗೆ ಕ್ಲರ್ಕ್ ಬಂದು ಏನೇನೊ ಫಾರ್ಮ್‌ಗಳನ್ನೆಲ್ಲ ತುಂಬಿದ. ಮುಂದೇನಂದ, 'ನಿಮ್ಮ ಗುರುತು ಹಿಡಿಯೋದಕ್ಕ ಒಬ್ಬ ಸಾಕ್ಷಿ ಬೇಕಲ್ಲಾ' ಅಂತಂದ. 'ನಾ ಬೇಂದ್ರೆ ಇದ್ದೀನಿ' ಅಂದ್ರು. 'ಹೌದ್ರಿ ನೀವು ಬೇಂದ್ರೆ ಇದ್ದೀರಿ. ನಮಗೂ ಗೊತ್ತು. ಎಲ್ಲರಿಗೂ ಗೊತ್ತು. ಊರ ಮಂದಿಗೆಲ್ಲಾ ಗೊತ್ತು. ಆದ್ರೆ, ಬ್ಯಾಂಕಿನೊಳಗ ಮಾತ್ರ ಈ ಬ್ಯಾಂಕಿನೊಳಗ ಖಾತೆ ಇರೋ ಅಂತಹ ಒಬ್ಬ ಮನುಷ್ಯ ನಾನು ನಿಮ್ಮನ್ನ ಗುರುತು ಹಿಡೀತೇನಿ, ನೀವು ಸಜ್ಜನರಿದ್ದೀರಿ ಅಂತ ನೀವು ಮೋಸಗಾರರಲ್ಲ ಅಂತನ್ನೋ ಹಾಗೆ ಬರೀಬೇಕಾಗ್ತದ.' ಮ್ಯಾನೇಜರ್ ವಿನೋದ ಮಾಡಿದ್ರು. ಬೇಂದ್ರೆಯವರು ಬ್ಯಾಂಕಿನ ಬಗ್ಗೆ ಒಂದರ್ಧ ಗಂಟೆ ಭಾಷಣ ಮಾಡಿದ್ರು. ಒಂದು ಸಣ್ಣ ಮಾತು ಹೇಳಿದ್ರು, 'ನಂದು ಬಾಳ ಅಂದ್ರ ಒಂದು ನೂರಿನ್ನೂರು ರೂಪಾಯಿ ಅಕೌಂಟ್ ಇರಬಹುದು.

ಇಷ್ಟೆಲ್ಲಾ ನೀವು ಕಾಳಜಿ ತಗೊಳ್ಳೊ ಮುಂದ, ಮತ್ತೆ ಈ ಸಾವಿರಗಟ್ಟಲೆ ಅಪರಾಧ ಯಾಕಾಗ್ತಾವ?' ನಮಗ ಗೊತ್ತಿಲ್ಲ ಅಂತ ಅವ್ರು ಹೇಳಿದ್ರು. ಆಗಿನ ಕಾಲಕ್ಕ ಅಪರಾಧಗಳು, ಮಿಸ್‌ಅಪ್ರಾಪ್ರಿಯೇಷನ್ ಅಂಬೋದು ಸಾವಿರದಾಗೊ ಲಕ್ಷದಾಗೊ ಇರ್ತಿತ್ತು. ಈಗಿನಂಗ ಕೋಟಿಗಟ್ಟಲೆ ಇರಲಿಲ್ಲ.

ಒಂದರ್ಧ ಗಂಟೆಯವರೆಗೆ ಬೇಂದ್ರೆ ಬ್ಯಾಂಕಿನ ಕುರಿತು, ಅಪರಾಧ ಆಗೋದರ ಕುರಿತು, ಧನವನ್ನು ಕುರಿತು ಮಾತಾಡಿದ್ರು. ಆಮೇಲೆ ಬೇಂದ್ರೆಯವ್ರು ಹೊರಟ್ರು. ಅರ್ಧ ಗಂಟೆಯವರೆಗೆ ಅಲ್ಲಿನ ಜನ ಎಲ್ಲಾ ಬೇಂದ್ರೆಯವ್ರ ಮಾತನ್ನ ಕೇಳಿ ಆನಂದಿಸಿದ್ರು. ಅದಕ್ಕಿಂತ ಹೆಚ್ಚಿನ ಆಶ್ಚರ್ಯ ಅಂತಂದ್ರ, ಮರುದಿವ್ಸ ಸ್ಥಾನಿಕ ಮರಾಠಿ ವೃತ್ತಪತ್ರಿಕೆಯೊಳಗ ಫ್ರಂಟ್‌ಪೇಜಿನ ಮ್ಯಾಲ ಒಂದು ದೊಡ್ಡ ವಿಶೇಷ ನ್ಯೂಸ್-ಬಾತ್ಮಿ ಅಂತಾರಲ್ಲ ಅದು ಪ್ರಕಟ ಆಗಿತ್ತು; ಇಂಥಿಂಥ ಬ್ಯಾಂಕ್‌ಗೆ ಪ್ರಾಧ್ಯಾಪಕ, ಕವಿವರ ಬೇಂದ್ರೆಯವರ ಸಂದರ್ಶನ. ಬೇಂದ್ರೆಯವರು ಬ್ಯಾಂಕಿನ ವ್ಯವಸಾಯ ಕುರಿತು, ಧನ ವಿನಿಯೋಗ ಕುರಿತು ಅರ್ಧಗಂಟೆಯವರೆಗೆ ಉಪನ್ಯಾಸ ಮಾಡಿದ್ರು. ಕಳಸೋ ಮುಂದ ಬ್ಯಾಂಕಿನ ಮ್ಯಾನೇಜರ್ ಒಂದು ಪುಷ್ಪಗುಚ್ಛ, ಒಂದು ಹೂವಿನ ಹಾರ, ಒಂದು ತೆಂಗಿನಕಾಯಿ, ಒಂದು ಪೇಡೇದ ಕಟ್ಟು ಕೊಟ್ಟಿದ್ರು. ಬೇಂದ್ರೆಯವರು ಆ ಪೇಡೆದ ಕಟ್ಟು ತೆಗೆದು ಅಲ್ಲಿನ ಸಿಬ್ಬಂದಿಗಳು, ಬಂದಿದ್ದ ಗಿರಾಕಿಗಳು ಎಲ್ಲರಿಗೂ ಒಂದೊಂದೊಂದು ಪೇಡೆ ಹಂಚಿದ್ರು. ಬರಿಗೈಯಲ್ಲೆ ನಾನು ಬೇಂದ್ರೆ ಮನೀಗೆ ಹೋದ್ವಿ. ಇಂತಾದ್ದು ಒಂದು ಅದ್ಭುತವಾದ ಸಂಗತಿ. ಯಾವುದೋ ಒಬ್ಬ ಗ್ರಾಹಕ ಬಂದು ಬ್ಯಾಂಕಿನ ವ್ಯವಹಾರದ ಬಗ್ಗೆ ಒಂದು ಅರ್ಧಗಂಟೆವರೆಗೆ ಸಂತೋಷದ ಮಾತುಗಳನ್ನಾಡಿ ಜನರ ಮನಸ್ಸು ತೃಪ್ತಿ ಪಡಿಸಿದ ಎಂಬೋದು ಎಷ್ಟು ಮಹತ್ವದ್ದು.

ಒಮ್ಮೆ ಏನಾತು ಅಂದ್ರ ಬೇಂದ್ರೆಯವರು ಧಾರವಾಡದಿಂದ ಎಂಎಸ್‌ಎಂ ಸ್ಟೇಷನ್ ಗಾಡಿ ಇತ್ತಲ್ಲ ಆಗಿನ ಕಾಲಕ್ಕ ಆ ಗಾಡೀಲೆ ಸೊಲ್ಲಾಪುರಕ್ಕೆ ಬಂದ್ರು. ಬೆಳಗಮುಂಜಾನೆ ಅಲ್ಲಿಗೆ ಗಾಡಿ ಬಂತು. ನಾನು ರೈಲ್ವೆ ಸ್ಟೇಷನ್‌ಗೆ ಅವನ್ನ ಕರ್‍ಕೊಂಡು ಬರಬೇಕಂತ ಹೋಗಿದ್ದೆ. ಅವ್ರು ನಾಲ್ಕೈದು ಜನ ಇದ್ರು. ಬೇಂದ್ರೆಯವರ ಸಾಮಾನೇನು ಭಾಳ ಇರ್‍ಲಿಲ್ಲ. ಧಾರವಾಡದಿಂದ ಒಬ್ರು ಶ್ರೀಮಂತರು ಸೊಲ್ಲಾಪುರಕ್ಕೆ ಬರುವವರು ಇದ್ರು. ಅವ್ರು ಸೊಲ್ಲಾಪುರದವರೆ. ಬೇಂದ್ರೆಯವರ ಪರಿಚಯ ಒಂದೇ ಡಬ್ಬಿಯೊಳಗ ಕೂತು ಎಲ್ಲರೂ ಬಂದ್ರು. ಬರೋ ಮುಂದೆ ಅವ್ರು ದಾರಿಯಲ್ಲೇನಂದ್ರು, 'ಬೇಂದ್ರೆಯವ್ರೆ, ನಮ್ಮ ಸಾಮಾನು ಬಾಳ ಅವ ಟಿಕೀಟು ಒಂದೇ ಅದ. ಅದ್ದರಿಂದ ನಮ್ಮ ನಿಮ್ಮ ಟಿಕೀಟು ಎಲ್ಲಾ ಒಂದೇ ಮಾಡಿಕೊಳ್ಳೋಣು. ನಮಗ ತೊಂದರೆಯಾಗೋದಿಲ್ಲ.' ಬೇಂದ್ರೆಯವ್ರು ಒಪ್ಪಿದ್ರು. ಬೇಂದ್ರೆಯವ್ರ ಕಡೆ ಏನು ಟಿಕೀಟು ಇರ್ತಿದ್ದಿಲ್ಲ. ಬೇಂದ್ರೆಯವರ ಮಗನ ಕಡೆ ಟಿಕೀಟು ಇರ್ತಿತ್ತು. ಮಗನ ಕಡೀಂದ ಅವ್ರು ಟಿಕೀಟು ಇಸ್ಕೊಂಡ್ರು. ರೈಲ್ವೆದಿಂದ ಸೊಲ್ಲಾಪುರಕ್ಕ ಬಂದ್ರು. ಸೊಲ್ಲಾಪುರದಲ್ಲಿ ಕೆಳಗಿಳಿದ ಮೇಲೆ ಬೇಂದ್ರೆಯವ್ರು, ಆ ಶ್ರೀಮಂತ ಮನುಷ್ಯನಿಗೆ 'ನಮ್ಮ ಟಿಕೀಟು ನಮಗ ಕೊಡಪ್ಪಾ' ಅಂತಂದ್ರು. ಶ್ರೀಮಂತ 'ನಿಂದರ್‍ರಿ' ಅಂತಂದ್ರು. ಅಂವ ಕೆಳಗಿಳ್ದು ಕೂಲಿಯವನ ಜತೆ ಜಗಳ ತೆಗ್ದ. ಸಾಮಾನು ಭಾಳ ಇದ್ವು. ಕೂಲಿಯವ ಇಷ್ಟು ಅಂತೇನೋ ಬೇಡ್ತಿದ್ದ. ಅಂವ ಇಷ್ಟು ಅಂತೇನೋ ಹೇಳ್ತಿದ್ದ. ಬೇಂದ್ರೆಯವ್ರು ಹೇಳಿದ್ರು, 'ಅಪಾ, ಲಗು ಕೊಡು ನಮ್ ಟಿಕೀಟ. ಹೊತ್ತಾಗ್ತದ ನಾವು ಮನೀಗ್ ಹೋಗ್ಬೇಕು.' ಹೀಗನ್ನೋ ಮುಂದ ಅಂವ ಅಂದ 'ತಡೀರಿ, ತಡೀರಿ ಕೂಲಿ ನಿಶ್ಚಯ ಮಾಡ್ತೀನಿ.' 'ಏನ್ ಕೂಲಿ ನಿಶ್ಚಯ ಮಾಡ್ತೀಯಪಾ. ಅಂವ ಬಡಪದ್ದಾನ. ಬಂದಿಷ್ಟು ದುಡ್ಡು ಕೊಟ್ರ ಹೆಚ್ಚೇನು ನಿಂದು ಹೋಗ್ತದ ಗಂಟು.' ಅಂವ ಶ್ರೀಮಂತ, ಭಾಳ ಸಿಟ್ಟಿಗೆ ಬಂದ.

'ದುಡ್ ದುಡ್ ಅಂತ ಅಂತೀಯಲ್ಲ ನೀನು ದುಡ್ಡಿಗೇನು ಕಿಮ್ಮತ್ತದ ನಿನಗ್ ಗೊತ್ತಿಲ್ಲ. ನಿನಗೇನು ಗೊತ್ತದ ಸುಮ್ ಕೂಡು ನಾ ವ್ಯವಹಾರ ಮಾಡ್ತೇನಿ.' ಬೇಂದ್ರೆಯವರಿಗೆ ಸಿಟ್ ಬಂತು. 'ತಮ್ಮಾ, ನನ್ನ ಟಿಕೀಟ್ ತಗೊಂಡು, ನೀ ನನ್ ಮ್ಯಾಲಽ ದರ್ಪ ಮಾಡ್ತಿ' ಹೇಳಿ, ಆ ರೈಲ್ವೆಸ್ಟೇಷನ್ ಮ್ಯಾಲೆ ಧನವನ್ನು ಕುರಿತು ಒಂದರ್ಧ ಗಂಟೆ ಉಪನ್ಯಾಸ ಮಾಡಿದ್ರು. ಮೋಜಿನ ಸಂಗತಿ ಅಂತಂದ್ರ, ಆ ರೈಲ್ವೆಸ್ಟೇಷನ್ನಿನಾಗ ಗದ್ದಲ ಇರ್ಲಿಲ್ಲ. ಟಿಸಿ ಬಂದು ನಿಂತ, ಸ್ಟೇಷನ್ ಮಾಸ್ಟರ್ ಬಂದು ನಿಂತ್ರು. ಪೋರ್ಟರ್ಸ್ ಬಂದು ನಿಂತ್ರು... ಬೇಂದ್ರೆಯವ್ರ ಭಾಷಣದೊಳಗ ನಗಿ ಬಾಳ ಇರ್ತಿತ್ತು. ಆಮೇಲೆ ಅದಕ್ಕಿಂತ ಹೆಚ್ಚಿನದಂದ, ಆ ರೈಲ್ವೆಸ್ಟೇಷನ್ನಿನಾಗ ಆ ಕಡೆ ಹಳಿ ದಾಟಿದ್ರೆ ಕ್ವಾರ್ಟರ್. ಅಲ್ಲಿ ಇರೊ ಸಿಬ್ಬಂದಿ ಎಲ್ಲಾ ಕರ್ನಾಟಕದ ಸಿಬ್ಬಂದಿ. ಬೇಂದ್ರೆಯವ್ರ ಬಗ್ಗೆ ಗೊತ್ತು, ಬೇಂದ್ರೆಯವ್ರ ದನಿ ಕೇಳಿ ಗೊತ್ತು. ಬೇಂದ್ರೆಯವ್ರ ದನಿ ಅಬ್ಬರದಾಗೆ ಇತ್ತು. ಬೇಂದ್ರೆ ಬಂದಾರಂತ ಹೆಣ್ಮಕ್ಕಳೆಲ್ಲ ಹೊರಗೆ ಕೂಡಿ ನಿಂತ್ರು. ಅರ್ಧ ಗಂಟೆಯವರೆಗೆ ಧನವನ್ನು ಕುರಿತು ಬೇಂದ್ರೆ ರಸಾಳವಾಗಿ ಮಾತನಾಡಿದ್ರು. ಆಮೇಲೆ ಆ ಶ್ರೀಮಂತ ಕೂಡಾನು ಆ ಕೂಲಿಯವನ ಜತೆ ಜಗಳ ಬಿಟ್ಟು ಮಾತು ಕೇಳ್ಕೊತ ನಿಂತಿದ್ದ. ಇಂಥಾದ್ದು ಅವ್ರ ಮಾತಿನ ಮೋಡಿ. ಆಮೇಲೆ ಬೇಂದ್ರೆಯವ್ರದ್ದು ಹೀಗೆ ವೈಶಿಷ್ಟ್ಯ ಹೇಳಿಕೋತ ಹೋದ್ರ ಅದು ಮಾತು ಮುಗೀಲಾರದ್ದು. ಆದ್ರೂ ಒಂದು ಮಾತು ಹೇಳ್ತೇನಿ ನಿಮಗೆ. ಒಂದ್ಸಲ ನಾವು ಮಾತಾಡ್ತಾ ಕೂತಾಗ-ನಾನೊಂದು ನಿಬಂಧ ಬರೆದಿದ್ದೆ. ಆ ನಿಬಂಧದೊಳಗ ಕೆಲವು ಶಬ್ದಗಳಿದ್ವು. ಆ ಶಬ್ದಗಳನ್ನ ನೋಡಿ ವಿಚಾರ ಮಾಡಿದ್ರು. ಏನೇನೂ ಮಾತಾಡ್ದೆ ಒಂದು ಕಥೆ ಹೇಳಿದ್ರು. ಒಂದು ದಿವ್ಸ ತೈಮೂರ್‌ಲಂಗ ಸ್ನಾನ ಮಾಡಿ ನಿಂತಿದ್ದ. ಅಲ್ಲೊಬ್ಬ ಕವಿ ಇದ್ದ. ಅವನು ಆಸ್ಥಾನ ಕವಿ. ಆ ಕವೀನ್ನ ಕರ್ದು ಕೇಳಿದ ಏನಪ್ಪಾ ಈಗ ನಾ ನಿಂತೇನಲ್ಲ ಹೀಂಗ ನನ್ನನ್ನ ಮಾರಿದ್ರ ಎಷ್ಟು ದುಡ್ಡು ಬರ್ತದ ಅಂತ ಕೇಳಿದ. ಆಗ ಆ ಕವಿ ಹೇಳ್ತಾನ 'ಒಂದು ಹತ್ತು ಸಹಸ್ರ ವರಹ ಬರಬಹುದಪ್ಪಾ ನಿನಗ.' ಆಮೇಲೆ ತೈಮೂರ್‌ಲಂಗನಿಗೆ ಕೋಪ ಬರ್ತದ. 'ಏನಂತಾನಂವ ಹತ್ತು ಸಹಸ್ರ ಯಾಕೆ? ಅದ್ಕಿಂತ ಹೆಚ್ಚು ನನ್ನ ಮೈಮೇಲೆ ಹಾಕ್ಕೊಂಡಿದೀನಲ ಈ ಮುತ್ತಿನ ಶಲ್ಯ, ಈ ಮುತ್ತಿನ ಶಲ್ಯಕ್ಕ ಅಷ್ಟು ಬೆಲೆ ಬರ್ತದ' ಅಂದ. ಕವಿ ಹೇಳ್ತಾನ ನಾನು ಹೇಳಿದ್ದು ಅದಕ್ಕ. ನಿನಗೇನು ಬೆಲೆ ಅದ, ನಿನ್ನೇನು ಕೊಂಡ್ಕೊತಾರ. ನೀ ಕುಂಟ ನಿನ್ನ ತಗೊಂಡು ಏನು ಮಾಡ್ತಾರ ಅಂತಂದ.' ನಾನು ನಕ್ಕೆ, ಬೇಂದ್ರೆಯವ್ರೂ ನಕ್ರು, ಆದ್ರೆ ಮಾತು ಮುಂದೆ ಬೆಳೆಸಿದ್ರು. 'ಈ ಕಥೆ ನಿನಗ್ಯಾಕೆ ಹೇಳಿದೆ ಗೊತ್ತಾತೇನು?' ಕೇಳಿದ್ರು. 'ಇಲ್ಲಾ' ಹೇಳಿದೆ. 'ನಾನು ಬರೀ ನೀ ನಗಬೇಕು ಅಂತ ಹೇಳಿಲ್ಲ, ನಗೋದಕ್ಕಾಗಿ ಆಡಿದ ಕಥೆ ಅಲ್ಲ ಇದು.' 'ಯಾಕ ಹೇಳಿದ್ರಿ.' 'ನೀ ವಿಚಾರ ಮಾಡು' ಅಂದ್ರು. 'ಇದೇನು ನೀ ನಿಬಂಧ ಬರ್ದೀಯಲ್ಲ ಈ ನಿಬಂಧಕ್ಕು, ಈ ನಿಬಂಧದೊಳಗ ಬರೆದ ಶಬ್ದಗಳಿಗು ಮತ್ತು ಈ ಕಥೆಗೂ ಬಾಳ ದೊಡ್ಡ ನಿಕಟ ಸಂಬಂಧ ಅದ ನೋಡಿರಿ.' ಸಂಬಂಧ ಅಂತ ನಾ ಕೇಳಿದೆ. 'ನೀ ವಿಚಾರ ಮಾಡು' ಅಂದ್ರು. ನಾನೇನು ವಿಚಾರ ಮಾಡ್ಲಿ, ನನಿಗೆ ಹೊಳೀವಲ್ದು ಏನು. ಅವ್ರು ಹೇಳಿದ್ರು- 'ನೋಡು ಇದರೊಳಗ ನೀನು cosmic consciousness ಅಂತೊಂದು ಶಬ್ದ ಹಾಕಿ. ನೋಡು ತಮ್ಮಾ ನಿನ್ನ ನಾಲಗೆ ಎತ್ತಲಾರದಂಥ ಶಬ್ದ ಎತ್ತಲಿಕ್ಕೆ ಹೋಗ್ಬೇಡ, ಆಡ್ಲಿಕ್ಕೆ ಹೋಗ್ಬೇಡ. ನೋಡು ತೈಮೂರ್‌ಲಂಗನಿಗೆ ಏನ್ ಬೆಲೆ ಇತ್ತು ಅದು ಎಕ್ಸ್‌ಟರ್ನಲ್. ಇಂಟ್ರೆನ್ಸಿಕ್-ಆಂತರಿಕ ಬೆಲೆ ಇರ್ಲಿಲ್ಲ. ಆದ್ದರಿಂದ ನೀನು ನಿನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಬಹಿರಂಗದ ಮೇಲೆ ಅವಲಂಬಿಸಬೇಡ. ಯಾವುದೊ ಒಂದು ಮುಖವಾಡ ಹಾಕಬೇಡ. ಬಾಳ ಮಹತ್ವದ ಮಾತದ ಅಂತ ತಿಳ್ಕೊ. ಯಾಕಂದ್ರ ನೀನು earth consciousness, super consciousness, cosmic consciousness ಅಂತ

ಹಿಂಗೆ ಏನೇನೋ ಶಬ್ದ ಹಾಕಿದಿ ಅಂದ್ರ... ನೀನಿರೊದು ಎಲ್ಲಿ, ನೀನಿಂತಹ ಶಬ್ದಗಳನ್ನ ಯಾಕಾಡ್ತಿ? ನಿನ್ನ ಬೆಲೆಯನ್ನ ಏರಿಸಿಕೊಳ್ಳೋದಕ್ಕಾಗಿ ಇಂತಾ ಮಾತು ನೀ ಆಡ್ತಿ. ನೀನು ಬೆಳಿ, ನೀನು ಬೆಳ್ದಂಗ ಭಾಷಾ ಬೆಳೀತದ ಹೊರ್ತಾಗಿ, ಭಾಷೆಗಳಿಂದ ನಿನ್ನ ಹೃದಯ ಬೆಳೆಯೊದಿಲ್ಲ. ಭಾಷೆಗೂ ಹೃದಯಕ್ಕೂ ಬಾಳ ದೊಡ್ಡ ಸಂಬಂಧ ಇದೆ. ಆದ್ರೆ ಭಾಷೆಗಳು, ಭಾಷೆಯ ಶಬ್ದಗಳು ನಿನ್ನ ಅಂತಃಕರಣದಾಗ ಶೇಖರಿಸಿಟ್ಟ ನಾಣ್ಯ ಆಗ್ಬಾರ್ದು. ನಡೆಯೋ ನಾಣ್ಯ ಆಗ್ಬೇಕು. ನೀನು ಬೆಳೀಬೇಕು.'


ಅವ್ರು ಭಾಳ ಮೋಜಿನ ಮಾತು ಹೇಳಿದ್ರು. 'ನೋಡು ಎಲ್ಲಾ ಪ್ರಶ್ನೆಗಳು ಇರ್ತಾವಲ್ಲ, ಆ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಯಾರಿಂದಲೂ ಹುಡುಕಲಿಕ್ಕ ಹೋಗ್ಬೇಡ ನೀನು. ನೀನು ಉತ್ತರ ಕಂಡ್ಕೊಳ್ಳಲಿಕ್ಕೆ ಪ್ರಯತ್ನ ಮಾಡು. ಅದು ಬಾಳ ಮಹತ್ವದ ಸಂಗತಿ ಇದೆ. ಉತ್ತರಗಳು ನಿನ್ನವಾದ್ರ ನೀನು ಕಣ್ಣು ತೆಗೆದು ನಡ್ಕೋತಿ.'

ಒಂದ್ಸಲ ಸಹಜವಾಗಿ ನಾನು ಅವ್ರ ಕಡೆ ಹೋಗಿದ್ದೆ. ಹೋದಾಗ 'ಒಂದು ಕವಿತಾ ನನಗ ಅರ್ಥವಾಗವಲ್ದು' ಅಂದೆ. ಊಟಕ್ಕೊತಿದ್ರು ಅವ್ರು. 'ಓದು' ಅಂದ್ರು. ಓದೋಕ್ಕಿಂತ ಮೊದಲು 'ಕವಿತಾ ಯಾವ ಭಾಷಾದಾಗದ' ಅಂತ ಕೇಳಿದ್ರು. 'ಕನ್ನಡದಾಗದ' ಅಂತಂದೆ. 'ನಿನಗ ಕನ್ನಡ ಬರ್ತದೇನು?' 'ಬರ್ತದ' 'ಆದ್ರ ಕವಿತಾ ತಿಳಿದಿಲ್ಲೇನು?' ಕೇಳಿದ್ರು. 'ತಿಳಿದಿಲ್ಲಾ.' 'ಇದು ಹೆಂಗ ಸಾಧ್ಯ? ಕವಿತಾರೆ ಕನ್ನಡದಾಗೆ ಇರ್ಲಿಕ್ಕಿಲ್ಲ. ನಿನಗೆ ಕನ್ನಡಾನೆ ಬರ್ತಿರ್ಲಿಕ್ಕಿಲ್ಲ. ಕವಿತಾ ತಿಳಿಯೂದಿಲ್ಲ ಅಂದ್ರೇನು. ಕವಿತಾ ಹೃದಯದ ಮಾತಿರ್ತದ. ಕವಿತಾ ತಿಳಿಲಿಕ್ಕೇನೆ ಬೇಕು.' ನಾನು ಆಗ ಕವಿತೆಯನ್ನ ಓದಿದೆ. 'ಹಿಂಗ ಓದಿದ್ರ ಎಂತಹವ್ರಿಗೂ ತಿಳಿಯೂದಿಲ್ಲ.' ಓದೋ ಪದ್ಧತಿಯನ್ನ ತೋರಿಸಿದ್ರು. ಹ್ಯಾಗೆ ಓದಬೇಕು ಅನ್ನೋದನ್ನ ಹೇಳಿದ್ರು. ಒಂದು ಬಾಳ ಮಹತ್ವದ ಮಾತು ಹೇಳಿದ್ರಲ್ಲಾ ಕಲಿಯೋದು ಅಂತಂದ್ರೆ ಅದು ಬಾಳ ಮುಖ್ಯವಾದದ್ದು. ಕಲಸೋದು ಮುಖ್ಯವಲ್ಲ ಅಂತ ಹೇಳಿದ್ರು. ಓದೋದು ಕೂಡಾನು ಅವ್ರು ಕಲ್ಸಿದ್ರು ಹಲವು ರೀತಿಯಿಂದ. ಒಂದ್ಸಲ ಏನಾಯ್ತು 'ಅನ್ನ ಗಬಗಬ ತಿನ್ನಬಾರ್ದು.' ಅಂತಂದ್ರು . ಅಂದ್ರೆ ಪಂಚೇಂದ್ರಿಯ ಪ್ರೀತಿಯನ್ನು ಪಡೀಬೇಕು. ಅದು ಬಹಳ ಮಹತ್ವದ್ದು. ನಿಮ್ಮ ಐದೂ ಇಂದ್ರಿಯಗಳವಲ್ಲ ಆ ಐದೂ ಇಂದ್ರಿಯಗಳು ಜೀವಂತವಾಗಿರಬೇಕು ಅನ್ನೋದು ಬಾಳ ಮಹತ್ವದ್ದು. ಕೆಲವರಿಗೆ ಕೆಲವು ಇಂದ್ರಿಯಗಳು ಸತ್ತೇ ಹೋಗಿರ್ತಾವ. ಹಂಗ ಆಗ್ಬಾರ್ದು. ಅವುಗಳಿಗೆ ಜನ್ಮ ಕೊಡಬೇಕು. ಆ ಇಂದ್ರಿಯಗಳನ್ನ ಕಳ್ಕೋಬಾರ್ದು. ಇದು ಬಾಳ ಮಹತ್ವದ ಸಂಗತಿ ಅದ. ಒಂದ್ಸಲ ಒಂದು ಮೋಜಿನ ಸಂಗತಿಯಾಯ್ತು. ಅನೇಕ ಸಂಗೀತಗಾರರು ಕೂಡಿದ್ರು. ಕುಮಾರ ಗಂಧರ್ವರು, ಭೀಮಸೇನ ಜೋಷಿ ಅವ್ರು, ಜಿತೇಂದ್ರ ಅಭಿಷೇಕಿ ಹೀಗೆಲ್ಲಾ ದೊಡ್ಡ ದೊಡ್ಡ ಸಂಗೀತಗಾರರು ಕೂಡಿದ್ರು. ಬೇಂದ್ರೆಯವ್ರು ಇದ್ರು. ಸ್ವಲ್ಪ ಮಾತಾಡ್ತಾ ಮಾತಾಡ್ತಾ ಬೇಂದ್ರೆಯವ್ರು ಒಂದು ಪ್ರಶ್ನೆ ಕೇಳಿದ್ರು ಸಂಗೀತಗಾರರ ಹತ್ರ. ಏನು ಆ ಪ್ರಶ್ನೆ- ವಿಚಿತ್ರ ಇದೆ ನೋಡಿ ಆ ಪ್ರಶ್ನೆ. 'ಶೃತಿ ಎಷ್ಟು' ಕೇಳಿದ್ರು '೨೨', ಸ್ವರಗಳು ಎಷ್ಟು? ಅಂತ ಕೇಳಿದ್ರು. '೭' ಅಂದ್ರು. 'ಅಬ್ಬಾ' ಅಂದ್ರು. 'ಅಂದ್ರೆ ಇಪ್ಪತ್ತೆರಡು ವಿಳಾಂಶ್.' ಅಂದ್ರೆ ಶೃತಿಗು ಮತ್ತು ಸ್ವರಗಳಿಗು ಇರುವ ಅನ್ಯೋನ್ಯ ಸಂಬಂಧವನ್ನು ಕುರಿತು ಚರ್ಚಾ ಮಾಡ್ಲಿಕ್ಕ ಹತ್ತಿದ್ರು. ಆ ಸಂಗೀತಗಾರರು ಆಶ್ಚರ್ಯಪಟ್ರು. ಆಮೇಲಂದ್ರು 'ನಮಗಿದೆಲ್ಲಾ ಗೊತ್ತಿಲ್ಲ. ನಮಗ ಹಾಡೋದಷ್ಟೆ ಗೊತ್ತು.' ಇನ್ನೂ ಒಂದು ಬಾಳ ಮಹತ್ವದ ಮಾತಂದ್ರು-ಅದರೊಳಗ ಈ ಸಪ್ತಸ್ವರಗಳಿಗೆ ಒಂದೆರಡು ಹೆಸರು, ಒಂದು 'ನಿ' ಅಂಬೊ ಸ್ವರಕ್ಕ 'ನಿಷಾದ' ಅಂತಾರೆ. ಇನ್ನೊಂದು ಸ್ವರಕ್ಕೆ 'ಗ' ಗಾಂಧಾರ ಅಂತಾರೆ. ಬೇಂದ್ರೆಯವ್ರ

ತಲಿಯೊಳಗ ಏನು ಯೋಚನೆ ಬಂತು ಅಂತಂದ್ರ ಆ ಆ ಜನಾಂಗದ ಹೆಸರಿರ್ಬೇಕು. ಪಂಚಮ, ಷಡ್ಜ ಹೀಗಿರ್‍ಲಿಕ್ಕಿಲ್ಲ. ಅವುಗಳಿಗೂ ಹೀಗೆ ಏನೋ ಸಂಸ್ಕೃತಿ ವಾಚಕಗಳಂತಹ ಏನೊ ಸಂಬಂಧ ಇರಬೇಕು. ಈ ಸಂಸ್ಕೃತಿಗೂ ಸಂಗೀತಕ್ಕೂ ಪರಸ್ಪರ ಏನೇನೊ ಸಂಬಂಧ ಇರಬಹುದು ಅಂತಂದ್ರು. ಅವ್ರ ರೀತಿಗಳಲ್ಲಿ ನನಗೊಂದು ಲೆಕ್ಕ ಕೊಟ್ರು. ಇಲ್ಲಿ ಒಬ್ರು ಬೆಳಗಾಂವಿಯಿಂದ ಬಂದಂತಹ ಕಮಿಷನರ್ ಇದ್ರು. ಕಾರ್ಪೊರೇಷನ್ನದ್ದ ಚೀಫ್ ಕಮೀಷನರ್ ಇದ್ರು. ಅವ್ರ ಹೆಸರು ಚೌಧರಿ ಅಂತ. ಅವ್ರು ಇಂಗ್ಲೆಂಡಕ್ಕ ಹೋಗಿ ರ್‍ಯಾಂಗ್ಲರ್ ಆಗಿ ಬಂದವ್ರು. ಬೇಂದ್ರೆಯಪ್ಪಿಗೆ ಗಣಿತದ ಬಗ್ಗೆ ಭಾಳ ಆಸಕ್ತಿ ಅಂತ ಅವ್ರು ಕರ್‍ದಿದ್ರು. ಅಲ್ಲಿ ಅವರ ಆಫೀಸ್ನಲ್ಲಿ ನಾನು ಜತೆ ಇದ್ದೆ. ಇದ್ದಾಗ ಭಾಳ ಒಂದು ಮೋಜಿನ ಸಂಗತಿಯಾಯ್ತು. ಆಲ್ಫಾಬೆಟ್ ಕನ್ನಡ ವರ್ಣಮಾಲೆಯನ್ನ ತೆಗೆದುಕೊಂಡು ಅವ್ರೊಂದು ಆಕೃತಿ ತೆಗೆದು ತೋರ್‍ಸಿದ್ರು. ಹದಿನಾರು ಸ್ವರಗಳು, ಒಂಬತ್ತು ಯ,ರ,ಲ,ವ ಇವು ಹೀಗೆ, ೨೫ ವರ್ಗೀಯ ವ್ಯಂಜನಗಳು ಏನ್ ಹೇಳಿದ್ರು, ಇದು ಪೈಥಾಗೊರಸ್‌ನ ಥಿಯರಂ ಅದ ಅಂತ ಹೇಳಿದ್ರು. ಇದು ಸಂಪೂರ್ಣವಾದ ಅಕ್ಷರ ಮಾಲಿಕೆ. ಇನ್ನೊಂದು ನಕ್ಷತ್ರ ಮಾಲಿಕೆ ಅಂತಿದ್ರು ಅವ್ರು. ಎ,ಬಿ,ಸಿ,ಡಿ ಇವೆಲ್ಲಾ ನಕ್ಷತ್ರಗಳು ಅಂದೆ ಇಪ್ಪತ್ತಾರು. ಸಂಪೂರ್ಣ ವರ್ಣಮಾಲೆ. ಹೀಗೆ ಹೇಳ್ತಾ ಹೇಳ್ತಾ ಅಪ್ಪಿಗೊಂದು ಲೆಕ್ಕಾ ಕೊಟ್ರು. ಆ ಲೆಕ್ಕ ಅಪ್ಪಿಗೆ ಕಲ್ಪನೆ ಬರ್‍ಲಿಲ್ಲ. ಅಂದ್ರೆ ಇಂತಾದ್ದೊಂದು ತ್ರಿಕೋನ ತೆಗ್ಯೋದು ಬರ್‍ಲಿಲ್ಲ. ಇನ್ನೊಂದು ಲೆಕ್ಕಾ ಹೇಳಿದ್ರು ಅವ್ರು. ನಾನು ಕೇಳಿದೆ ಇದು ತಗೊಂಡು ಏನು ಮಾಡೋದು ಅಂತ. ೧೧,೧೨,೧೩. ಈ ಮೂರು ಅಂಕಿ ತಗೊ ಅಂತಂದ್ರು. ೧೧ರ ವರ್ಗ ೧೨೧, ೧೨ರ ವರ್ಗ ೧೪೪, ೧೩ರ ವರ್ಗ ೧೬೯ ಅಂತ ಹೇಳಿದ್ರು. ಇವುಗಳನ್ನು ಉಪರಾಟಿ ಮಾಡು ಅಂತಂದ್ರು. ೧೧ರ ಉಪರಾಟಿ ೧೧, ೧೨೧ರ ಉಪರಾಟಿ ೧೨೧, ೧೨ರ ಉಪರಾಟಿ ೨೧, ೧೪೪ರ ಉಪರಾಟಿ ೪೪೧, ಆಮೇಲೆ ೧೩ರ ಉಪರಾಟಿ ೩೧, ೧೬೯ರ ಉಪರಾಟಿ ೯೬೧. ಇವೆಲ್ಲಾ ವರ್ಗಗಳವ ಅಂತ ಹೇಳಿದ್ರು. ಆಮೇಲೆ ಮಾಡಿ ನೋಡಿದೆ. ಹೌದು ಅವು ವರ್ಗಗಳವ. ಇಂಥಾ ಇನ್ನೊಂದು ಮೂರು ಅಂಕಿ ಹುಡುಕು ನೋಡೋಣು ಅಂತಂದ್ರು. ನಾನು ಹೇಳಿದೆ. ನನಗೇನು ಆಗತ್ತ ಇಲ್ಲಾ ಅಂತಂದೆ. ಹೀಗೆ ಅನೇಕ ಸಂಗತಿಗಳನ್ನು ಹೇಳ್ತಾ ಹೋದ್ರೆ ಅವರನ್ನ ಕುರಿತು ಮಾತಾಡೋದು ಭಾಳ ಮಹತ್ವದ್ದು. ಒಂದು ರೀತಿಯಿಂದ ಅವ್ರು ಮಹಾಪುರುಷರು ಅಥವಾ ಆರಾಧನಾ ಭಾವದಿಂದ ನಾನು ಮಾತಾಡ್ತಾ ಇಲ್ಲ. ಅವ್ರ ಜೀವನದಿಂದ ನಾನು ಬಹಳಷ್ಟನ್ನು ಕಲಿತೆ. ಕಲಿತದ್ದನ್ನ ನಿಮ್ಮ ಜೊತೆ ಹಂಚಿಕೊಂಡೆ. ಅವಕಾಶಕ್ಕಾಗಿ ನಾನು ಕೃತಜ್ಞನಾಗಿದ್ದೇನೆ. ಇಷ್ಟು ಸಾಕು ಅಂತ ತಿಳ್ಕೊಳ್ತೇನೆ ನಾನು.

(ಸೊಲ್ಲಾಪುರದಲ್ಲಿ ಸ್ನೇಹಿತರ ಜತೆ ಹಂಚಿಕೊಂಡ ನೆನಪುಗಳು.)

ಮಾತಿನಿಂದ ಬರಹಕ್ಕೆ : **ರಾಧೀಕಾ ನಡಹಳ್ಳಿ**



ಕ್ರೌರ್ಯದ ನಡುವೆ 'ಪ್ಯಾಪಿಲಾನ್' ಸ್ವಾತಂತ್ರ್ಯದ ಹಂಬಲ

ಡಾ. ನಟರಾಜ್ ತಲಘಟ್ಟಪುರ

ಕನ್ನಡದ ಮಹತ್ವದ ಲೇಖಕರಲ್ಲಿ ಒಬ್ಬರಾದ ಪೂರ್ಣಚಂದ್ರ ತೇಜಸ್ವಿ ಕನ್ನಡಕ್ಕೆ ಅಪಾರವಾದ ಹಾಗೂ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಅವರ ಸ್ವಂತ ರಚನೆಗಳು, ಅನುವಾದಗಳು ಈ ಎರಡು ಬಗೆಯ ಕೃತಿಗಳಲ್ಲಿ ಪ್ರಧಾನವಾಗಿ ಪರಿಸರ ಪ್ರಜ್ಞೆಯೊಂದು ಕೆಲಸ ಮಾಡಿದೆ. ಪರಿಸರದ ನೆಪದಲ್ಲೇ ಜಗತ್ತಿನ ವೈವಿಧ್ಯಮಯವಾದ ಭೌಗೋಳಿಕವಾದ ಸತ್ಯಗಳನ್ನು, ಚಹರೆಗಳನ್ನು, ಜೀವ ವೈವಿಧ್ಯತೆಗಳನ್ನು ಓದುಗನಿಗೆ ತನ್ನದಲ್ಲದ ಜಗತ್ತೊಂದನ್ನು ನೀಡುವಲ್ಲಿ, ಅವನು ಅದನ್ನು ತನ್ನದು ಎಂಬಂತೆ ಅನುಭವಿಸುವಂತೆ ಕಟ್ಟಿಕೊಟ್ಟಿದ್ದಾರೆ.

ಜಗತ್ತಿನ ಮಹಾಪಲಾಯನಗಳಲ್ಲಿ ಒಂದಾದ ಪ್ಯಾಪಿಲಾನ್‌ನ ಪಲಾಯನದ ಸತ್ಯ ಕಥೆಯೊಂದನ್ನು ತೇಜಸ್ವಿ ತಮ್ಮ ಕಿರಿಯ ಗೆಳೆಯ ಪ್ರದೀಪ್ ಕೆಂಜಿಗೆ ಅವರೊಡಗೂಡಿ ಕನ್ನಡಕ್ಕೆ ತಂದಿದ್ದಾರೆ. ಸುಮಾರು ಸಾವಿರಕ್ಕೂ ಹೆಚ್ಚು ಪುಟಗಳ 'ಪ್ಯಾಪಿಲಾನ್' ಎಂಬ ಈ ಕೃತಿಯನ್ನು ಲೇಖಕರು ಎರಡು ಸಂಪುಟಗಳಲ್ಲಿ ಐದುನೂರ ಇಪ್ಪತ್ತೂರು ಪುಟಗಳಲ್ಲಿ ಕನ್ನಡೀಕರಿಸಿದ್ದಾರೆ. ಹೆನ್ರಿ ಛಾರೇರೆ, ಹೆನ್ರಿ ಶಾರಿಯರ್ ಅಥವ ಪ್ಯಾಪಿಲಾನ್ ಎಂಬ ವ್ಯಕ್ತಿಯ ಸತ್ಯಕಥೆ ಇದು. ೮೫ ವರ್ಷಗಳ ಹಿಂದೆ ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ನಡೆದ ಸತ್ಯಘಟನೆ ಈ ಕೃತಿಯ ವಸ್ತುವಾಗಿದೆ.

ತನ್ನ ಹನ್ನೊಂದನೆಯ ವಯಸ್ಸಿಗೆ ತಾಯಿಯನ್ನು ಕಳೆದುಕೊಂಡವನು ಪ್ಯಾಪಿಲಾನ್. ಫ್ರಾನ್ಸ್‌ನ ಆರ್ಡಿಶ್ ಎಂಬ ಊರಿನವನಾದ ಛಾರೇರೆ ಇಪ್ಪತ್ತೈದು ವರ್ಷದ ತರುಣನಾಗಿದ್ದಾಗ-

ಗರಡಿ ತಾಲೀಮಿನಿಂದ ಹುರಿಗಟ್ಟಿದ ಅವನ ಆಜಾನುಬಾಹು ಶರೀರ ನೋಡಿದವರಿಗೆ ಮತ್ತೊಮ್ಮೆ ನೋಡುವ ಆಕರ್ಷಣೆ ಉಂಟು ಮಾಡುತ್ತಿತ್ತು. ಇಂತಹವನಿಗೆ ಮುದ್ದಿನ ಮಡದಿ ನೆನೆಟ್. ಮೋಜು, ಸಂಭ್ರಮ, ಸಂತೋಷದಲ್ಲಿ ಮುಳುಗಿದ್ದವನನ್ನು ೨೬ನೆ ಅಕ್ಟೋಬರ್ ೧೯೩೧ರಂದು ಪೊಲೀಸರು ದಸ್ತಗಿರಿ ಮಾಡಿ ಫ್ರಾನ್ಸ್‌ನ ಜೈಲಿಗೆ ತಳ್ಳುತ್ತಾರೆ. ಭೂಗತ ಜಗತ್ತಿನಲ್ಲಿ ನಡೆದ ಕೊಲೆಯೊಂದಕ್ಕೆ ಅವನಿಗೆ ಜೀವಾವಧಿ ಶಿಕ್ಷೆ ವಿಧಿಸುತ್ತಾರೆ.

ಪ್ಯಾರಿಸ್‌ನ ಸೂಳೆಗೇರಿಯಲ್ಲಿ ರೋಲ್ಯಾಂಡ್ ಎಂಬ ತಲೆಹಿಡುಕನ ಕೊಲೆಯಾಗುತ್ತದೆ. ರೋಲ್ಯಾಂಡ್ ಪೊಲೀಸರಿಗೆ ಗುಪ್ತ ಮಾಹಿತಿದಾರನಾಗಿ ಕಾರ್ಯನಿರ್ವಹಿಸುತ್ತಿದ್ದ ಎಂಬ ಗುಮಾನಿಯಿಂದ ಭೂಗತ ಜಗತ್ತು ಅವನನ್ನು ಕೊಂದಿರುತ್ತದೆ. ಇಂತಹ ವಾತಾವರಣದ ನಡುವೆ, ಕೊಲೆಗೈದ ದಿನವೇ ಅಪರಾಧಿಯನ್ನು ಹಿಡಿದೆವು ಎಂದು ಅಧಿಕಾರಿಗಳಿಂದ, ಸಾರ್ವಜನಿಕರಿಂದ ಪ್ರಶಂಸೆ ಪಡೆಯುವುದಕ್ಕಾಗಿ, ಕೊಲೆಯಾದ ದಿನ ಅಲ್ಲಿದ್ದ ಪ್ಯಾಪಿಲಾನ್‌ನನ್ನು ಆರೋಪಿ ಎಂದು ಪೊಲೀಸರು ಬಂಧಿಸುತ್ತಾರೆ. ಪ್ಯಾಪಿಲಾನ್ ಸಹ ನೈಟ್‌ಕ್ಲಬ್‌ಗಳಲ್ಲಿ ಮೋಜು, ಕುಡಿತ, ಜೂಜಾಟಗಳನ್ನು ಮಾಡಿದವನಾಗಿರುತ್ತಾನೆ.

ಪ್ಯಾಪಿಲಾನ್ ಕೃತಿಯ ವಸ್ತು ಬಹಳ ಸಂಕೀರ್ಣ ಹಾಗೂ ಆಕರ್ಷವಾದದ್ದು. ಇದೊಂದು ಆತ್ಮಕಥೆಯಾಗಿದ್ದರೂ, ಪ್ರವಾಸಕಥನದಂತೆ, ಪರಿಸರ ಕಥಾಗುಚ್ಛದಂತೆ, ಪತ್ತೇದಾರಿ ಕಾದಂಬರಿಯಂತೆ, ದೃಶ್ಯಕಾವ್ಯದಂತೆ- ಹೀಗೆ ಬಹುಪದರುಗಳ, ಬಹು ಆಯಾಮಗಳ ಸಂಕೀರ್ಣ ಕಥನವಾಗಿದೆ. ಯಾವ ತಪ್ಪು ಮಾಡದೇ ಇದ್ದರೂ ಕೊಲೆಯ ಆಪಾದನೆ ಹೊತ್ತು ಪ್ಯಾರಿಸ್‌ನಿಂದ ಗಡೀಪಾರು ಶಿಕ್ಷೆ ಪಡೆದು ದಕ್ಷಿಣ ಅಮೆರಿಕದ ಫ್ರೆಂಚ್‌ಗಯಾನದ ದ್ವೀಪಗಳ ಕಾರಾಗೃಹಕ್ಕೆ ತಳ್ಳಲ್ಪಟ್ಟ ಅಮಾಯಕ ಪ್ಯಾಪಿಲಾನ್ ಹೋರಾಟದ ಕಥೆ ಇದು. ತನ್ನ ಇಪ್ಪತ್ತೈದನೆಯ ವಯಸ್ಸಿಗೆ ಈ ಶಿಕ್ಷೆ ಪಡೆದು ಹೊರಟವನು ಸತತ ಹದಿಮೂರು ವರ್ಷಗಳ ಕಾಲ ಸ್ವಾತಂತ್ರ್ಯದ ಹಂಬಲ ಹೊತ್ತು ತೆಂಗಿನಕಾಯಿ ಮೂಟೆಯನ್ನು ತೆಪ್ಪದಂತೆ ಬಳಸಿ, ಸಮುದ್ರಮಾರ್ಗದಿಂದ ಪಾರಾದ ರೋಚಕ ಸತ್ಯಕಥೆ. ಹಾಗೆಯೇ ಇಪ್ಪತ್ತನೆ ಶತಮಾನದ ಶ್ರೇಷ್ಠ ಕೃತಿಗಳಲ್ಲಿ ಇದೂ ಒಂದು.

ಇಂತಹ ಶ್ರೇಷ್ಠ ಕೃತಿಯನ್ನು ಅನೇಕ ಆಯಾಮಗಳಿಂದ ಚರ್ಚೆಗೆ ಒಳಪಡಿಸಬಹುದು. ವಸಾಹತುಶಾಹಿ ಸಂದರ್ಭದ ಜೈಲುಗಳ ಅವ್ಯವಸ್ಥೆಯ ಕ್ರೌರ್ಯದ ಸ್ವರೂಪವನ್ನು ಅರ್ಥೈಸುವ ದೃಷ್ಟಿಕೋನದಿಂದ, ಸಮಾಜ ಶಾಸ್ತ್ರದ ದೃಷ್ಟಿಕೋನದ ಮೂಲಕ, ಆಂಥ್ರೋಪಾಲಜಿ ಅಪ್ರೋಚ್‌ಗೆ ಒಳಪಡಿಸುವ ಮೂಲಕ ಮನಃಶಾಸ್ತ್ರೀಯ ಹಿನ್ನೆಲೆಯಲ್ಲಿ, ಪ್ರಾಣಿಶಾಸ್ತ್ರದ ಹಿನ್ನೆಲೆಯಲ್ಲಿ - ಹೀಗೆ ಹಲವಾರು ವಸ್ತು ವೈವಿಧ್ಯತೆಗಳ, ವಸ್ತುಸತ್ಯಗಳನ್ನು ಒಳಗೊಂಡ ಪ್ಯಾಪಿಲಾನ್ ಅಧ್ಯಯನಕ್ಕೆ ಯೋಗ್ಯವಾದ ಕೃತಿಯಾಗಿದೆ. ಇಲ್ಲಿ ಈ ನನ್ನ ಚರ್ಚೆಯಲ್ಲಿ ಕೃತಿಯ ಸಮಗ್ರವಾದ ಒಳನೋಟಗಳನ್ನು ಗ್ರಹಿಸಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದೇನೆ.

ಜೈಲಿಗೆ ತಳ್ಳಲ್ಪಟ್ಟು ಆತನನ್ನು ಅಪರಾಧಿ ಎಂದು ತೀರ್ಮಾನಿಸಿದ ಆ ಕ್ಷಣವೇ ನ್ಯಾಯಾಧೀಶರನ್ನು ಕುರಿತು ಹೀಗೆ ಹೇಳುತ್ತಾನೆ: ''ಥ್ಯಾಂಕ್ಸ್. ಹದಿವಯಸ್ಸಿನ ಹುಡುಗನೊಬ್ಬನ ಭವಿಷ್ಯಕ್ಕೆ ತಣ್ಣೀರೆರಚಿದ್ದಕ್ಕೆ, ಬಾಳ ಚಿಗುರನ್ನು ಬುಡಕ್ಕೆ ಕೊಯ್ದು ಕರ್ತವ್ಯ ಪ್ರಜ್ಞೆ ಮೆರೆದಿದ್ದಕ್ಕೆ'' ಆತನ ಆರಂಭದ ಈ ಮಾತುಗಳೇ ಫ್ರಾನ್ಸ್‌ನ ಅಂದಿನ ಪೊಲೀಸ್ ಹಾಗೂ ನ್ಯಾಯವ್ಯವಸ್ಥೆಯ ವಿರುದ್ಧದ ಬಂಡಾಯಗಾರನನ್ನಾಗಿಸುತ್ತದೆ. ಜೈಲಿನ ಕೊಠಡಿಗೆ ನಿರ್ದಾಕ್ಷಿಣ್ಯವಾಗಿ ತಳ್ಳಲ್ಪಟ್ಟಾಗ ಅವನಾಡುವ

ಮಾತು, ಥ್ಯಾಂಕ್ಸ್ ವಾರ್ಡನ್ ಧೈರ್ಯವಾಗಿದ್ದೇನೆ. ಏನೂ ತೊಂದರೆ ಇಲ್ಲ...ಆದರೆ ಈ ತರಹದ ಅಮಾನುಷ ವ್ಯವಸ್ಥೆಯಿಂದ ಈ ದೇಶಕ್ಕೆ ಒಳ್ಳೆಯದಾಗೊಲ್ಲ ಇದು ಅವನ ಅರಿವಿನ ಪ್ರಜ್ಞೆಯ ಮಾತಾಗಿದೆ. ಹೀಗೆ ದಿಟ್ಟ ನಿರ್ಧಾರದಲ್ಲಿ ಗಟ್ಟಿ ಮನಸ್ಸು, ಹುರಿಗಟ್ಟಿದ ದೇಹದವ ಒಂದು ನಿರ್ಧಾರಕ್ಕೆ ಬರುತ್ತಾನೆ. ಕೊಳೆತು ನಾರುತ್ತಿರುವ ಈ ವ್ಯವಸ್ಥೆಯ ವಿರುದ್ಧ ಹೋರಾಡುತ್ತಾ ಮುದುಕನಾಗಿ ಸಾವನ್ನು ಎದುರು ನೋಡುವುದಕ್ಕಿಂತ ತಪ್ಪಿಸಿಕೊಂಡು ಪಲಾಯನಗೈಯುವುದೇ ಉತ್ತಮ ಮಾರ್ಗ. ನೆಮ್ಮದಿಯ ಬದುಕಿಗೆ ಅದೊಂದೇ ದಾರಿ. ಇಂತಹ ಅವನ ದೃಢ ನಿರ್ಧಾರವು ಅವನಿಗೆ ಅಲ್ಲಿಂದ ಹೊರಬರಲು ಸಹಾಯಕವಾಗುತ್ತದೆ. ಪಲಾಯನ ಮಾಡಿ ಬಂದ ಪ್ಯಾಪಿಲಾನ್ ಜೈಲಿನ ತನ್ನ ಕಥೆಯನ್ನು ಬರೆಯುತ್ತಾನೆ. ಅದು ಪ್ರಕಟವಾಗುತ್ತದೆ. ಈ ಕೃತಿಯ ಮೂಲಕ ಫ್ರಾನ್ಸ್ ಸರ್ಕಾರ ತನ್ನ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತದೆ. ಇದು ಇತಿಹಾಸ.

ಇಂಗ್ಲೆಂಡ್ ಮುಂತಾದ ಐರೋಪ್ಯ ರಾಷ್ಟ್ರಗಳು ಪ್ರಬಲವಾಗುತ್ತಾ ಬಂದಂತೆಲ್ಲ ತಮ್ಮಲ್ಲಿನ ಹಣ, ಅಧಿಕಾರದಿಂದ ಸಂಪತ್ತಿನ ಲೂಟಿಗಾಗಿ ಅನೇಕ ರಾಷ್ಟ್ರಗಳನ್ನು ತಮ್ಮ ವ್ಯಾಪಾರ ಕೇಂದ್ರವನ್ನಾಗಿಸಿಕೊಂಡವು. ಹಾಗೆಯೇ ಅಲ್ಲಿ ತಮ್ಮ ಅಧಿಕಾರ ದರ್ಪ ಆಡಳಿತವನ್ನು ಭದ್ರಪಡಿಸಿಕೊಂಡವು. ಇಂತಹ ವಾತಾವರಣದ ನಡುವೆ ಬದುಕುವ ಅನಿವಾರ್ಯತೆ, ದುರಾಸೆಗಳಿಂದ ಸ್ಥಳೀಯ ಜನರನ್ನು ಇನ್ನಿಲ್ಲದಂತೆ ದಮನ ಮಾಡಲು ತೊಡಗಿದವು. ಇಂತಹ ಸಂದರ್ಭದಲ್ಲೇ ಜಗತ್ತಿನ ಅತ್ಯಂತ ಕ್ರೂರ ಜೈಲುಗಳು ಸೃಷ್ಟಿಯಾದದ್ದು. ಅಂಡಮಾನ್‌ನ ಸೆಲ್ಯೂಲಾರ್ ಜೈಲು, ಅಲ್ಲಿನ ಕರಿನೀರಿನ ಶಿಕ್ಷೆ, ಗೋವಾದ ನೆಲಮಾಳಿಗೆ ಅಥವಾ ಸುರಂಗ ಮಾದರಿಯ ಜೈಲು... ಪ್ಯಾಪಿಲಾನ್ ಕೃತಿಯಲ್ಲಿ ಕಂಡುಬರುವ ಅಸಂಖ್ಯ ಜೈಲುಗಳ ಕ್ರೌರ್ಯ.

ಇಂತಹ ಜೈಲುಗಳಲ್ಲಿ ಕೊಳೆಯುವ ಪ್ಯಾಪಿಲಾನ್ ಮನುಷ್ಯನ ಬದುಕಿನ ಕ್ಷಣಿಕತೆ, ತನ್ನ ಸುತ್ತಲ ಕ್ರೌರ್ಯ, ದಾರುಣ ಸಾವುಗಳ ಸರಮಾಲೆಯನ್ನು ಕಂಡು, ಕಾಣುತ್ತಲೇ ಇತರರಂತೆ ಆತ್ಮಹತ್ಯೆ ಮಾಡಿಕೊಳ್ಳದೆ ತನ್ನ ಸ್ವಾತಂತ್ರ್ಯದ ಕನಸನ್ನು ಇನ್ನಷ್ಟು ವೃದ್ಧಿಸಿಕೊಳ್ಳುತ್ತಾನೆ. ತನ್ನ ಆರೋಗ್ಯದ ಸ್ಥಿರತೆ ಕಾಯ್ದುಕೊಳ್ಳುವಲ್ಲಿ, ತನ್ನ ಆತ್ಮಸ್ಥೈರ್ಯ ದೃಢಗೊಳಿಸುವಲ್ಲಿ ಹೆಚ್ಚು ಶ್ರಮಿಸುತ್ತಾನೆ. ಇವಕ್ಕಾಗಿ ಅಲ್ಲಿನ ಪರಿಕರಗಳನ್ನು, ಆಹಾರ ಇನ್ನಿತರ ಸಾಮಗ್ರಿಗಳನ್ನೇ ಬಳಸುವುದು ಅವನ ಸಂಕಲ್ಪದ ಶಕ್ತಿಯಾಗಿದೆ.

ಚೀನೀಯರು ಒಂದೊಂದೇ ಹನಿ ನೀರನ್ನು ನೆತ್ತಿಯ ಮೇಲೆ ಸುರಿಸುತ್ತಾ ಒಬ್ಬ ವ್ಯಕ್ತಿಯ ಚಿತ್ತವನ್ನು ಛಿದ್ರಮಾಡುವ ಕಲೆ ಕಲಿತಿದ್ದವರು. ಅದೇ ರೀತಿ ಫ್ರೆಂಚರು ನಿಶ್ಶಬ್ದದ ನಿಗೂಢ ಶಕ್ತಿಯನ್ನು ಉಪಯೋಗಿಸುತ್ತಿದ್ದವರು. ಇಂತಹ ಫ್ರೆಂಚ್‌ನ ಜೈಲುಗಳ ವಿವರಗಳು ಕೃತಿಯ ಉದ್ದಕ್ಕೂ ವಿವರವಾಗಿ ಚಿತ್ರಿತವಾಗಿವೆ. ಕಾರ್ಗತ್ತಲ ಪುಟ್ಟ ಕೋಣೆಯ ಜೈಲು, ಸಣ್ಣ ತಪ್ಪಿಗಾಗಿ ಹೆಡೆಮುರಿಕಟ್ಟಿ ನಾಯಿಯಂತೆ ಊಟ ಮಾಡುವಂತೆ ನಡೆಸಿಕೊಳ್ಳುವುದು, ಅತಿಯಾಗಿ ಉಪ್ಪು ಬೆರೆಸಿದ ನೀರಿನಲ್ಲಿ ಚಾಟಿ ಅದ್ದಿ ವ್ಯಕ್ತಿಯನ್ನು ಬೆತ್ತಲೆಗೊಳಿಸಿ ಚರ್ಮ ಕಿತ್ತು ಬರುವಂತೆ ಬಾರಿಸುವುದು, ಕೈಪುಗಳಲ್ಲಿ ಹುಬೆ ಬಿಡುವುದು, ಪ್ರತಿಭಟಿಸಿದರೆ ಗುಂಡಿನ ಮೊರೆತ, ಕರುಳು ಕಿತ್ತುಬರುವಂತೆ ಬೂಟುಗಾಲಿನ ಒದೆತ, ಬ್ಲಾಕ್‌ಹೋಲ್‌ಗಳಲ್ಲಿ ಹಾಕಿ ನೂರಾರು ದಿನಗಳು ಕೊಳೆತುಹೋಗುವಂತೆ ಮಾಡುವ ಶಿಕ್ಷೆ....

ಒಮ್ಮೆ ತಪ್ಪಿಸಿಕೊಂಡು ಹೋದ ಪ್ಯಾಪಿಲಾನ್ ಸಿಕ್ಕಿಬಿದ್ದ ನಂತರ ಬ್ಲಾಕ್‌ಹೋಲ್‌ಗೆ ತಳ್ಳುತ್ತಾರೆ. ಆಗ ಅಲ್ಲೇ ಇದ್ದವನೊಬ್ಬ ಹೇ ಕೇಳಿಲ್ಲಿ, ಬ್ಲಾಕ್‌ಹೋಲ್ ಎಂದರೆ ಮರಣಶಯ್ಯೆಗಳು... ನಿನ್ನ ಕೋಣೆಯ ಹಿಂಬದಿಯಲ್ಲಿ ಒಂದು ಮರದ ಹಲಗೆ ಇದೆಯಲ್ಲ ಅದು ಮಲಗುವ ಮಂಚ,

ಎಡಗಡೆ ಮೂಲೆಯಲ್ಲಿ ಒಂದು ಚೆಂಬು ಇದೆಯಲ್ಲವೇ ಅದರಲ್ಲಿ ನೀರಿದೆ. ಸುಮ್ಮನೆ ಅಪವ್ಯಯ ಮಾಡಬೇಡ. ದಿನಕ್ಕೆ ಒಂದೇ ಚೆಂಬು ಸಿಗುವುದು. ಬಲಗಡೆ ಮೂಲೆಯಲ್ಲಿ ಡಬ್ಬಾ ಇದೆಯಲ್ಲ ಅದು ಪಾಯಿಖಾನೆಗೆ. ಮಲವಿಸರ್ಜನೆಯಾದ ಮೇಲೆ ನಿನ್ನ ಮೇಲಂಗಿಯನ್ನು ತೆಗೆದು ಆ ಡಬ್ಬದ ಬಾಯಿಯನ್ನು ಮುಚ್ಚಿಬಿಡು. ನಾವೆಲ್ಲಾ ಹಾಗೇ ಮಾಡೋದು. ಇಲ್ಲದಿದ್ದರೆ ಗಬ್ಬುನಾತ. ನರಮನುಷ್ಯನೊಬ್ಬನಿಗೆ ಎದುರಾಗಬಹುದಾದ ಅಮಾನವೀಯ ಅನುಭವವೆಂದರೆ ಇದು. ಬ್ಲಾಕ್ ಹೋಲ್‌ಗಳನ್ನು ಸಮುದ್ರದ ಅಂಚಿನಲ್ಲೇ ನಿರ್ಮಿಸುತ್ತಿದ್ದರು. ಇಡೀ ಊರಿನ ಪಾಯಿಖಾನೆಯ ಹೊಲಸುನೀರು ಕೋಣೆ ಒಳಗೆ ನುಗ್ಗುವುದು. ಅದರಲ್ಲಿ ಈಜುವ ಹೆಗ್ಗಣಗಳು, ತೇಲಿಬಂದು ಸಿಕ್ಕ ಸಿಕ್ಕಲ್ಲಿ ಕಚ್ಚುವ ಏಡಿಗಳು. ಅನಂತರ ನೀರು ಬಸಿದು ಹೋದ ಮೇಲೆ ಅಲ್ಲೇ ಮಲಗಬೇಕು. ಗಲೀಜನ್ನೆಲ್ಲ ಬಳಿದು ಕೋಣೆಯಿಂದ ಹೊರನೂಕಬೇಕು. ಪ್ಯಾಪಿಲಾನ್ ಅನೇಕ ತಿಂಗಳುಗಳ ಕಾಲ ಇಲ್ಲಿ ಬದುಕುತ್ತಾನೆ. ಇಂತಹ ಬ್ಲಾಕ್‌ಹೋಲ್‌ಗೆ ತಳ್ಳಲ್ಪಡುವ ಭಯದಿಂದ ಒಬ್ಬನಂತು ನನ್ನ ತಾಯಿಯ ಕೊಲೆಯನ್ನಾದರೂ ಮಾಡಿಯೇನು, ಆದರೆ ಆ ಬ್ಲಾಕ್‌ಹೋಲ್‌ಗೆ ಮಾತ್ರ ಹೋಗಲಾರೆ ಎನ್ನುತ್ತಾನೆ.

ಜೈಲಿನ ಅಧಿಕಾರಿಗಳಿಂದ ಈ ಬಗೆಯ ಚಿತ್ರಹಿಂಸೆಗಳಾದರೆ, ಅಲ್ಲಿನ ಕೈದಿಗಳದ್ದು ಮತ್ತೊಂದು ಬಗೆಯ ಕ್ರೌರ್ಯ. ಸಣ್ಣಪುಟ್ಟ ತಪ್ಪುಗಳಿಗೂ ಒಬ್ಬರನ್ನೊಬ್ಬರು ಕೊಲ್ಲುವ ಗುದ್ದಾಡುವ ದ್ವೇಷಿಸುವ ಜಗತ್ತು ಅದು. ಅಲ್ಲದೆ ಸಿಗರೇಟು ಇನ್ನಿತರ ಸೌಲಭ್ಯ ಪಡೆಯುವ ಕಾರಣದಿಂದ ಹಣಕ್ಕಾಗಿ ಲೋಡೆಡ್ ಆದವನನ್ನು ರಾತ್ರೋರಾತ್ರಿ ಎಲ್ಲೆಂದರಲ್ಲಿ ಹೊಟ್ಟೆ ಬಗೆದು ಸೀಳಿ ಕೊಲ್ಲುವುದು ಸಾಮಾನ್ಯ.

ಖದೀಮರ ಭಾಷೆಯಲ್ಲಿ ಲೋಡೆಡ್ ಅಥವಾ ಗ್ರೀನ್ ಅಂದರೆ ಹಣ ಹೊಂದಿದ್ದಾನೆ ಎಂದರ್ಥ. ಇದದನ್ನು ಚಾರ್ಜರ್ ಎಂದು ಕರೆಯಲಾಗಿದೆ. ಜೈಲಿನ ಪ್ರತಿಯೊಬ್ಬನನ್ನು ನಿಯಮಿತವಾಗಿ ಅನುಮಾನಗಳು ಬಂದಾಗ ವಿವಸ್ತ್ರಗೊಳಿಸಿ ತಪಾಸಣೆ ಮಾಡುವುದು ಮಾಮೂಲು. ಇಷ್ಟಾದರೂ ಹೊರ ಸಂಪರ್ಕ ಇರುವವರು, ಸ್ಥಿತಿವಂತರಾದ ಕೆಲವು ಕೈದಿಗಳು ಚಾರ್ಜರ್‌ಗಳನ್ನು ಹೊಂದಿರುತ್ತಿದ್ದರು. ಇದೊಂದು ಮೂರುವರೆ ಇಂಚು ಉದ್ದದ, ಹೆಬ್ಬೆರಳ ಗಾತ್ರದ ಅಲ್ಯೂಮಿನಿಯಮ್ ಟ್ಯೂಬ್-ಸುಣ್ಣದ ಕಾಯಿ ಡಬ್ಬ ಇದ್ದಂತೆ- ಇಂತಹ ಡಬ್ಬಿಗಳಲ್ಲಿ ಗರಿಗರಿ ನೋಟುಗಳನ್ನು ಮಡಚಿಟ್ಟು ಭದ್ರಪಡಿಸುತ್ತಿದ್ದರು. ಅಲ್ಯೂಮಿನಿಯಮ್‌ನವಲ್ಲದೆ ಬೆಳ್ಳಿಯ, ಚಿನ್ನದ ಚಾರ್ಜರ್‌ಗಳನ್ನು ಅನೇಕರು ಹೊಂದಿದ್ದರು. ಇಂತಹ ಚಾರ್ಜರ್‌ಗಳನ್ನು ತಮ್ಮ ಗುದದ್ವಾರಕ್ಕೆ ತಳ್ಳಿ ಒಳಗಿಟ್ಟುಕೊಂಡು ಬಿಡುತ್ತಿದ್ದರು. ಪ್ರತಿಸಾರಿ ಮಲವಿಸರ್ಜನೆಗೆ ಹೋದಾಗಲೂ ಅದನ್ನು ತೆಗೆದು ತೊಳೆದು ಶುಚಿ ಮಾಡಿ ಮತ್ತೆ ಒಳಗೆ ತೂರಿಸಿಕೊಳ್ಳುತ್ತಿದ್ದರು. ಪ್ಯಾಪಿಲಾನ್ ಸಹ ಐದುಸಾವಿರದ ಆರುನೂರು ಫ್ರಾಂಕ್‌ಗಳನ್ನು ಒಳಗೊಂಡ ಅಲ್ಯೂಮಿನಿಯಮ್ ಚಾರ್ಜರ್ ಇಟ್ಟುಕೊಂಡಿದ್ದವನು. ಪುಕ್ಕಲವಾದ ಸಹಕೈದಿ ಗಿಲಾನಿಯೂ ಜೀವಕ್ಕೆ ಹೆದರಿ ಪ್ಯಾಪಿಲಾನ್‌ಗೆ ತನ್ನ ಚಾರ್ಜರನ್ನು ನೀಡಿರುತ್ತಾನೆ. ಅನೇಕ ದಿನಗಳ ಕಾಲ ಪ್ಯಾಪಿಲಾನ್ ಡಬಲ್‌ಲೋಡೆಡ್ ಆಗಿರುತ್ತಾನೆ. ಇಂತಹ ಚಾರ್ಜರ್‌ಗಳನ್ನು ಕದಿಯುವವರು, ಕೊಲೆ ಮಾಡಿ ಹೊಟ್ಟೆ ಬಗೆಯುವವರು ತನ್ನ ಸುತ್ತಲೂ ಇದ್ದಾಗಲೂ ಪ್ಯಾಪಿಲಾನ್ ಹೆದರುವವನಲ್ಲ.

ಜೈಲಿನಲ್ಲಿ ಮತ್ತೊಂದು ವಿಪರ್ಯಾಸ ಹಾಗೂ ನಾಟಕೀಯ ಪ್ರಸಂಗಗಳೆಂದರೆ, ಇದ್ದಕ್ಕಿದ್ದಂತೆ

ಭೇಟಿಕೊಡುವ ಪಾದ್ರಿಗಳು. ಅವರ ನಿರ್ಲಿಪ್ತ ಮಾತು, ಸಾಂತ್ವನಗಳು. ಕ್ರಿಶ್ಚಿಯನ್ ಧರ್ಮದ ಬೂಟಾಟಿಕೆಯನ್ನು ಪ್ಯಾಪಿಲಾನ್ ತನ್ನ ಕೃತಿಯಲ್ಲಿ ದಾಖಲಿಸಿದ್ದಾನೆ. ಒಮ್ಮೆ ಪ್ಯಾಪಿಲಾನ್ ಬಳಿ ಬಂದ ಪಾದ್ರಿಯೋರ್ವ, ಪ್ಯಾಪಿಲಾನ್ ಮುಂದೆ ಬೊಗಸೆ ಹಿಡಿದು ಕುಳಿತು, ನಿನ್ನನ್ನು ಈ ಸ್ಥಿತಿಗೆ ನೂಕಿದವರ ಮೇಲೆ ಕರುಣೆ ಇರಲಿ. ಅವರನ್ನು ಕ್ಷಮಿಸು. ನಿನ್ನ ಮನಸ್ಸು ಹಗುರಾಗಲು ಅತ್ತುಬಿಡು. ಎಂದು ಹೇಳುತ್ತಾ ಪ್ಯಾಪಿಲಾನ್ ಕಣ್ಣೀರನ್ನು ಬೊಗಸೆಯಲ್ಲಿ ಹಿಡಿದು ಪಾದ್ರಿ ಕುಡಿಯುತ್ತಾನೆ.

ಇಂತಹ ಎಲ್ಲ ಕ್ರೌರ್ಯ, ಸಂಕಷ್ಟಗಳ ನಡುವೆ ಪ್ಯಾಪಿಲಾನ್ ಪಲಾಯನದ ಕನಸು ಕಾಣುತ್ತಾನೆ. ಕನಸಷ್ಟೇ ಕಾಣುವುದಿಲ್ಲ. ಬದಲಾಗಿ ಅದರಲ್ಲಿ ಯಶಸ್ವಿಯೂ ಆಗುತ್ತಾನೆ. ಮೊದಲ ಬಾರಿಗೆ ಪ್ಯಾರಿಸ್‌ನಿಂದ ಗಯಾನ ದ್ವೀಪಗಳಿಗೆ ಸ್ಥಳಾಂತರಗೊಳ್ಳುವಾಗಲೇ ತಪ್ಪಿಸಿಕೊಳ್ಳಲು ಸಂಚು ರೂಪಿಸಿ ವಿಫಲನಾಗುತ್ತಾನೆ. ಮತ್ತೆ ಜೈಲು, ಮತ್ತೆ ತಪ್ಪಿಸಿಕೊಳ್ಳಲು ಸಂಚು, ವಿಫಲ, ಮತ್ತೆ ಸೆರೆ, ಜೈಲು, ಮತ್ತೆ ತಪ್ಪಿಸಿಕೊಳ್ಳುತ್ತಾನೆ. ಜೈಲಿನ ಎತ್ತರದ ಗೋಡೆಯಿಂದ ಕೊರಕಲಿನ ಬಂಡೆಗಳಲ್ಲಿ ಬಿದ್ದು, ಈಜಿ ದಡ ಸೇರಿ ಸ್ವಾತಂತ್ರ್ಯದ ಉಸಿರು ಬಿಡುವುದು. ಚಂಡಮಾರುತದ ನಡುವೆಯೂ ಪುಟ್ಟದೋಣಿಯನ್ನು ಹುಟ್ಟುಹಾಕುತ್ತಾ ಅನೇಕ ದಿನಗಳ ಕಾಲ ಸಮುದ್ರದ ಮಧ್ಯೆಯೇ ಇದ್ದರೂ ಭಯಗೊಳ್ಳದೆ ತನ್ನ ಶಕ್ತಿ ಹಾಗೂ ಆತ್ಮಸ್ಥೈರ್ಯದ ಮೂಲಕ ದಡ ಸೇರುವುದು.

ಇಂತಹ ಪಲಾಯನದ ಯಾತ್ರೆಯ ಅಂತ್ಯ ಅವನನ್ನು ಅನೇಕ ದ್ವೀಪಗಳಿಗೆ ತಲುಪಿಸುತ್ತದೆ. ಜೈಲಿನ ಕ್ರೌರ್ಯ ಒಂದು ರೀತಿಯಾದರೆ, ಅಪರಿಚಿತ ದ್ವೀಪಗಳ ಜನ, ಕಾಡುಪ್ರದೇಶ ಮತ್ತೊಂದು ಬಗೆಯದು. ಜಗತ್ತಿನ ತೈಲ ವ್ಯವಹಾರದ ನಗರ ಕ್ಯುರಕಾವ್ರೋಗೆ ಒಮ್ಮೆ, ರಿಯೋ ಹಾಚ ಎಂಬ ನತದೃಷ್ಟ ಊರಿಗೆ ಮತ್ತೊಮ್ಮೆ, ವೆನಿಜುವೆಲಾ ಕಡೆಗೆ, ಕೊಲಂಬಿಯಾ ಕಡೆಗೆ, ಕೆಸರಿನ ಜಗತ್ತಿಗೆ ನರಭಕ್ಷಕರ ನಾಡಿಗೆ ಹೀಗೆ ಎಲ್ಲೆಲ್ಲಿಗೋ ತಲುಪುತ್ತಾನೆ. ಅಲ್ಲಿನವರನ್ನು ಗೆದ್ದು ಅವರಲ್ಲಿ ಒಂದಾಗುತ್ತಾನೆ. ಮನುಷ್ಯರಷ್ಟೇ ಅಪಾಯಕಾರಿಯಾದ ಪ್ರಕೃತಿಯ ವಿಚಿತ್ರಗಳ ಮಧ್ಯೆಯೂ ಅವನ ಸ್ವಾತಂತ್ರ್ಯದ ಹಂಬಲದ ಕನಸು ನಾಶವಾಗುವುದಿಲ್ಲ. ಒಂದು ಕ್ಷಣ ಮೈಮರೆತರೆ ಆ ಕ್ಷಣವೇ ನುಂಗಿಬಿಡುವ ಕೆಸರು, ರಾಕ್ಷಸ ಅಲೆಗಳು, ಚಾಣಾಕ್ಷ ರಕ್ತಪಿಪಾಸು ಶಾರ್ಕ್‌ಗಳು, ಮಾಂಸ ಭಕ್ಷಕ ಇರುವೆಗಳು, ಮೊಸಳೆಗಳು, ಅಸಂಖ್ಯ ರೋಗಿಷ್ಟರು, ಬೆಳಕೇ ಇಲ್ಲದ ಜೈಲಿನ ಸಣ್ಣಕೋಣೆಗಳು, ಏಕಾಂತ ಶಿಕ್ಷೆ, ಸಾವು, ನೀರಡಿಕೆಯ ನಡುವೆ ನರಳದೆ, ಬೆನ್ನು ತಿರುಗಿಸದೆ ಅವೆಲ್ಲವನ್ನು ಮೀರಿ ಗೆದ್ದು ಬರುತ್ತಾನೆ.

ಒಮ್ಮೆ ದಡದಲ್ಲಿ ಪ್ಯಾಪಿಲಾನ್‌ಗೆ ಎಚ್ಚರವಾದಾಗ ಎದುರಿಗೆ ಪುಟ್ಟ ಹಂದಿಗಳ ಹಿಂಡೊಂದು ನೀರಿಗೆ ಬರುತ್ತವೆ. ಅಲ್ಲೇ ಇದ್ದ ಮೊಸಳೆ ಒಂದು ಹಂದಿಗೆ ಬಾಯಿ ಹಾಕುತ್ತದೆ. ಉಳಿದ ಹಂದಿಗಳು ಅದರ ಜೊತೆಗೆ ಹೋರಾಟಕ್ಕೆ ನಿಂತಾಗ ಮೊಸಳೆಯ ಬಾಲದ ಹೊಡೆತಕ್ಕೆ ಮತ್ತೊಂದು ಹಂದಿ ನೀರಿನಲ್ಲಿ ಬಿದ್ದು ತೇಲುತ್ತದೆ. ತಕ್ಷಣ ಕೆಲವು ಹಂದಿಗಳು ಮೊಸಳೆಯನ್ನು ಮರೆತು ತಮ್ಮ ಜೊತೆಗಾರನಾದ ಸಾಯುತ್ತಿದ್ದ ಹಂದಿಯನ್ನು ಭಕ್ಷಿಸತೊಡಗುತ್ತವೆ. ಪ್ಯಾಪಿಲಾನ್ ಕಂಪಿಸುತ್ತಾನೆ. ಒಮ್ಮೆ ಕಾಡೊಂದರಲ್ಲಿ ತಪ್ಪಿಸಿಕೊಂಡು ಅಲೆಯುತ್ತಿದ್ದ ಪ್ಯಾಪಿಲಾನ್ ಮೇಲೆ ಮುಷ್ಟಿಗಾತ್ರದ ಜೇಡವೊಂದು ತನ್ನ ದೇಹದ ರೋಮಗಳನ್ನೆಲ್ಲ ನಿಮಿರಿಸಿಕೊಂಡು ಜಿಗಿದ ಪ್ರಸಂಗ, ಸಾವಿರ ಕಾಲಿನ ಚೇಳಿನ ಸಾಮೀಪ್ಯ. ಪುಟ್ಟ ದೋಣಿಯೊಂದರಲ್ಲಿ ಪಲಾಯನ ಮಾಡುವಾಗ ಡಾಲ್ಫಿನ್ ಮೀನುಗಳ ದಂಡೊಂದರ ಚೆಲ್ಲಾಟ, ಆತಂಕ. ಕುಷ್ಠರೋಗಿಗಳ ದ್ವೀಪಕ್ಕೆ ಬಂದಾಗ ಕಂಡ ದೃಶ್ಯವಂತೂ

ಅವನನ್ನು ಅಸ್ಥಿರಗೊಳಿಸಿಬಿಡುತ್ತದೆ. ಕತ್ತಲ ರಾತ್ರಿ ಒಂದು ವರಾಂಡ ಮೊಂಬತ್ತಿಯ ಬೆಳಕು. ಆಗ ಕಂಡ ದೃಶ್ಯದ ಬಗ್ಗೆ ಹೀಗೆ ಹೇಳುತ್ತಾನೆ; ನನ್ನ ನರನಾಡಿಗಳೆಲ್ಲ ಜೋಮು ಹತ್ತಿದಂತೆ ಕಲ್ಲಾದವು. ನನ್ನ ಜೀವಮಾನದಲ್ಲಿ ಇದೇ ಮೊದಲ ಬಾರಿಗೆ ಕುಷ್ಠರೋಗಿಯೊಬ್ಬನ ವಿರೂಪಗೊಂಡ ಮುಖವನ್ನು ಇಷ್ಟೊಂದು ಸನಿಹದಿಂದ ನೋಡುತ್ತಿದ್ದೇನೆ. ಅವನ ಮೂಗು ಕೊಳೆತು ಬಿದ್ದುಹೋಗಿ, ಆ ಭಾಗದಲ್ಲಿ ದೊಡ್ಡ ರಂಧ್ರವಾಗಿತ್ತು. ಸುತ್ತಲೂ ಒಸರುತ್ತಿರುವ ಸಿಂಬಳ, ಬಲಗಡೆ ಕೆಳತುಟಿ ಕಿವಿಯವರೆಗೂ ಹರಿದುಹೋಗಿದ್ದುದರಿಂದ ಪಾಚಿಗಟ್ಟಿದ ದವಡೆ ಹಲ್ಲುಗಳು ಹೊರಚಾಚಿ, ಅಸ್ಥಿಪಂಜರವನ್ನು ನೆನಪಿಸಿದವು. ಬಲಗಡೆಯ ಕಿವಿಯೂ ಸಹ ಅರ್ಧ ಬಿದ್ದುಹೋಗಿ ಉಳಿದರ್ಧ ವಿಕಾರವಾಗಿ ಮುರುಟಿಕೊಂಡಿತ್ತು. ಒಂದು ಕಣ್ಣು ರೆಪ್ಪೆ ಇಲ್ಲದೆ, ಕ್ಷಣವೂ ಮುಚ್ಚಲಾರದೆ ನನ್ನನ್ನೇ ನೋಡುತ್ತಿತ್ತು. ಈ ಭೀಭತ್ಸಮಯ ಚಿತ್ರ ಮನಸಿನಾಳಕ್ಕೆ ಇಳಿದಾಕ್ಷಣ, ಇಲ್ಲಿಂದೀಗಲೇ ಕಿರುಚುತ್ತಾ ಓಡಿಹೋಗುವ ಎನಿಸಿತು. ಆದರೆ ಪ್ಯಾಪಿಲಾನ್ ದೃಢವಾಗಿ ನಿಲ್ಲುತ್ತಾನೆ. ಅಲ್ಲಿನವರ ವಿಶ್ವಾಸ ಗಳಿಸುತ್ತಾನೆ. ಅವರಲ್ಲಿ ಒಬ್ಬನಾಗುತ್ತಾನೆ. ಅವರ ಸಹಾಯದಿಂದ ಅಲ್ಲಿಂದ ತನ್ನೂರಿಗೆ ಪ್ರಯಾಣ ಬೆಳೆಸುತ್ತಾನೆ.

ಆಗ ಅವರ ಜೊತೆಯ ಕಡೆಯ ಕಾಫಿಯೊಂದನ್ನು ಕುಡಿಯುತ್ತಾನೆ. ಕುಬ್ಜನೊಬ್ಬ ಕಾಫಿಲೋಟ ತಂದುಕೊಟ್ಟ. ಪ್ಯಾಪಿಲಾನ್ ಒಂದು ಗುಟುಕು ಕಾಫಿ ಚಪ್ಪರಿಸಿ, ತೊಡೆಯ ಮೇಲಿಟ್ಟುಕೊಂಡವನು ಪುನಃ ಲೋಟದ ಕಡೆ ಗಮನ ಹರಿಸಿದಾಗ ಒಂದು ಕೈ ಬೆರಳು ಅಂಟಿಕೊಂಡಿದ್ದು ಕಾಣಿಸಿತು. ವಿಷಯ ಏನೆಂದು ಅರ್ಥವಾಗುವ ಮೊದಲೇ ಆ ಕುಬ್ಜ ಅರೇ ನನ್ನ ಇನ್ನೊಂದು ಬೆರಳು ಬಿದ್ದುಹೋಗಿದೆ! ಎಲ್ಲಿ ಬಿತ್ತು ಅಂತಾ...? ಎಂದು ಆ ಕತ್ತಲಲ್ಲೇ ಹುಡುಕತೊಡಗಿದ. ಇಲ್ಲಿದೆ ನೋಡು ಎಂದು ಲೋಟ ತೋರಿಸಿದಾಗ ಅಂಟಿಕೊಂಡ ಬೆರಳನ್ನು ಒಳೆಗೆ ಎಸೆದ. ಹಸಿಮಾಂಸ ಸುಟ್ಟು ಕರಕಲಾಗುತ್ತಿರುವ ನಾತ ಮೂಗಿಗೆ ಹೊಡೆಯುತ್ತಿತ್ತು.

ಒಮ್ಮೆಯಂತೂ ಮತ್ತೊಂದು ಸಮುದ್ರ ದಡದಲ್ಲಿ ಬಂದು ಸೇರಿದಾಗ ಜೊತೆಯಲ್ಲಿದ್ದ ಬುಲೋಟ್ ದಡದಲ್ಲಿ ಕೆಸರಿನಲ್ಲಿ ಕಾಲಿಡುತ್ತಿದ್ದಂತೆ ಹೂತು ಹೋಗುವಾಗ ರಕ್ಷಿಸಲಾಗದೆ ಪ್ಯಾಪಿಲಾನ್ ಹಲುಬುತ್ತಾನೆ. ಡೆವಿಲ್ಸ್ ಐಲ್ಯಾಂಡ್‌ಗೆ ಬಂದಾಗಲಂತೂ ವ್ಯಕ್ತಿಯೋರ್ವ ಕಾಡಿನ ನಡುವೆ ಹೊಟ್ಟೆ ಸೀಳಿ ಚಾರ್ಜರ್‌ಗಾಗಿ ಕೊಲೆಗೈದ ಶವಗಳನ್ನು ಒಲೆಗೆ ಇಟ್ಟು ಸುಡುತ್ತಿದ್ದ ದೃಶ್ಯವು ಅವನನ್ನು ಥರಗುಟ್ಟಿಸಿಬಿಟ್ಟಿತ್ತು. ಇಂತಹ ಎಲ್ಲ ಕಡೆಯಲ್ಲೂ ಅವನ ಸತ್ಯದ ಪ್ರತಿಪಾದನೆ, ಮಾನವೀಯತೆ ದಿಟ್ಟತನ ಅವನನ್ನು ನಾಯಕನನ್ನಾಗಿಸುತ್ತದೆ.

ಒಮ್ಮೆ ಸಿಕ್ಕಿಬಿದ್ದಾಗಲಂತೂ ನಾಲ್ಕು ತಿಂಗಳ ಸುದೀರ್ಘ ಯತ್ನ ಇಂದು ಹಳ್ಳದಲ್ಲಿ ಹುಳಿ ಕದಡಿದಂತಾಯಿತು. ಕಳ್ಳ-ಪೊಲೀಸ್ ಆಟದಲ್ಲಿ ಪುಟ್ಟಮಕ್ಕಳು ಸಿಕ್ಕಿ ಬೀಳುವ ಹಾಗೆ ಇವರ ಬಲೆಯಲ್ಲಿ ಬಿದ್ದೆವು. ದೇವರೇ ನೀನೆಷ್ಟು ನಿಷ್ಕರುಣಿ? ನನ್ನ ಬದುಕಿನೊಂದಿಗೆ ಹೀಗೇಕೆ ಚೆಲ್ಲಾಟ ಮಾಡುತ್ತಿರುವಿ? ಎಂದು ಹಲುಬುತ್ತಾನೆ. ಆದರೆ ಅದು ಒಂದೇ ಕ್ಷಣ. ಮತ್ತೆ ಪಲಾಯನಕ್ಕೆ ಸಿದ್ಧಗೊಳ್ಳುತ್ತಾನೆ. ನಾಲ್ಕು ಗಜಗಳ ಪುಟ್ಟ ಕೋಣೆಯಲ್ಲಿ ಐದು ಹೆಜ್ಜೆಗಳ ಅಂತರದಲ್ಲೇ ಶತಪಥ ತಿರುಗುತ್ತಾ ವ್ಯಾಯಾಮ ಮಾಡುತ್ತಾನೆ. ತೆಂಗಿನಕಾಯಿ ತಿನ್ನುತ್ತಾ ಶಕ್ತಿ ಪಡೆಯುತ್ತಾನೆ. ಪಕ್ಕದವರ ಸಾವಿನ ಆಕ್ರಂದನಕ್ಕೆ ಪರಿಹಾರವಾಗಿ ಸಾಬೂನಿನ ತುಂಡನ್ನು ಕಿವಿಗೆ ತುರುಕಿಕೊಳ್ಳುತ್ತಾನೆ. ಹದಿಮೂರು ವರ್ಷಗಳ ಸತತ ಹೋರಾಟದಲ್ಲಿ ಸಮುದ್ರದ ನಡುವಿನ ಪಲಾಯನದಲ್ಲಿ ಎಷ್ಟೋ ಬಾರಿ ಸಿಕ್ಕಿಬಿದ್ದರೂ ಅವನ ಬಿಡುಗಡೆಯ ಹಂಬಲ ಕಮರುವುದಿಲ್ಲ, ಬದಲಾಗಿ ದೀಪ್ತಗೊಳ್ಳುತ್ತದೆ.

ಇವನ ಇಂತಹ ಹೋರಾಟದಲ್ಲಿ ಇವನನ್ನು ನಾಯಕನಂತೆ ಸ್ವೀಕರಿಸಿದವರಲ್ಲಿ ಫ್ರಾನ್ಸ್ ದೇಶದ ಭೂಗತ ಜಗತ್ತಿನ ದೊರೆ, ನಕಲಿ ಬಾಂಡುಗಳನ್ನು ಮಾರುವ ಜಾಲ ಹೊಂದಿದ್ದ ಲೂಯಿಸ್ ಡೇಗಾ, ಹ್ಯಾಮರ್ ಮ್ಯಾನ್-ಹ್ಯಾಮರ್ ಬಳಸಿ ಜನರನ್ನು ಕೊಂದು ಆಭರಣ ಕದಿಯುತ್ತಿದ್ದ ಬುಲೋಟ್, ಸಣ್ಣ ಕಳ್ಳತನಕ್ಕಾಗಿ ಜೈಲು ಸೇರಿದ ಅಪ್ಸರೆಯಂತಹ ಹುಡುಗ ಮಾತುರೆ, ಕ್ಲಾಸಿಯಟ್ ಎಲ್ಲರೂ ಸೇರಿದ್ದರು. ಇವರು ಸಹಕೈದಿಗಳಷ್ಟೇ ಅಲ್ಲ, ಇವನ ಜೊತೆ ಪಲಾಯನ ಪ್ರಸಂಗದಲ್ಲಿ ಜೊತೆಗಿದ್ದವರು. ಆದರೆ ಪ್ಯಾಪಿಲಾನ್‌ನಷ್ಟೇ ಪಲಾಯನದ ಹಂಬಲವುಳ್ಳವರಾಗಿರಲಿಲ್ಲ. ಪ್ಯಾಪಿಲಾನ್ ಈ ಹಂಬಲಕ್ಕೆ ಪೂರಕವಾಗಿದ್ದವರು. ಆತ ಸಂಯಮಿ, ವ್ಯವಹಾರ ಚತುರ, ಅಂತಃಕರಣದ ಸೆಲೆ, ಮಾನವೀಯತೆಯ ಬಗೆಗೆ ನಂಬಿಕೆ ಉಳ್ಳವ. ಇವು ಅವನನ್ನು ಹೋದ ಕಡೆಯಲ್ಲೆಲ್ಲಾ ನಾಯಕನನ್ನಾಗಿಸುತ್ತದೆ.

ಜೈಲಿನಲ್ಲಿ ಅಧಿಕಾರಿಗಳ ಹೆಂಡತಿ, ಮಕ್ಕಳ ಜೊತೆಗಿನ ಸೌಹಾರ್ದತೆಯ ನಡತೆ. ದುಷ್ಟ ವಾರ್ಡನ್ ಒಕ್ಕಣ್ಣಿನವರನ್ನು ನರಭಕ್ಷಕ ಇರುವೆಗಳಿಗೆ ಬಲಿ ಕೊಟ್ಟಾಗ ಸಿಕ್ಕ ಶಹಭಾಸ್, ಭಾರಿ ಶಾರ್ಕ್‌ಗಳಿದ್ದಾಗ ಅಧಿಕಾರಿಯ ಹೆಣ್ಣುಮಗಳೊಬ್ಬಳನ್ನು ಪ್ಯಾಪಿಲಾನ್ ಈಜಿ ಅವಳನ್ನು ರಕ್ಷಿಸಿದ್ದು, ನಿಯಂತ್ರಿಸಲಾರದ ಕೋಣವೊಂದನ್ನು ಕಾಯುವ, ಅದನ್ನು ನಿಯಂತ್ರಿಸಿದ ಹೆಮ್ಮೆ, ಬುಡಕಟ್ಟು ಜನಾಂಗದವರಾದ ಗೋಬೆರಾ ಇಂಡಿಯನ್ಸ್ ಎಂದು ಕರೆಯಲ್ಪಡುವ ಮಾಟೆಲಾಟ್ಸ್ ಊರಿನ ಜನರ ಪ್ರೀತಿ ವಿಶ್ವಾಸ ಗಳಿಸಿದ್ದು, ಅವನ ವಿನೋದಪ್ರಿಯತೆ, ಇದ್ದಲ್ಲಿ ಸಂಭ್ರಮಿಸುವ ಮನೋಭಾವ. ಅಧಿಕಾರಿ ಮನೆಯಲ್ಲಿ ಮಲಮೂತ್ರಗಳ ಡಬ್ಬಿಯನ್ನು ಶುಚಿಗೊಳಿಸುವ ಜಾಡಮಾಲಿ ಕೆಲಸದಲ್ಲೂ ನಿಷ್ಠೆ. ಹೀಗೆ ಅನೇಕ ವ್ಯಕ್ತಿತ್ವಗಳ ಪ್ಯಾಪಿಲಾನ್ ಕಡೆಗೆ ತನ್ನೂರಿಗೆ ಪಲಾಯನಗೈಯ್ಯುತ್ತಾನೆ.


ಈ ಹಿಂದೆ ಅಪರಾಧಿಯೆಂದು ಜೈಲಿಗೆ ತಳ್ಳಿದಾಗ ವ್ಯಗ್ರಗೊಂಡ ಪ್ಯಾಪಿಲಾನ್ ಫ್ರಾನ್ಸ್‌ನ ಪೊಲೀಸ್ ವ್ಯವಸ್ಥೆಯನ್ನು, ಠಾಣೆಗಳನ್ನೂ, ನ್ಯಾಯಾಧೀಶರನ್ನೂ, ಜೈಲರುಗಳನ್ನೂ ಡೈನಮೆಟ್ ಬಾಂಬ್‌ಗಳನ್ನು ಅಳವಡಿಸಿ ಸಿಡಿಸಬೇಕೆಂದು ನಿರ್ಧರಿಸುತ್ತಾನೆ. ಕಟ್ಟಕಡೆಗೆ ತಪ್ಪಿಸಿಕೊಂಡು ಬಂದವನಿಗೆ ಈ ಹಿಂದೆ ಅವನಲ್ಲಿದ್ದ ದ್ವೇಷ ಇಲ್ಲವಾಗಿ ಮಾನವೀಯ ಮೂರ್ತಿಯಾಗಿ ನಿಲ್ಲುತ್ತಾನೆ. ಈ ಹಿಂದೆ ಅವನೇ ಅಧಿಕಾರಿಯೊಬ್ಬನಿಗೆ ಹೇಳುವಂತೆ ಬೇರೆ ಏನೂ ಇಲ್ಲ ಮಹಾಶಯರೇ. ನಿಮ್ಮ ಮುಖಕ್ಕೆ ಕ್ಯಾಕರಿಸಿ ಉಗಿಯುವ ಮನಸ್ಸಿದೆ. ಆದರೆ ನನ್ನ ಎಂಜಲನ್ನೇಕೆ ಅಶುದ್ಧಗೊಳಿಸಲಿ ಎಂದು ಸುಮ್ಮನಿದ್ದೇನೆ.

ಹೆನ್ರಿ ಛಾರೇರೆ ಜೈಲಿನಿಂದ ಬಂದ ನಂತರ ತನ್ನ ಸಾಹಸದ ಸಾವು-ಬದುಕಿನ ಹೋರಾಟಗಳ ಆತ್ಮಕಥೆಯನ್ನು ಬರೆದು ಪ್ರಕಾಶಕರಿಗೆ ತಲುಪಿಸಿದಾಗ ಆ ಪ್ರಕಾಶನ ಸಂಸ್ಥೆಯ ಪ್ರಧಾನ ಸಂಪಾದಕ ಪ್ಯಾಟ್ರಿಕ್ ಓಬ್ರಿನ್ ಈ ಕೃತಿಯ ಪ್ರತಿಯೊಂದು ಘಟನೆಗಳು ಕಾಲ್ಪನಿಕವೇ ಸತ್ಯಕಥೆಯೇ ಎಂದು ಆಯಾ ಸ್ಥಳಗಳಿಗೆ ಭೇಟಿ ನೀಡಿ ತಾಳೆ ನೋಡಿ ಸತ್ಯಸಂಗತಿಗಳೆಂದು ದೃಢಪಡಿಸಿಕೊಂಡ ಮೇಲೆ ಪ್ರಕಟಿಸಿದನಂತೆ. ಇದರಿಂದ ಫ್ರೆಂಚ್ ಸರ್ಕಾರ ಎಚ್ಚೆತ್ತುಕೊಂಡು ತನ್ನ ಜೈಲುಗಳನ್ನು ಸುಧಾರಿಸಿತು. ಆದರೆ ಇತಿಹಾಸ ಬದಲಿಸಲಾಗುವುದಿಲ್ಲ!

ಟಿಪ್ಪಣಿ:

- ೧೯೬೯ರಲ್ಲಿ ಫ್ರೆಂಚ್‌ನಲ್ಲಿ ಮೊದಲ ಬಾರಿಗೆ ಪ್ಯಾಪಿಲಾನ್ ಪ್ರಕಟಗೊಂಡಿತು. ೧೯೭೦ರಲ್ಲಿ ಇಂಗ್ಲಿಷ್‌ನಲ್ಲಿ ಅನುವಾದಗೊಂಡಿದೆ. ಪೂರ್ಣಚಂದ್ರ ತೇಜಸ್ವಿ ಅವರು ೨೦೦೪ರಲ್ಲಿ ತಮ್ಮ ಗೆಳೆಯ ಪ್ರದೀಪ್ ಕೆಂಜಿಗೆ ಜತೆಗೂಡಿ ಇದನ್ನು ಕನ್ನಡಕ್ಕೆ ತಂದಿದ್ದಾರೆ.
- ಫ್ರೆಂಚ್‌ನಲ್ಲಿ ಪ್ಯಾಪಿಲಾನ್ ಎಂದರೆ ಚಿಟ್ಟೆ ಎಂದರ್ಥ. ಶಾರಿಯರ್‌ನ ಎದೆ ಮೇಲಿದ್ದ ಚಿಟ್ಟೆಯ ಹಚ್ಚೆಯಿಂದ ಆತನಿಗೆ ಈ ಪ್ಯಾಪಿಲಾನ್ ಎಂಬ ಅಡ್ಡ ಹೆಸರು ಬಂದಿದ್ದು.
- ೧೯೭೩ರಲ್ಲಿ ಹಾಲಿವುಡ್ ನಿರ್ದೇಶಕ ಫ್ರಾಂಕ್ಲಿನ್ ಶಾಫ್ನರ್ ನಿರ್ದೇಶನದಲ್ಲಿ ಪ್ಯಾಪಿಲಾನ್ ಕೃತಿ ಅದೇ ಹೆಸರಿನಲ್ಲಿ ಚಲನಚಿತ್ರವಾಗಿದೆ.
  ಅದೇ ವರ್ಷ ಪ್ಯಾಪಿಲಾನ್‌ನ ಮುಂದುವರಿದ ಭಾಗ ಬ್ಯಾಂಕೊ ಪ್ರಕಟವಾಗಿದೆ.

ನೆಲೆ, ೧೨/೧, ೩ನೇ ಮುಖ್ಯರಸ್ತೆ
ನ್ಯಾಯಾಂಗ ಬಡಾವಣೆ ಸಮೀಪ
ತಲಘಟ್ಟಪುರ, ಕನಕಪುರ ರಸ್ತೆ
ಬೆಂಗಳೂರು ೫೬೦ ೦೬೨
ಮೊಬೈಲ್: ೯೯೪೫೮೬೭೯೮೭



ಕುವೆಂಪು 'ನೆನಪಿನ ದೋಣಿಯಲ್ಲಿ': ಜಾತಿ ವ್ಯವಸ್ಥೆ ಕುರಿತ ಅಭಿಜಾತ ಕ್ಲಾಸಿಕಲ್ ನಿರೂಪಣೆಯ ಚೌಕಟ್ಟು

ರಾಜಾರಾಮ ಹೆಗಡೆ

ವಸಾಹತು ಕಾಲದಲ್ಲಿ ಪಾಶ್ಚಾತ್ಯರು ಭಾರತದ ಸಮಾಜ ಮತ್ತು ಸಂಸ್ಕೃತಿಯ ಕುರಿತು ನೀಡಿದ ಚಿತ್ರಣಗಳಲ್ಲಿನ ಮಿತಿಗಳನ್ನು ಈಗಾಗಲೇ ಎತ್ತಿ ತೋರಿಸಲಾಗಿದೆ. ವಸಾಹತು ಕಾಲದಲ್ಲಿ ಮೊಟ್ಟಮೊದಲ ಬಾರಿಗೆ ಭಾರತದ ಇತಿಹಾಸದ ರಚನೆಯಾಯಿತು. ಈ ಇತಿಹಾಸದ ಜೊತೆಗೇ ಭಾರತೀಯ ಸಂಸ್ಕೃತಿಯ ಕುರಿತು ಪಾಶ್ಚಾತ್ಯರು ರೂಪಿಸಿಕೊಂಡ ಗ್ರಹಿಕೆಯ ಚೌಕಟ್ಟು ಕೂಡಾ ಇಲ್ಲಿಗೆ ಆಮದಾಯಿತು. ಅಂದರೆ ಭಾರತೀಯ ಸಮಾಜದ ವಿವರಗಳಿಗೆಲ್ಲ ಒಂದು ಸಮಗ್ರತೆಯನ್ನು ನೀಡುವ, ಅದನ್ನು ಒಂದು ವಿನ್ಯಾಸದಲ್ಲಿ ಜೋಡಿಸುವ ಸಿದ್ಧಾಂತಗಳನ್ನು ರಚಿಸಿ ಅವುಗಳ ಬೆಳಕಿನಲ್ಲಿ ಇಲ್ಲಿನ ಅರ್ಥಂಬರ್ಥ ಐತಿಹಾಸಿಕ ವಿವರಗಳಿಗೆ ಅರ್ಥ ಹಚ್ಚಲಾಯಿತು. ಇಂಥ ಇತಿಹಾಸವು ಸಿದ್ಧವಾದ ಮೇಲೆ ವರ್ತಮಾನದ ಅನುಭವವು ಈ ಸಿದ್ಧಾಂತಗಳಿಗೆ ವ್ಯತಿರಿಕ್ತವಾಗಿದ್ದ ಸಂದರ್ಭದಲ್ಲೂ ಕೂಡ ಈ ಇತಿಹಾಸವೇ ಅಂಥ ಸಿದ್ಧಾಂತಗಳಿಗೆ ದೃಷ್ಟಾಂತವಾಯಿತು. ಈ ಇತಿಹಾಸ ಜ್ಞಾನದ ಸಹಾಯದಿಂದ ಭಾರತೀಯ ಚಿಂತಕರು ಹಾಗೂ ಸಾಹಿತಿಗಳು ತಮ್ಮ ವರ್ತಮಾನದ ಅನುಭವಗಳನ್ನು ಓದತೊಡಗಿದರು.

ಈ ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಕುವೆಂಪು ಅವರನ್ನು ನೋಡಿದಾಗ ಅವರ ಬರವಣಿಗೆಗಳಲ್ಲಿ ನಮಗೆ ಎರಡು ಪ್ರಪಂಚಗಳು ಕಂಡುಬರುತ್ತವೆ. ಒಂದು ಅವರ

ವರ್ತಮಾನದ ಅನುಭವ ಪ್ರಪಂಚ ಹಾಗೂ ಮತ್ತೊಂದು ಈ ಮೇಲೆ ಉಲ್ಲೇಖಿಸಿದ ಇತಿಹಾಸ ಜ್ಞಾನದ ಮೂಲಕವಷ್ಟೇ ದೃಷ್ಟಾಂತವಾಗಲು ಸಾಧ್ಯವಿರುವ ಅರ್ಥ ಪ್ರಪಂಚ. ಅದು ಸನಾತನ ಹಿಂದೂ ಧರ್ಮವಾಗಿರಬಹುದು, ಅಥವಾ ಜಾತಿ ವ್ಯವಸ್ಥೆಯಾಗಿರಬಹುದು.

ನೆನಪಿನ ದೋಣಿಯಲ್ಲಿ ಕುವೆಂಪು ಅವರ ಆತ್ಮ ವೃತ್ತಾಂತವಾಗಿದೆ. ೧೯೮೦ರಲ್ಲಿ ಪ್ರಕಟವಾದ ಈ ಪುಸ್ತಕದಲ್ಲಿ ಕುವೆಂಪು ಅವರು ತಮ್ಮ ಜೀವನ ಸ್ಮೃತಿಗಳನ್ನು ದಾಖಲಿಸಿದ್ದಾರೆ. ಈ ವೃತ್ತಾಂತವು ಭಾಗಶಃ ಅವರ ನೆನಪಿನಿಂದ ಆಯ್ದ ಘಟನೆಗಳು ಹಾಗೂ ಭಾಗಶಃ ಅವರು ೧೯೨೩ ರಿಂದ ೧೯೩೭ ರವರೆಗೆ ಬರೆದ ದಿನಚರಿಗಳಿಂದ ಉದ್ಧರಿಸಿದ ಭಾಗಗಳಿಂದ ಕೂಡಿದೆ. ಈ ಪುಸ್ತಕವು ೧೯೮೦ ರಲ್ಲಿ ಪ್ರಕಟವಾಗಿದ್ದರೂ ಕೂಡ ಲೇಖಕರ ಜೀವನ ವೃತ್ತಾಂತವು ೧೯೩೭ರಲ್ಲಿ ಲೇಖಕರ ವಿವಾಹದ ಘಟನೆಗೆ ಹೆಚ್ಚು ಕಡಿಮೆ ನಿಲುಗಡೆಯಾಗುತ್ತದೆ. ನಂತರ ೧೯೭೨ರ ವರೆಗಿನ ಘಟನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಕುವೆಂಪು ಅವರ ಜೀವನ ಚರಿತ್ರೆಯನ್ನು ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಒಂದು ಮಹತ್ವಪೂರ್ಣವಾದ ಅಧ್ಯಾಯವೆಂಬುದಾಗಿ ಪರಿಗಣಿಸಲಾಗುತ್ತದೆ. ಆಧುನಿಕ ಕನ್ನಡ ಬರಹಗಾರರಿಗೆ ಅವರ ಜೀವನ ಹಾಗೂ ಬರೆಹ ಎರಡೂ ಶೂದ್ರ ವಿಮೋಚನೆಯ ಒಂದು ಪ್ರತೀಕವಾಗಿದೆ. ಕುವೆಂಪು ಅವರು ಒಕ್ಕಲಿಗ ಸಮುದಾಯದಿಂದ ಬಂದಿದ್ದು ಈ ಸಮುದಾಯವು ಹಳೇ ಮೈಸೂರಿನಲ್ಲಿ ನಡೆದ ಬ್ರಾಹ್ಮಣ-ವಿರೋಧಿ ಚಳುವಳಿಯ ಮುಂಚೂಣಿಯಲ್ಲಿತ್ತು. ಕುವೆಂಪು ಅವರು ತೀರ್ಥಹಳ್ಳಿಯ ಸಮೀಪದ ಕುಪ್ಪಳಿ ಎಂಬ ಒಂದು ಕುಗ್ರಾಮದಿಂದ ಬಂದವರು. ಅವರದು ಒಂದು ಅವಿಭಕ್ತ ಕುಟುಂಬ. ಅವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತೀರ್ಥಹಳ್ಳಿಯಲ್ಲಿ ಮುಗಿಸಿ ಉನ್ನತ ಶಿಕ್ಷಣಕ್ಕಾಗಿ ಮೈಸೂರಿಗೆ ಹೋದರು. ಅವರು ಸಾಹಿತ್ಯದ ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯಾಗಿ ತಮ್ಮ ಕಾಲದ ಎಲ್ಲಾ ಸಾಹಿತಿ, ಕವಿಗಳ ಗಮನವನ್ನು ಸೆಳೆದಿದ್ದರು. ನಂತರ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿಯೇ ಕನ್ನಡ ಪ್ರೊಫೆಸರ್ ಆಗಿ ನೇಮಕವಾಗಿ ಅದೇ ವಿಶ್ವವಿದ್ಯಾನಿಲಯದ ಉಪಕುಲಪತಿ ಹುದ್ದೆಯಂಥ ಉನ್ನತ ಸ್ಥಾನದ ವರೆಗೂ ಏರಿದರು. ಕುವೆಂಪು ಅವರೊಬ್ಬ ಶ್ರೇಷ್ಠ ಕಾದಂಬರಿಕಾರರೂ, ಕವಿಗಳೂ ಹಾಗೂ ನಾಟಕಕಾರರೂ ಆಗಿದ್ದು ಕನ್ನಡ ಸಾಹಿತ್ಯಕ್ಕೆ ಮೊತ್ತ ಮೊದಲ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟವರಾಗಿದ್ದಾರೆ.

ಕುವೆಂಪು ಅವರ ಬರವಣಿಗೆಯಲ್ಲಿ ಶೂದ್ರ ಸುಧಾರಣೆಯ ಸ್ಫೂರ್ತಿಯನ್ನೂ ಹಾಗೂ ಬ್ರಾಹ್ಮಣರು ಮತ್ತು ಹಿಂದೂ ಧರ್ಮದ ಪ್ರಸ್ತುತ ಆಚರಣೆಗಳ ಕುರಿತು ಕಟು ವಿಮರ್ಶೆಯನ್ನೂ ನಾವು ನೋಡುತ್ತೇವೆ. ಅವರು ವಿವೇಕಾನಂದರ ಬರವಣಿಗೆ, ಬೋಧನೆಗಳು ಹಾಗೂ ರಾಮಕೃಷ್ಣರ ಅನುಭಾವಿಕ ವ್ಯಕ್ತಿತ್ವದಿಂದಲೂ ಆಳವಾಗಿ ಪ್ರಭಾವಿತರಾಗಿದ್ದರು. ಅದಲ್ಲದೇ ಅವರು ಮೈಸೂರಿನ ರಾಮಕೃಷ್ಣಾಶ್ರಮದ ನಿಕಟವರ್ತಿಯೂ, ಅನುಯಾಯಿಯೂ ಆಗಿದ್ದರು. ವಿವೇಕಾನಂದರು ಮೈಸೂರಿನ ಆಡಳಿತದ ಮೇಲೆ ವಿಶೇಷ ಪ್ರಭಾವವನ್ನು ಬೀರಿದ್ದರು. ಅವರು ಮಹಾರಾಜರ ಜೊತೆಗೆ ವೈಯಕ್ತಿಕ ಸಂಪರ್ಕವನ್ನು ಹೊಂದಿದ್ದಲ್ಲದೇ ಸ್ವತಃ ಮೈಸೂರಿಗೂ ಭೇಟಿನೀಡಿ ಈ ಸರ್ಕಾರದ ಸುಧಾರಣಾ ಕಾರ್ಯಕ್ರಮಗಳಿಗೆ ಸ್ಫೂರ್ತಿಯನ್ನು ತುಂಬಿದ್ದರು. ಅದರ ಫಲವಾಗಿ ಅಸ್ಪೃಶ್ಯರಾದಿಯಾಗಿ ಎಲ್ಲಾ ಸಮುದಾಯಗಳಿಗೂ ಆಧುನಿಕ ಶಿಕ್ಷಣದ ಅವಕಾಶವನ್ನು ನೀಡಲಾಯಿತು. ಹಿಂದೂಧರ್ಮ ಕುರಿತ ಕುವೆಂಪು ಅವರ ವಿಮರ್ಶೆಯ

ುತ್ತೊಂದು ನೆಲೆಯೆಂದರೆ ತೀರ್ಥಹಳ್ಳಿಯ ಸುತ್ತಮುತ್ತ ೨೦ನೇ ಶತಮಾನದ ಪ್ರಾರಂಭದಲ್ಲಿ ಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸಿದ್ದ ಕ್ರೈಸ್ತ ಮಿಶನರಿಗಳು. ಕುವೆಂಪು ಅವರ ಕೆಲವು ಕಟವರ್ತಿಗಳೂ ಕ್ರೈಸ್ತಮತಕ್ಕೆ ಪರಿವರ್ತನೆ ಹೊಂದಿದ್ದುದು ತಿಳಿದುಬರುತ್ತದೆ. ಈ ಮಿಶನರಿಗಳು ುಖ್ಯವಾಗಿ ಒಕ್ಕಲಿಗರು ಹಾಗೂ ಇತರ ಬ್ರಾಹ್ಮಣೇತರರನ್ನೇ ಉದ್ದೇಶವಾಗಿಟ್ಟುಕೊಂಡಿದ್ದುದು ಷ್ಟ. ಕುವೆಂಪು ಅವರಿಗೆ ಈ ಮಿಶನರಿಗಳ ಗುರಿಯ ಕುರಿತು ಅರಿವಿದ್ದುದರಿಂದ ಅವರ ುತಪರಿವರ್ತನೆಯ ಚಟುವಟಿಕೆಯನ್ನು ವಿರೋಧಿಸಿ ಹಿಂದೂಧರ್ಮವನ್ನು ರಕ್ಷಿಸುವ ಗತ್ಯವನ್ನೂ ಮನಗಂಡಿದ್ದರು. ಆದರೆ ಹಿಂದೂ ಸಮಾಜದ ಕುರಿತ ಮಿಶನರಿಗಳ ವಾದಗಳ ುೂಲಾಂಶಗಳು ಸರಿ ಎಂಬುದಾಗಿಯೂ ಅವರು ಒಪ್ಪಿಕೊಂಡಿದ್ದರು.

ಕುವೆಂಪು ಅವರ ಬರವಣಿಗೆಗಳಲ್ಲಿ ವ್ಯಕ್ತವಾದಂತೇ ಹಿಂದೂಧರ್ಮ ಮತ್ತು ಜಾತಿವ್ಯವಸ್ಥೆಯ ುರಿತು ಬರುವ ಗ್ರಹಿಕೆಗಳು ಈ ಕೆಳಗಿನ ರೀತಿಯಲ್ಲಿವೆ:

೧) ಸನಾತನ ಧರ್ಮದ ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಮುಂತಾದ ಸಂಸ್ಕೃತ ಗ್ರಂಥಗಳಲ್ಲಿ ಹಿಂದೂ ಧರ್ಮದ ಕಾಣ್ಕೆಗಳಿವೆ ಹಾಗೂ ಈ ಸನಾತನ ಹಿಂದೂ ಧರ್ಮದ ಮೂಲ ತತ್ವಗಳು ಉದಾತ್ತವಾಗಿಯೇ ಇವೆ.

೨) ಹಿಂದೂಧರ್ಮವು ಇಂದು ಜಾತಿ ವ್ಯವಸ್ಥೆ ಮೂಢಾಚಾರ ಹಾಗೂ ತಪ್ಪು ನಿರೂಪಣೆಗಳಿಂದ ಅವನತಿಯನ್ನು ಹೊಂದಿದೆ. ಈ ಅವನತಿಯ ಬಲಿಪಶುಗಳೆಂದರೆ ಶೂದ್ರರು. ಅವರು ದೆವ್ವ ಭೂತ ಮುಂತಾದವುಗಳ ಪೂಜೆಗಳನ್ನು ಪ್ರಾಣಬಲಿಯೊಂದಿಗೆ ಆಚರಿಸುತ್ತಾರೆ ಮತ್ತು ಮೂಢಾಚಾರಗಳನ್ನು ನಂಬಿಕೊಂಡಿದ್ದಾರೆ. ಅವರ ಆಚರಣೆಗಳು ಹಿಂದೂ ಧರ್ಮಗ್ರಂಥಗಳ ಮೂಲತತ್ವಗಳನ್ನಾಧರಿಸಿಲ್ಲ. ಈ ಹಿಂದೂ ಧರ್ಮಗ್ರಂಥಗಳಲ್ಲಿನ ಕಾಣ್ಕೆಯ ಕುರಿತು ಅವರು ಅಜ್ಞಾನಿಗಳಾಗಿದ್ದಾರೆ.

೩) ಬ್ರಾಹ್ಮಣರು ಹಿಂದೂ ಧರ್ಮದ ಪುರೋಹಿತರು ಹಾಗೂ ಹಿಂದೂ ಧರ್ಮದ ಅವನತಿಗೆ ಅವರ ದುರಾಸೆ ಹಾಗೂ ಅಜ್ಞಾನಗಳೇ ಜವಾಬ್ದಾರಿ. ಈ ಅವನತಿಯು ಈ ಕೆಳಗಿನ ರೀತಿಯಲ್ಲಿ ಆಗಿದೆ:

   ಅ) ತಮ್ಮ ದುರಾಸೆ ಮತ್ತು ಅಜ್ಞಾನಗಳಿಗೆ ಬಲಿಯಾದ ಬ್ರಾಹ್ಮಣ ಪುರೋಹಿತರು ಹಿಂದೂ ಗ್ರಂಥಗಳನ್ನು ತಪ್ಪಾಗಿ ಅರ್ಥೈಸಿ, ಅಥವಾ ಅದರಲ್ಲಿ ತಮಗೆ ಬೇಕಾದ್ದನ್ನೆಲ್ಲ ಸೇರಿಸಿಕೊಂಡು ತಪ್ಪು ಆಚರಣೆಗಳನ್ನು ಹಾಗೂ ಜಾತಿ ತರತಮಗಳನ್ನೂ ರೂಢಿಸಿದ್ದಾರೆ.

   ಬ) ಅವರು ಜಾತಿ ಪದ್ಧತಿಯ ಮೂಲಕ ಶೂದ್ರರನ್ನು ಸಮಾಜದ ಇತರರಿಂದ ಕೀಳೆಂಬುದಾಗಿ ಪ್ರತ್ಯೇಕಿಸಿದ್ದಾರೆ. ಅವರು ಶೂದ್ರರಿಗೆ ಶಿಕ್ಷಣವನ್ನು ನಿರಾಕರಿಸಿ, ಬ್ರಾಹ್ಮಣರ ನಿಯಮಗಳನ್ನು ಮುರಿದವರಿಗೆ ಕ್ರೂರ ಶಿಕ್ಷೆಯನ್ನು ವಿಧಿಸುವುದರ ಮೂಲಕ ಶೂದ್ರರಿಗೆ ಹಿಂದೂ ಗ್ರಂಥಗಳನ್ನು ಹಾಗೂ ಅವುಗಳ ತತ್ವವನ್ನು ತಿಳಿದುಕೊಳ್ಳುವ ಅವಕಾಶವನ್ನು ತಪ್ಪಿಸಿದ್ದಾರೆ.

   ಕ) ಅವರು ಶೂದ್ರರು ಸದಾ ಇದೇ ಸ್ಥಿತಿಯಲ್ಲಿ ಇರಬೇಕೆಂದು ಬಯಸುತ್ತಾರೆ.

> ಹಾಗಾಗಿ, ಅವರನ್ನು ಮೂಢನಂಬಿಕೆ ಮತ್ತು ಅನೈತಿಕ ಆಚಾರಗಳಿಂದ ದಾರಿತಪ್ಪಿಸುತ್ತಿದ್ದಾರೆ. ಅವರಿಗೆ ಸಂಸ್ಕೃತ ಕಲಿಯುವುದನ್ನು ಹಾಗೂ ಸಮಾನ ಸ್ಥಾನಮಾನವನ್ನು ನಿರಾಕರಿಸಿದ್ದಾರೆ, ತಮ್ಮ ಸ್ಥಾನಮಾನವನ್ನು ಏರಿಸಿಕೊಳ್ಳಬಯಸುವ ಶೂದ್ರರನ್ನು ಅವರು ಮೆಚ್ಚುವುದಿಲ್ಲ. ಅವರ ಈ ಕಟ್ಟುಪಾಡುಗಳನ್ನು ಮುರಿದು ಶೂದ್ರರು ತಮ್ಮ ಸ್ಥಾನವನ್ನು ಮೀರಬಯಸುವವರನ್ನು ಅವರು ಸಹಿಸುವುದಿಲ್ಲ.

ಕುವೆಂಪು ಅವರ ವಿಚಾರಗಳನ್ನು ಈ ಮೇಲಿನಂತೇ ಸಂಕ್ಷಿಪ್ತವಾಗಿ ಇಟ್ಟಾಗ ನಮಗೆ ಅದು ಕುವೆಂಪು ಅವರ ಕಾಲದಲ್ಲಿ ಭಾರತೀಯ ಸಾಂಸ್ಕೃತಿಕ ಇತಿಹಾಸದ ಕುರಿತು ಪ್ರಚಲಿತದಲ್ಲಿದ್ದ ಅಭಿಜಾತ ಕ್ಲಾಸಿಕಲ್ ನಿರೂಪಣೆಗಳಿಂದ ಬಂದಿರುವುದು ಗೊತ್ತಾಗುತ್ತದೆ. ಕುವೆಂಪು ಅವರು ಸ್ವೀಕರಿಸಿದ ರೀತಿಯಲ್ಲಿ ಈ ನಿರೂಪಣೆಯನ್ನು ಭಾರತೀಯ ಸಮಾಜದ ಕುರಿತು ಕ್ರೈಸ್ತ ಮಿಶನರಿಗಳು ಹಾಗೂ ಸುಧಾರಣಾವಾದಿಗಳು ಹಾಗೂ ವಿವೇಕಾನಂದರಂಥವರು ನಿರೂಪಿಸಿ ಕೊಟ್ಟಿದ್ದಾರೆ. ಇದೊಂದು ಐತಿಹಾಸಿಕ ನಿರೂಪಣೆ ಎಂಬಂತೆ ಮಂಡಿತವಾದರೂ ಲೇಖಕರಿಗೆ ಅದು ತಮ್ಮ ವರ್ತಮಾನವನ್ನು ಗ್ರಹಿಸುವಲ್ಲೂ ಕೆಲವೊಮ್ಮೆ ಅರ್ಥಪೂರ್ಣವೆನಿಸುತ್ತದೆ. ಈ ಪ್ರಕ್ರಿಯೆಯಲ್ಲಿ ಅದು ಲೇಖಕರಿಗೆ ತಮ್ಮನ್ನೂ ತಮ್ಮ ಸುತ್ತಲಿನವರನ್ನೂ ಗುರುತಿಸಲು ಮಾದರಿಗಳನ್ನು ನೀಡುತ್ತದೆ. ಈ ಮಾದರಿಗಳು ನಮ್ಮ ಸಂಸ್ಕೃತಿಯ ಕುರಿತು ಅಭಿಜಾತ ನಿರೂಪಣೆಯಲ್ಲಿ ರಚಿತವಾದ ಅನೇಕ ಸ್ಟೀರಿಯೋಟೈಪಗಳನ್ನು ಸೇರಿಸಿ ರಚಿಸಿದವುಗಳಾಗಿವೆ: ಅವು ಶೂದ್ರನ ಹಾಗೂ ಬ್ರಾಹ್ಮಣನ ಮಾದರಿಗಳನ್ನು ರಚಿಸುತ್ತವೆ. ಈ ಶೂದ್ರನ ಹಾಗೂ ಬ್ರಾಹ್ಮಣನ ಮಾದರಿಯಲ್ಲಿ ಶೂದ್ರನ ಪ್ರಗತಿ ಹಾಗೂ ವಿಮೋಚನೆಯಲ್ಲಿ ಬ್ರಾಹ್ಮಣನು ಅಡ್ಡಗಲ್ಲಾಗಿರುವ ಕಲ್ಪನೆಯು ಆಕಾರತಳೆಯುತ್ತದೆ. ಈ ಪರಿಕಲ್ಪನಾತ್ಮಕ ಚೌಕಟ್ಟು ಲೇಖಕರಿಗೆ ತಮ್ಮ ನೆನಪನ್ನು ಗ್ರಹಿಸಲು ಎಷ್ಟರಮಟ್ಟಿಗೆ ಮಾರ್ಗದರ್ಶಿಯಾಗುತ್ತದೆ ಹಾಗೂ ಹಾಗೂ ಅವರಿಗೆ ತಮ್ಮ ಅನುಭವಗಳನ್ನು ಅರ್ಥೈಸುವಲ್ಲಿ ಯಾವ ರೀತಿಯ ಪ್ರಭಾವವನ್ನು ಬೀರುತ್ತದೆ ಎಂಬುದನ್ನು ಪ್ರಸ್ತುತ ಲೇಖನದಲ್ಲಿ ಪರಿಶೀಲಿಸಲಾಗುವುದು.

ಲೇಖಕರ ಜೀವನದ ಘಟನೆಗಳಗೂ ಈ ಮೇಲಿನ ಜಾತಿ ವ್ಯವಸ್ಥೆಯ ನಿರೂಪಣೆಗೂ ಒಂದು ಕೊಂಡಿಯಾಗಿ ಅಲ್ಲಲ್ಲಿ ಲೇಖಕರ ಕೆಲವು ಅಭಿಪ್ರಾಯಗಳು ಹಾಗೂ ಪರ್ಯಾಲೋಚನೆಗಳು ಬರುತ್ತವೆ. ಈ ಅಭಿಪ್ರಾಯ ಹಾಗೂ ಪರ್ಯಾಲೋಚನೆಗಳು ಒಂದೆಡೆ ಅವರ ಜೀವನದ ಘಟನೆಗಳೂ ಮತ್ತೊಂದೆಡೆ ಜಾತಿ ವ್ಯವಸ್ಥೆಯ ನಿರೂಪಣೆಗಳೂ ಅರ್ಥಪೂರ್ಣವಾಗುವಂತೆ ಮಾಡುತ್ತವೆ. ಈ ಅಭಿಪ್ರಾಯಗಳನ್ನು ಹಾಗೂ ಪರ್ಯಾಲೋಚನೆಗಳನ್ನು ಅವರ ಅನುಭವ ಜಗತ್ತಿಗೆ ತಾಳೆ ಮಾಡದೇ ಮೇಲ್ನೋಟಕ್ಕೇ ಗ್ರಹಿಸಿದರೆ ಲೇಖಕರ ಜೀವನದ ಘಟನೆಗಳು ಜಾತಿ ವ್ಯವಸ್ಥೆಯ ನಿರೂಪಣೆಗೆ ನಿದರ್ಶನವಾಗಿವೆ ಎಂಬ ಭಾವನೆ ಹುಟ್ಟುವುದು ಸಹಜ. ಕುವೆಂಪು ಅವರ ಜೀವನ ವೃತ್ತಾಂತದಲ್ಲಿ ಈ ಜಾತಿ ವ್ಯವಸ್ಥೆಯ ಅಭಿಜಾತ ನಿರೂಪಣೆಗಳು ನಿದರ್ಶನವಾಗಿವೆ ಎಂಬಂತೇ ಅದನ್ನು ಕನ್ನಡ ಓದುಗರು ಕೂಡಾ ನೋಡಿದ್ದಾರೆ.

ಆದರೆ ಅವರ ಜೀವನ ವೃತ್ತಾಂತಗಳನ್ನು ಸ್ವಲ್ಪ ನಿಕಟವಾಗಿ ಪರಿಶೀಲಿಸಿದಾಗ ಒಂದು ಸಂಗತಿ ನಮ್ಮ ಗಮನಕ್ಕೆ ಬರುತ್ತದೆ. ಅದೆಂದರೆ ಅವರ ಜಾತಿ ವ್ಯವಸ್ಥೆಯ ಕುರಿತ ನಿರೂಪಣೆಗಳು ಹೊರಡಿಸುವ ಅಭಿಪ್ರಾಯಗಳು ಹಾಗೂ ಪರ್ಯಾಲೋಚನೆಗಳನ್ನು ಅವರ ಅನುಭವ ಎಂಬುದಾಗಿ ಗ್ರಹಿಸಿದರೆ

ಕೆಲವು ಸಮಸ್ಯೆಗಳು ಎದುರಾಗುತ್ತವೆ: ೧) ಬಹುತೇಕ ಅಭಿಪ್ರಾಯಗಳು ಹಾಗೂ ಅವಲೋಕನೆಗಳು ಯಾವುದೇ ವೈಯಕ್ತಿಕ ಅನುಭವದ ಸಂದರ್ಭದಲ್ಲಿ ಉಲ್ಲೇಖಿತವಾದವುಗಳಲ್ಲ. ಅವುಗಳನ್ನು ಲೇಖಕರು ಒಂದು ವಿಚಾರವಾಗಿ ಇಡುತ್ತಾರೆ ಅಷ್ಟೆ. ೨) ಹೆಚ್ಚಿನ ಸಂದರ್ಭಗಳಲ್ಲಿ ಲೇಖಕರ ಜೀವನಾನುಭವಗಳು ಈ ಅಭಿಜಾತ ಜಾತಿವ್ಯವಸ್ಥೆಯ ನಿರೂಪಣೆಗೆ ವ್ಯತಿರಿಕ್ತವಾಗಿರುವುದನ್ನು ನೋಡುತ್ತೇವೆ. ಹಾಗೂ ಕಥನದಲ್ಲಿ ಆ ನಿರೂಪಣೆಯು ಲೇಖಕರಿಗೂ ಪ್ರಸ್ತುತವಾಗುವುದಿಲ್ಲ. ೩) ಕೆಲವು ಸಂದರ್ಭಗಳಲ್ಲಿ ಲೇಖಕರು ಈ ನಿರೂಪಣೆಯನ್ನು ಘಟನೆಗಳಲ್ಲಿ ಕಂಡರೂ ಆ ಘಟನೆಗಳು ಈ ಅಭಿಜಾತ ನಿರೂಪಣೆಯನ್ನು ಪ್ರಮಾಣೀಕರಿಸುವುದಿಲ್ಲ. ೪) ಇನ್ನೂ ಅನೇಕ ಉದಾಹರಣೆಗಳಲ್ಲಿ ನಡೆದ ಘಟನೆಗಳು ಲೇಖಕರ ಪರ್ಯಾಲೋಚನೆಗೆ ಹೊಂದಿಕೆಯಾಗದಂತೇ ಇವೆ.

೧. ಹಲವಾರು ಬಾರಿ ಬ್ರಾಹ್ಮಣ ಮತ್ತು ಶೂದ್ರರ ಕುರಿತ ಲೇಖಕರ ಹೇಳಿಕೆಗಳು ಯಾವುದೇ ಘಟನೆಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರುವುದಿಲ್ಲ. ಸುಮ್ಮನೆ ಅವು ವಿಚಾರಗಳಾಗಿ ಬರುತ್ತವೆ. ಹಾಗೂ ಲೇಖಕರು ಅವುಗಳನ್ನು ಉಳಿದವರಿಂದ ತೆಗೆದುಕೊಂಡ ಅಭಿಪ್ರಾಯವಾಗಿ ಇಡುತ್ತಾರೆ. ಹಾಗೂ ಅವನ್ನು ಸಾಮಾನ್ಯ ಸತ್ಯಗಳಂತೆಯೇ ಇಡಲಾಗಿದೆ. ಅಂಥ ಹಲವೆ ನಿದರ್ಶನಗಳನ್ನು ನಾವು ಪು. ೨೭,೧೭೩, ೧೯೭-೯೮, ೨೦೦, ೯೭೪-೫. ಗಳಲ್ಲಿ ನೋಡಬಹುದು.

ಲೇಖಕರು ಅಭಿಜಾತ ನಿರೂಪಣೆಯನ್ನು ಎಲ್ಲಿಂದ ತೆಗೆದುಕೊಂಡಿದ್ದಾರೆಂಬುದನ್ನು ನೆನಪಿನ ದೋಣಿಯಲ್ಲಿ ಸ್ಪಷ್ಟವಾಗಿ ತಿಳಿಸುತ್ತದೆ. ಪ್ರಾರಂಭಿಕ ಪುಟಗಳಲ್ಲಿ ಕ್ರೈಸ್ತ ಪಾದ್ರಿಗಳ ವಿಚಾರ ಬರುತ್ತದೆ. ತೀರ್ಥಹಳ್ಳಿಯ ಸುತ್ತಮುತ್ತ ಚಟುವಟಿಕೆಯಲ್ಲಿ ತೊಡಗಿದ್ದ ಕ್ರೈಸ್ತ ಪಾದ್ರಿಗಳು ಶೂದ್ರರಿಗೆ ಇಂಗ್ಲೀಷ್ ಶಿಕ್ಷಣವನ್ನು ನೀಡುವುದರ ಮೂಲಕ ಅವರನ್ನು ಸುಧಾರಿಸಲು ಪ್ರಯತ್ನಿಸುತ್ತಿದ್ದರು. ಕುಪ್ಪಳಿ ಮನೆಯಲ್ಲಿ ಶಾಲೆ ನಡೆಸಿದ ಒಬ್ಬ ಕ್ರೈಸ್ತ ಶಿಕ್ಷಕರ ಪ್ರಸ್ತಾಪ ಕೂಡಾ ಬರುತ್ತದೆ. ಕುವೆಂಪು ಅವರಿಗೆ ಮುಖ್ಯವಾಗಿ ಆ ಶಿಕ್ಷಕರ ಸ್ವಚ್ಛ ಉಡುಪು ಹಾಗೂ ಕೇಶವಿನ್ಯಾಸದ ಕುರಿತು ಅಪಾರವಾದ ಪ್ರಶಂಸೆಯಿತ್ತು. ಶೂದ್ರರನ್ನು ಬ್ರಾಹ್ಮಣರ ಸೇವೆಯಿಂದ ವಿಮೋಚಿಸುವ ಭರವಸೆಯನ್ನು ಮೂಡಿಸಿದವರೇ ಮಿಶನರಿಗಳು ಎಂಬುದಾಗಿ ಲೇಖಕರು ಸೂಚಿಸುತ್ತಾರೆ. ತೀರ್ಥಹಳ್ಳಿಯ ಸುತ್ತ ಒಕ್ಕಲಿಗರನ್ನು ಪರಿವರ್ತಿಸಲು ಪ್ರಯತ್ನಿಸಿ ವಿಫಲರಾದ ಒಬ್ಬ ಪಾದ್ರಿಗಳು ಈ ಜನರು ಬ್ರಾಹ್ಮಣರ ಪಾದವನ್ನು ತೊಳೆದ ನೀರನ್ನು ಕುಡಿಯುವುದನ್ನು ಬಿಡಲು ನಿರಾಕರಿಸುತ್ತಾರೆ ಎಂಬುದಾಗಿ ಕೈಚೆಲ್ಲಿದ್ದರಂತೆ (೧೯೭-೯೮). ಈ ಘಟನೆಯನ್ನು ತಿಳಿಸಿದ ನಂತರ ಹಿಂದೂಧರ್ಮದ ಈ ವರ್ಣನೆಯಲ್ಲಿ ಲವಲೇಶವೂ ಅತಿಶಯೋಕ್ತಿಯಿಲ್ಲ ಎಂಬುದಾಗಿ ಕುವೆಂಪು ಅವರು ಅಭಿಪ್ರಾಯಪಡುತ್ತಾರೆ. ಈ ಗ್ರಂಥದ ಬೇರೆ ಬೇರೆ ಭಾಗಗಳಲ್ಲಿ ಕ್ರೈಸ್ತ ಶಿಕ್ಷಕರಿಂದ ಹಾಗೂ ಪಾದ್ರಿಗಳಿಂದ ಇಂಥವೇ ಹೇಳಿಕೆಗಳು ಬಂದ ವಿಷಯವಿದೆ. ಆದರೆ ಕುವೆಂಪು ಅವರ ಪ್ರಕಾರ ಕ್ರೈಸ್ತ ಪಾದ್ರಿಗಳು ಹಾಗೂ ಬ್ರಾಹ್ಮಣರು ಇಬ್ಬರೂ ಪುರೋಹಿತರಾಗಿರುವುದರಿಂದ ಇಬ್ಬರೂ ಅಷ್ಟೇ ಅಪಾಯಕಾರಿಗಳಾಗಿದ್ದಾರೆ (೯೭೪).

ಪುಟ ೧೭೩-೭೪ ರಲ್ಲಿ ಲೇಖಕರಿಗೆ ಇಂಗ್ಲಿಷ್ ಶಿಕ್ಷಣದ ಕುರಿತು ಇರುವ ಪ್ರಶಂಸೆಯ ಕುರಿತು ಒಂದು ಚಿಕ್ಕ ಟಿಪ್ಪಣಿಯಿದೆ. ಲೇಖಕರು ತಾವು ಬ್ರಿಟಿಷರ ವಸಾಹತುಶಾಹಿ ಶೋಷಣೆಯನ್ನು ದ್ವೇಷಿಸಿದರೂ ಅವರ ಭಾಷೆಯ ಕುರಿತು ತಮಗೆ ಗೌರವವಿದೆ ಎನ್ನುತ್ತಾರೆ. ಅದಕ್ಕೆ ಕಾರಣವೆಂದರೆ

ಅವರಿಗೆ ಸ್ವಾಮಿ ವಿವೇಕಾನಂದರ ಬರವಣಿಗೆಗಳು ತಿಳಿದುಬಂದಿದ್ದೇ ಆ ಭಾಷೆಯಿಂದ ಹಾಗೂ ಆ ಮೂಲಕವೇ ತಮಗೆ ವೇದಾಂತ ದರ್ಶನದ ಪರಿಚಯವಾಯಿತು ಎನ್ನುತ್ತಾರೆ. ಲೇಖಕರಿಗೆ ಇಂದಿನ ವೈದಿಕ ಹಿಂದೂಧರ್ಮದ ಕುರಿತು ನಂಬಿಕೆ ಹುಟ್ಟದಿರಲಿಕ್ಕೆ ಕಾರಣವೆಂದರೆ ಸಂಪ್ರದಾಯಸ್ಥ ಬ್ರಾಹ್ಮಣರ ಸಂಕುಚಿತ ಬುದ್ಧಿಯ ಪ್ರತಿಪಾದನೆಗಳು. ಲೇಖಕರು ಮನುಸ್ಮೃತಿಯು ಪ್ರತಿಪಾದಿಸಿದ ಜಾತಿ ತಾರತಮ್ಯವನ್ನು, ಶೂದ್ರರಿಗೆ ಸಂಸ್ಕೃತವನ್ನು ನಿರಾಕರಿಸಿರುವುದನ್ನು ತಾವು ದ್ವೇಷಿಸುತ್ತೇವೆನ್ನುತ್ತಾರೆ. ಬ್ರಿಟಿಷರು ಭಾರತದಲ್ಲಿ ಹೊಸದೊಂದು ರಾಜಕೀಯ ವ್ಯವಸ್ಥೆಯನ್ನು ಸ್ಥಾಪಿಸಿ ಶೂದ್ರರು ಹಾಗೂ ಇತರ ಜಾತಿಗಳಲ್ಲಿ ನೈತಿಕ ಧೈರ್ಯವನ್ನು ತುಂಬಿದ್ದಾರೆ. ಈ ಜಾತಿಗಳು ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದವು. ಲೇಖಕರು ಹಿಂದೂ ಸಮಾಜದ ಕುರಿತು ಏನು ವಿಚಾರವನ್ನು ಹೊಂದಿದ್ದಾರೆ ಹಾಗೂ ಆ ವಿಚಾರಗಳು ಯಾವ ಮೂಲದಿಂದ ಬಂದವು ಎಂಬುದಕ್ಕೆ ಇಷ್ಟು ಉದಾಹರಣೆ ಸಾಕಾಗಬಹುದು.

ಕುವೆಂಪು ಅವರು ಮೂಢಾಚರಣೆಗಳಲ್ಲಿ ಬಂಧಿಗಳಾದ ಒಕ್ಕಲಿಗರ ವಿಮೋಚನೆಗಾಗಿ ಮಲೆನಾಡು ಒಕ್ಕಲಿಗ ಯುವಕರ ಸಂಘವನ್ನು ಸ್ಥಾಪಿಸಿದ್ದರು. ದೇವರು, ಧರ್ಮ, ಸ್ವರ್ಗ-ನರಕಗಳ ಕಲ್ಪನೆಗಳು ಇವೆಲ್ಲ ಬ್ರಾಹ್ಮಣರು ಹಾಗು ಪಾದ್ರಿಗಳು ಶೂದ್ರರನ್ನು ಮೋಸಗೊಳಿಸುವ ಉಪಾಯಗಳು(೯೭೪-೭೫). ನಾಗರಿಕ ದೇವತೆಗಳು ಹಾಗೂ ಆಚರಣೆಗಳ ಕುರಿತು ಶೂದ್ರರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಈ ಸಂಘವನ್ನು ಸ್ಥಾಪಿಸಲಾಯಿತೆಂದು ಲೇಖಕರು ತಿಳಿಸುತ್ತಾರೆ.

೨. ಲೇಖಕರು ಸ್ವೀಕರಿಸಿದ ಅಭಿಜಾತ ನಿರೂಪಣೆಯು ಶೂದ್ರರನ್ನು ಬ್ರಾಹ್ಮಣ ಪುರೋಹಿತರು ಹತ್ತಿಕ್ಕುವ ಹಾಗೂ ಶೋಷಿಸುವ ಚಿತ್ರಣವನ್ನು ನೀಡುತ್ತದೆ. ಆದರೆ ಕುವೆಂಪು ಅವರ ಜೀವನ ಸ್ಮೃತಿಯಲ್ಲಿ ಬರುವ ಅವರ ಅನುಭವಗಳು ಇಂಥ ಅಭಿಜಾತ ನಿರೂಪಣೆಗಳಿಗೆ ವಿರುದ್ಧವಾಗಿರುವುದನ್ನೂ ನೋಡುತ್ತೇವೆ. ಲೇಖಕರಿಗೂ ಅವು ಅಪ್ರಸ್ತುತವಾಗುತ್ತವೆ. ಕುವೆಂಪು ಅವರ ಆತ್ಮಚರಿತ್ರೆಯಲ್ಲಿ ಬರುವ ಅವರ ಬಾಲ್ಯದ ದಿನಗಳ ಕುರಿತ ಚಿತ್ರಣಗಳಲ್ಲಿ ಒಕ್ಕಲಿಗರ ಜೀವನದಲ್ಲಿ ಬ್ರಾಹ್ಮಣರ ಅಂಥ ಪ್ರಸ್ತುತಿಯಾಗಲೀ, ಹಸ್ತಕ್ಷೇಪವಾಗಲೀ ನೋಡಲಿಕ್ಕೇ ಸಿಗುವುದಿಲ್ಲ. ಪುಟ ೫೦-೫೨ ರಲ್ಲಿ ಲೇಖಕರು ತಮ್ಮ ಬಾಲ್ಯದ ದಿನಗಳನ್ನು ಸಂತೋಷದಿಂದ ನೆನಪಿಸಿಕೊಳ್ಳುತ್ತಾ ತಾವೇ ತಮ್ಮ ಹಳ್ಳಿಗೆ (ಅವರ ಮನೆ ಹಾಗೂ ಸುತ್ತಮುತ್ತಲಿನ ಪ್ರದೇಶ) ತಾವೇ ಒಡೆಯರಾಗಿದ್ದುದು ಹಾಗೂ ಕುಪ್ಪಳಿಯ ಮಕ್ಕಳನ್ನು ಯಾರೂ ತಡೆಯುವುದಾಗಲೀ ಪ್ರಶ್ನಿಸುವುದಾಗಲೀ ಇರಲಿಲ್ಲ ಎಂಬುದಾಗಿ ಬರೆಯುತ್ತಾರೆ. ಅವರ ಅಡಿಕೆ ತೋಟ, ಕಾಡು, ಗುಡ್ಡಗಳು ಹಾಗೂ ಗದ್ದೆಗಳು ಅವರ ಆಟದ ಬಯಲಾಗಿದ್ದವು. ಅವರು ಒಡನಾಡಿದ ಉಳಿದ ಒಕ್ಕಲಿಗರ ಮನೆಗಳ ಕುರಿತೂ ಇದೇ ಅಭಿಪ್ರಾಯ ಮೂಡುವಂತೆ ವರ್ಣಿಸಲಾಗಿದೆ. ಈ ಪುಸ್ತಕದಲ್ಲಿ ಒಕ್ಕಲಿಗರು ಸಾಕಷ್ಟು ಶ್ರೀಮಂತರಾಗಿದ್ದು ಬ್ರಾಹ್ಮಣರೂ ಅವರನ್ನು ಗೌರವದಿಂದ ನೋಡುತ್ತಿದ್ದ ವರ್ಣನೆಗಳಿವೆ. ಹಾಗಾಗಿ ಭೌತಿಕವಾಗಿ ಬ್ರಾಹ್ಮಣರ ದಬ್ಬಾಳಿಕೆಯೇನೂ ಕಾಣುವುದಿಲ್ಲ.

ಧಾರ್ಮಿಕ ಆಚರಣೆಯ ಸಂದರ್ಭದಲ್ಲಿಯೂ ಇಂಥ ಬ್ರಾಹ್ಮಣ ಪುರೋಹಿತರ ಯಾಜಮಾನ್ಯವು ಅಲ್ಲಿ ಕಾಣಿಸುವುದಿಲ್ಲ. ಈ ಪುಸ್ತಕದ ಪ್ರಾರಂಭವಾಗುವುದೇ ಲೇಖಕರ ಅಜ್ಜನ ಪೂಜೆಗಳ ಕುರಿತ ದೀರ್ಘ ವಿವರಣೆಗಳಿಂದ(೧೪-೨೧). ಅವರ ಮನೆಯ ದೈನಂದಿನ

ಪೂಜೆ ಹಾಗೂ ಹಬ್ಬ ಹರಿದಿನಗಳನ್ನು ಮನೆಯವರೇ ಆಚರಿಸಿಕೊಳ್ಳುತ್ತಿದ್ದರು. ಎಲ್ಲೂ ಬ್ರಾಹ್ಮಣ ಪುರೋಹಿತರು ಕಾಣಿಸುವುದಿಲ್ಲ. ಆ ಆಚರಣೆಗಳು ಲೇಖಕರ ಎಳೆ ಮನಸ್ಸಿನಲ್ಲಿ ಯಾವುದೇ ಕೆಟ್ಟ ನೆನಪನ್ನು ಬಿಟ್ಟಂತಿಲ್ಲ. ಅವರು ತಮ್ಮ ಈ ದಿನಗಳನ್ನು ತಮ್ಮ ದಿವ್ಯವಾದ ದಿನಗಳೆಂದು ಮೆಲುಕುಹಾಕುತ್ತಾರೆ. ಪುಟ ೪೧೮-೧೯ ರಲ್ಲಿ ಲೇಖಕರ ತಾಯಿಯ ತಿಥಿಯಂದು ಒಬ್ಬ ದಾಸಯ್ಯನು ವಿಧಿಗಳನ್ನು ನಡೆಸಿದ ಉಲ್ಲೇಖವಿದೆ. ಅಂದರೆ ವಿಧಿಗಳನ್ನು ನಡೆಸಲು ಬ್ರಾಹ್ಮಣೇತರ ಪುರೋಹಿತರ ಒಂದು ವರ್ಗವೂ ಇತ್ತು. ಒಕ್ಕಲಿಗರ ಮತ್ತು ಸ್ಥಳೀಯ ಬ್ರಾಹ್ಮಣರ ನಡುವಿನ ಒಡನಾಟವೂ ಪರಸ್ಪರ ಗೌರವಪೂರ್ವಕವಾಗಿ ನಡೆಯುತ್ತಿತ್ತು ಎಂಬುದು ಪುಟ ೧೦೪-೦೬ ರಲ್ಲಿ ತಿಳಿದುಬರುತ್ತದೆ.

ಪುಟ ೭೪೯ ರಲ್ಲಿ ಮೊತ್ತ ಮೊದಲ ಬಾರಿಗೆ ಬ್ರಾಹ್ಮಣರ ಮೂಢಾಚಾರಗಳು ಈ ಮನೆಯ ಸಂದರ್ಭದಲ್ಲಿ ಉಲ್ಲೇಖಿತವಾಗಿದೆ. ಕುಪ್ಪಳಿಯ ಅಡಿಕೆ ತೋಟಕ್ಕೆ ಸಿಡಿಲೆರಗಿ ಮರಗಳು ಸುಟ್ಟುಹೋದಾಗ ಒಬ್ಬ ಭಟ್ಟರು ಅದಕ್ಕೆ ಶಾಂತಿಯನ್ನು ಮಾಡಿಸಬೇಕು ಎಂಬುದಾಗಿ ಮನೆಯ ಯಜಮಾನರಿಗೆ ತಿಳಿಸುತ್ತಾರೆ. ಪುಟ ೮೧೬ ರಲ್ಲಿ ಉಲ್ಲೇಖಿತವಾದ ಪ್ರಕಾರ ಕುವೆಂಪು ಅವರು ಹಾಸಿಗೆ ಹಿಡಿದಿದ್ದಾಗ ಒಂದು ಭೂತಕ್ಕೆ ಕೋಳಿಯನ್ನು ಬಲಿಕೊಟ್ಟರೂ ಯಾವ ಪ್ರಯೋಜನವೂ ಆಗದಿದ್ದಾಗ ಬ್ರಾಹ್ಮಣ ಪೂಜಾರಿಗಳ ಒಂದು ದೇವಾಲಯಕ್ಕೆ ಕರೆದುಕೊಂಡು ಹೋಗುತ್ತಾರೆ. ಈ ಮೇಲಿನ ಎರಡು ಸಂದರ್ಭಗಳಲ್ಲಿ ಕುವೆಂಪು ಅವರು ಬ್ರಾಹ್ಮಣ ಪುರೋಹಿತಶಾಹಿಯ ಕುರಿತ ಅಭಿಜಾತ ನಿರೂಪಣೆಗಳ ದೃಷ್ಟಾಂತವೋ ಎಂಬಂತೆ ಅವನ್ನು ವಿವರಿಸುವುದು ಕಂಡುಬರುತ್ತದೆ. ಈ ಎರಡೂ ಸಂದರ್ಭಗಳಲ್ಲೂ ಕುಪ್ಪಳಿಯ ಮನೆಯವರು ತಾವೇ ತಮ್ಮ ಕಷ್ಟಗಳ ಪರಿಹಾರಕ್ಕಾಗಿ ಈ ಪುರೋಹಿತರಲ್ಲಿ ಹೋಗಿದ್ದರು. ಹಾಗೂ ಇವರ ಕಷ್ಟವನ್ನು ಪರಿಹರಿಸಲಿಕ್ಕೆ ಆ ಬ್ರಾಹ್ಮಣರು ತಮಗೆ ತೋಚಿದ ಪರಿಹಾರಗಳನ್ನು ಹೇಳಿದ್ದಾರೆ.

ಅಭಿಜಾತ ನಿರೂಪಣೆಯಲ್ಲಿ ಬರುವಂತೆ ಶೂದ್ರರ ಕುರಿತು ಬ್ರಾಹ್ಮಣರು ತಾರತಮ್ಯ ಮಾಡುತ್ತಾರೆ ಎಂಬ ಅಂಶವು ಕೂಡಾ ಕುವೆಂಪು ಅವರ ಜೀವನದಲ್ಲಿ ಹಲವೆಡೆ ದೃಷ್ಟಾಂತವಾಗುವುದಿಲ್ಲ. ಅವರ ಮೈಸೂರಿನ ಜೀವನದ ಘಟನೆಗಳು ಇಂಥ ಉದಾಹರಣೆಗಳಿಂದ ತುಂಬಿವೆ. ಅವರ ಕಾಲದ ಪ್ರಮುಖ ಬ್ರಾಹ್ಮಣ ಸಾಹಿತಿಗಳೆಲ್ಲ ಅಲ್ಲಿ ಬರುತ್ತಾರೆ. ಅವರು ಕುವೆಂಪು ಅವರಿಗೆ ಗುರುಗಳಾಗಿ ಮಾರ್ಗದರ್ಶನ ನೀಡುತ್ತಾರೆ ಗೆಳೆಯರಾಗಿ ಪ್ರೋತ್ಸಾಹಿಸುತ್ತಾರೆ ಹಾಗೂ ಶಿಷ್ಯರಾಗಿ ಗೌರವಿಸುತ್ತಾರೆ. ಕುವೆಂಪು ಅವರ ಪ್ರತಿಭೆಯನ್ನು ಗುರುತಿಸಿ, ಪ್ರಶಂಸಿಸಿ ಪ್ರೋತ್ಸಾಹಿಸಿ ಬೆಂಬಲಿಸುತ್ತಾರೆ, ಅವರ ಕವನಗಳನ್ನು ಪ್ರಕಟಿಸಲು ಹಣಕೂಡಿಸಿ ಮುಂದಾಗುತ್ತಾರೆ, ಅವರನ್ನು ಸಾರ್ವಜನಿಕವಾಗಿ ಸಮರ್ಥಿಸುತ್ತಾರೆ. ಕುವೆಂಪು ಅವರ ಸಾಹಿತ್ಯ ಸಂಗಾತಿಗಳಲ್ಲಿ ಬ್ರಾಹ್ಮಣರನ್ನು ಬಿಟ್ಟರೆ ಉಳಿದ ಜಾತಿಯವರು ಬೆರಳೆಣಿಕೆಯಷ್ಟು ಸಿಗಬಹುದು. ಅದಕ್ಕೆ ಮುಖ್ಯ ಕಾರಣವೆಂದರೆ ಆ ಕಾಲದಲ್ಲಿ ಸಾಹಿತ್ಯ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಬ್ರಾಹ್ಮಣರೇ ತುಂಬಿಕೊಂಡಿದ್ದುದು ಎಂಬುದು ಸ್ಪಷ್ಟ. ಆದರೆ ಈ ಬ್ರಾಹ್ಮಣರು ತಮ್ಮ ಪ್ರತಿಭಾಸ್ಪರ್ಧಿ ಶೂದ್ರ ಸ್ನೇಹಿತನನ್ನು ಪ್ರೋತ್ಸಾಹಿಸಿದ್ದೂ ಅಷ್ಟೇ ನಿಜ. ಅಂಥ ಕೆಲವರ ಒಡನಾಟವನ್ನು ಹಾಗೂ ಪತ್ರವ್ಯವಹಾರವನ್ನು ಕುವೆಂಪು ಉಲ್ಲೇಖಿಸಿದ್ದಾರೆ. ಅವರಲ್ಲಿ ಪ್ರಮುಖರೆಂದರೆ, ಹೆಚ್. ಎಮ್. ಕೃಷ್ಣ ಐಯಂಗಾರ್, ಎಸ್.ಜಿ.ಶಾಸ್ತ್ರಿ(?), ತಿ.ನಂ. ಶ್ರೀಕಂಠಯ್ಯ, ವೈ.ಎಂ. ಶ್ರೀ, ಎ.ಸಿ.ಶಾಮರಾವ್, ವೆಂಕಣ್ಣಯ್ಯ, ಮಾಸ್ತಿ, ಕೃಷ್ಣಶಾಸ್ತ್ರಿ ದೇವುಡು,

ಕುವೆಂಪು ಅವರಲ್ಲಿ ತಮ್ಮ ಗುರುವಿನ ದರ್ಶನ ಮಾಡಿದ ಡಿ.ಎಲ್. ನರಸಿಂಹಾಚಾರ್ಯ, ಮೈಸೂರು ವಿಶ್ವವಿದ್ಯಾನಿಲಯದ ರೆಜಿಸ್ಟ್ರಾರ್ ಆಗಿ ಕುವೆಂಪು ಅವರಿಗೆ ಅವರಿಗಿಂತಲೂ ಹಿರಿಯರಾದ ಅನೇಕ ಬ್ರಾಹ್ಮಣರನ್ನು ಕಡೆಗಣಿಸಿ ಕುವೆಂಪು ಅವರ ಪ್ರತಿಭೆಯನ್ನು ಗುರುತಿಸಿ ಅವರಿಗೆ ಹೆಚ್ಚು ಸಂಬಳವನ್ನು ಕೊಡುವುದನ್ನು ಸಮರ್ಥಿಸಿದ ಬಿ.ಎಂ.ಶ್ರೀ, ಕುವೆಂಪು ಅವರ ಮೊದಲ ಸಂಕಲನವನ್ನು ಚಂದಾ ಎತ್ತಿ ಪ್ರಕಟಿಸಿದ ತಿರುಪತಿ ಶ್ರೀನಿವಾಸಾಚಾರ್, ಹೀಗೆ ಅವರ ಪಟ್ಟಿ ಇನ್ನೂ ಉದ್ದಕ್ಕೆ ಇದೆ. ಡಿ.ವಿ.ಗುಂಡಪ್ಪ ಮತ್ತು ಎ.ಸಿ.ಶ್ರೀಕಂಠಾಚಾರ್ಯರು ಕಾನೂರು ಹೆಗ್ಗಡಿತಿಯ ಪ್ರತೀ ಅಧ್ಯಾಯವನ್ನೂ ಕುವೆಂಪುರವರಿಂದಲೇ ಓದಿಸಿ ಕೇಳಿದ್ದರು. ಅವರಲ್ಲಿ ಕೆಲವರು ಕುವೆಂಪು ಅವರ ಕುರಿತು ಟೀಕೆಗಳು ಬಂದಾಗ ತುಂಬಾ ಖಡಾಖಂಡಿತವಾಗಿ ಸಮರ್ಥಿಸಿದ್ದರು ಕೂಡಾ. ಅವರಲ್ಲಿ ಹಲವರು ರಜಾ ದಿನಗಳಲ್ಲಿ ಕುಪ್ಪಳಿಯಲ್ಲಿ ಕಳೆಯುವ ಹವ್ಯಾಸವನ್ನು ಇಟ್ಟುಕೊಂಡಿದ್ದರು. ಪ್ರಾರಂಭದಲ್ಲಿ ಕೆಲವರು ಶೂದ್ರರ ಅಡಿಗೆಕೋಣೆಯಲ್ಲಿ ಊಟಮಾಡದೇ ಅಟ್ಟದಲ್ಲಿ ಅಡುಗೆಯನ್ನು ಕೂಡಾ ಮಾಡಿಕೊಂಡಿದ್ದರು. ಆದರೆ ಬಹುಬೇಗನೆ ಆ ಪ್ರತ್ಯೇಕತೆಯನ್ನು ಬಿಟ್ಟು ಸಹಭೋಜನವನ್ನು ಮಾಡತೊಡಗಿದರು. ಆದರೆ ಕುವೆಂಪು ಅವರು ಇದನ್ನೆಲ್ಲ ಯಾವುದೇ ಕಹಿ ಭಾವನೆಯಿಂದ ಬರೆಯುವುದಿಲ್ಲ. ಆದರಾಭಿಮಾನದಿಂದಲೇ ಬರೆಯುತ್ತಾರೆ. ತಮ್ಮ ಬ್ರಾಹ್ಮಣ ಗೆಳೆಯರ ಪ್ರೀತಿ ಹಾಗೂ ಸಹಾಯವನ್ನು ಗುರುತಿಸಿ ವಿಧೇಯ ಶಿಷ್ಯನಂತೇ ಅವರಿಗೆ ಗೌರವವನ್ನು ತೋರುತ್ತಾರೆ. ಸ್ನೇಹಿತನಂತೇ ಪ್ರೀತಿಯನ್ನು ತೋರುತ್ತಾರೆ. ಈ ಸಂಬಂಧಗಳಲ್ಲಿ ಜಾತಿಭೇದವೆಂಬುದೊಂದು ಸಂಗತಿಯೇ ಕಾಣಸಿಗುವುದಿಲ್ಲ. ಹಾಗಾಗಿ ಇಲ್ಲೆಲ್ಲೂ ಅಭಿಜಾತ ನಿರೂಪಣೆಯ ಜಾತಿ ವ್ಯವಸ್ಥೆಯ ಸುಳಿವೇ ಕಾಣುವುದಿಲ್ಲ. ಕುವೆಂಪು ಅವರೇ ಭಾರತೀಯ ಸಮಾಜದ ವಾಸ್ತವವೆಂಬಂತೆ ತಿಳಿಸುವ ಈ ನಿರೂಪಣೆಯು ಅವರದೇ ಅನುಭವಕ್ಕೂ ಬಂದಂತಿಲ್ಲ.

೩. ಕುವೆಂಪು ಅವರು ಬೇರೆ ಸಂದರ್ಭದಲ್ಲಿ ಕೆಲವೆಡೆ ಕೆಲವು ಘಟನೆಗಳನ್ನು ಅಭಿಜಾತ ನಿರೂಪಣೆಯ ನಿದರ್ಶನಗಳಂತೆ ಗುರುತಿಸುತ್ತಾರೆ: ಮುಖ್ಯವಾಗಿ ಅವರು ತೀರ್ಥಹಳ್ಳಿಯ ಶಾಲೆಗೆ ಸೇರಿದ ದಿನಗಳವು. ಅಲ್ಲಿ ಬ್ರಾಹ್ಮಣರು ಶೂದ್ರರಿಗೆ ಸಂಸ್ಕೃತ ಹೇಳಿಕೊಡಲು ನಿರಾಕರಿಸುವುದು, ಅವರ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸುವುದು, ಬೇರೆ ಕೂಡ್ರಿಸುವುದು, ಬ್ರಾಹ್ಮಣ ವಿದ್ಯಾರ್ಥಿಗಳಿಗಿಂತ ಹೆಚ್ಚು ಮಾರ್ಕುಗಳನ್ನು ನೀಡದಿರುವುದು, ಇತ್ಯಾದಿ ಘಟನೆಗಳು ನಡೆಯುತ್ತವೆ. ಬ್ರಾಹ್ಮಣ ಶಿಕ್ಷಕರು ಅವರನ್ನು ಶೂದ್ರ ಮಕ್ಕಳು ಎಂದೋ (ಪುಟ. ೪೩) ಶೂದ್ರಮುಂಡೇದು ಎಂದೋ (ಪುಟ ೮೦೬) ತುಚ್ಛವಾಗಿ ಕರೆಯುತ್ತಿದ್ದರು. ಅವರು ಶಾಲೆಯಲ್ಲಿ ಪ್ರತ್ಯೇಕವಾಗಿ ನೆಲದ ಮೇಲೆ ಕೂತುಕೊಳ್ಳಬೇಕಾಗಿದ್ದಿತು, ಬ್ರಾಹ್ಮಣ ಮಕ್ಕಳು ಬೆಂಚಿನ ಮೇಲೆ ಕೂಡ್ರುತ್ತಿದ್ದರು (ಪುಟ.೯೪). ಒಬ್ಬ ಬ್ರಾಹ್ಮಣ ಶಿಕ್ಷಕರು ಕುವೆಂಪು ಅವರು ಸಂಸ್ಕೃತ ತೆಗೆದುಕೊಳ್ಳುತ್ತೇನೆಂದಾಗ ಇಷ್ಟಪಡಲಿಲ್ಲ ಹಾಗೂ ಅವರ ಬ್ರಾಹ್ಮಣ ಗೆಳೆಯರು ಅವರನ್ನು ಅಪಹಾಸ್ಯ ಮಾಡುತ್ತಾರೆ (ಪುಟ. ೬೯). ಶಿಕ್ಷಕರು ಸಾಧಾರಣವಾಗಿ ಬ್ರಾಹ್ಮಣರಿದ್ದುದರಿಂದ ಪ್ರವೇಶ ಪರೀಕ್ಷೆಯಲ್ಲಿ ಹೆಚ್ಚು ಮಾರ್ಕು ಸಿಗದಂತೇ ಮಾಡುತ್ತಿದ್ದರು(ಪುಟ.೯೩).

ನಂತರ ಮೈಸೂರಿನ ಜೀವನದಲ್ಲೂ ಬ್ರಾಹ್ಮಣರು ಕುವೆಂಪು ಅವರ ಕೃತಿಗಳ ಕುರಿತು ಹೇಗೆ ಟೀಕೆಗಳನ್ನು ಮಾಡುತ್ತಿದ್ದರೆಂಬುದನ್ನೂ ಕುವೆಂಪು ನೆನಪಿಸಿಕೊಳ್ಳುತ್ತಾರೆ. (ಪುಟ.

೨೦೦, ೮೪೫, ೯೮೪). ಕುವೆಂಪು ಅವರು ತಾವು ಶೂದ್ರಜಾತಿಯಿಂದ ಬಂದುದರಿಂದಲೇ ಬ್ರಾಹ್ಮಣರ ಪ್ರಾಬಲ್ಯವಿರುವ ಸಾಹಿತ್ಯ ಕ್ಷೇತ್ರದಲ್ಲಿ ತಮಗೆ ಮನ್ನಣೆ ಸಿಗುವ ಸಾಧ್ಯತೆಯಿಲ್ಲ ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸುತ್ತಾರೆ. ಅದಕ್ಕೆ ಆಧಾರವಾಗಿ ಅವರು ಕೆಲವರು ತಾವು ಬ್ರಾಹ್ಮಣರೆಂಬುದಾಗಿ ಭಾವಿಸಿ ತಮ್ಮ ಕೃತಿಗಳನ್ನು ಹೊಗಳಿದ ಘಟನೆಯನ್ನೂ ಉಲ್ಲೇಖಿಸುತ್ತಾರೆ (೯೧೨).

ಕುವೆಂಪು ಅವರು ಮುಕ್ತವಾಗಿ ತಮ್ಮ ನೆನಪನ್ನು ದಾಖಲಿಸುತ್ತ ಸಾಗುವುದರಿಂದ ಈ ಮೇಲಿನ ಘಟನೆಗಳು ತಿಳಿಸುವಂತೆ ಕುವೆಂಪು ಅವರು ಶೂದ್ರರೆನ್ನುವ ಕಾರಣದಿಂದ ಈ ಮೇಲೆ ಉಲ್ಲೇಖಿಸಿದ ಬ್ರಾಹ್ಮಣ ಜಾತಿಯ ಜನರು ಇವನ್ನೆಲ್ಲಾ ಮಾಡಿದ್ದಂತೂ ಸ್ಪಷ್ಟ. ಆದರೆ ನಮ್ಮ ಸಮಸ್ಯೆಯಿರುವುದು ಜಾತಿ ವ್ಯವಸ್ಥೆಯ ಅಭಿಜಾತ ನಿರೂಪಣೆಗೆ ಇದು ದೃಷ್ಟಾಂತವಾಗಿದ್ದೇ ಹೌದಾದರೆ ಇದು ಈ ವ್ಯವಸ್ಥೆಗೆ ಒಳಪಟ್ಟ ಜನರಲ್ಲಿ ಕೆಲವೆಡೆ ಏಕೆ ದೃಷ್ಟಾಂತವಾಗುತ್ತದೆ ಹಾಗೂ ಕೆಲವೆಡೆ ಏಕೆ ಆಗುವುದಿಲ್ಲ ಎಂಬುದು. ಕುವೆಂಪು ಅವರ ಮತ್ತು ವಿದ್ಯಾವಂತ ಸಂಪ್ರದಾಯಸ್ಥ ಬ್ರಾಹ್ಮಣರ ಸಂಬಂಧದ ಮತ್ತೊಂದು ಮುಖವನ್ನೂ ನೋಡಿದ್ದೇವೆ. ಅದು ದೃಷ್ಟಾಂತವಾಗುತ್ತಿದೆ ಎಂದು ಕಾಣುತ್ತಿರುವ ಅವರ ಶಾಲಾ ದಿನಗಳಲ್ಲೂ ಅಭಿಜಾತ ನಿರೂಪಣೆಯ ಮಾದರಿಯು ಪರಿಪೂರ್ಣವಾಗಿ ಕಾಣಿಸುವುದಿಲ್ಲ. ಅಂದರೆ ಅಭಿಜಾತ ನಿರೂಪಣೆಯು ನೀಡುವ ಬ್ರಾಹ್ಮಣ-ಶೂದ್ರರ ಸ್ಟೀರಿಯೋಟೈಪಿನ ಮಾದರಿಯು ನಮಗೆ ಇಲ್ಲಿ ಸಿಗುವುದಿಲ್ಲ. ಉದಾಹರಣೆಗೆ: ಒಬ್ಬ ಬ್ರಾಹ್ಮಣ ಶಿಕ್ಷಕರು ವಿದ್ಯಾರ್ಥಿಗಳೆಲ್ಲಾ ನಾಮವನ್ನು ಹಾಕಿಕೊಂಡು ಬರಬೇಕೆಂದು ಕಡ್ಡಾಯ ಮಾಡುತ್ತಾರೆ. ಕುವೆಂಪು ಅವರು ನಾಮವನ್ನು ಹಾಕದ ಯಾವುದಾದರೂ ಬ್ರಾಹ್ಮಣ ವಿದ್ಯಾರ್ಥಿಯ ಹಣೆಗೆ ತಮ್ಮ ಹಣೆಯನ್ನು ಒತ್ತಿಕೊಂಡು ಹೋಗುತ್ತಿದ್ದರು. ಒಮ್ಮೆ ಒಬ್ಬ ಬ್ರಾಹ್ಮಣ ವಿದ್ಯಾರ್ಥಿಯನ್ನು ಹಿಡಿದುಕೊಂಡು ಹಣೆಗೆ ಒತ್ತಿಕೊಳ್ಳಲು ಹೋದಾಗ ಅವನು ಕುವೆಂಪು ಅವರನ್ನು ಶೂದ್ರ, ಮುಟ್ಟಾಳು ಎಂದು ಬೈದು ಹಣೆಯನ್ನು ಕೊಡಲು ನಿರಾಕರಿಸುತ್ತಾನೆ. ಕುವೆಂಪು ಅವರು ಅವನು ಹಣೆಯನ್ನು ಕೊಡದಿದ್ದರೆ ಅವನ ಜನಿವಾರವನ್ನು ಹರಿದುಹಾಕಿ ಅವನ ಮುಖದ ಮೇಲೆ ಉಗುಳಿ ಜಾತಿ ಕೆಡಿಸುತ್ತೇನೆಂಬುದಾಗಿ ಹೆದರಿಸುತ್ತಾರೆ. ಆಗ ಹೆದರಿಕೊಂಡ ಆ ಬ್ರಾಹ್ಮಣ ಹುಡುಗನು ಹಣೆಯನ್ನು ಕೊಡಲು ಮುಂದಾದನು. ಏಕೆಂದರೆ ಬ್ರಾಹ್ಮಣ ಮಕ್ಕಳು ಅಂಜುಬುರುಕರು ಎಂಬುದಾಗಿ ಲೇಖಕರು ತಿಳಿಸುತ್ತಾರೆ (ಪುಟ. ೬೦). ಆ ಶಿಕ್ಷಕರಿಗೆ ಇದುಗೊತ್ತಾಗಿ ಕುವೆಂಪು ಅವರಿಗೆ ಶಿಕ್ಷೆಯನ್ನು ನೀಡಿದರು. ಆ ಶಿಕ್ಷಕರು ರಿಜಿಸ್ಟರಿನಲ್ಲಿ ತಮ್ಮ ಹೆಸರಿನ ಮೇಲೆ ಕಪ್ಪು ಮಾರ್ಕು ಹಾಕಬಹುದೆಂದು ಕುವೆಂಪು ಹೆದರಿದ್ದರು. ಆದರೆ ಅವರು ಹಾಗೇನೂ ಮಾಡಲಿಲ್ಲ. ಈ ಬ್ರಾಹ್ಮಣ ಶಿಕ್ಷಕರು ಕುವೆಂಪು ಮತ್ತು ಇತರ ಶೂದ್ರ ಹುಡುಗರನ್ನು ಪ್ರಶಂಸಿಸಿದ ಉದಾಹರಣೆಗಳೂ ಇದ್ದವು ಹಾಗೂ ಅವರ ಪಾಲಕರಾದ ಶೂದ್ರ ಜಮೀನ್ದಾರರನ್ನು ಗೌರವದಿಂದ ಕಾಣುತ್ತಿದ್ದ ಉಲ್ಲೇಖಗಳೂ ಇವೆ.

೪. ಇನ್ನೂ ಕೆಲವು ನೆನಪುಗಳಲ್ಲಿ ಜಾತಿವ್ಯವಸ್ಥೆಯ ಅಭಿಜಾತ ನಿರೂಪಣೆಗಳ ಹಿನ್ನೆಲೆಯಿಂದ ಲೇಖಕರು ಘಟನೆಗಳನ್ನು ನೋಡಿದರೂ ಘಟಿಸುವ ಘಟನೆಯು ಬೇರೇನೋ ವಿಷಯವನ್ನು ತಿಳಿಸುತ್ತಿರುತ್ತದೆ. ಅಂದರೆ ಅಭಿಜಾತ ನಿರೂಪಣೆಯು ಲೇಖಕರಿಗೆ ತಮ್ಮ ಅನುಭವಕ್ಕೆ ಬಂದ ವಸ್ತುಸ್ಥಿತಿಯನ್ನು ಅರ್ಥೈಸಲು ಅಡ್ಡಿಮಾಡುತ್ತದೆ. ಇದರ ಒಂದು

ಪರಿಣಾಮವೆಂದರೆ ಲೇಖಕರ ನಿರೂಪಣೆಯು ವಸ್ತುಸ್ಥಿತಿಗೆ ಪರಕೀಯವಾಗಿಬಿಡುತ್ತದೆ. ಪುಟ. ೧೦೪-೧೦೫ ರಲ್ಲಿ ಕುವೆಂಪು ಅವರು ಸೋಮವಾರಸಂತೆ ಶಂಕರಭಟ್ಟರ ಮನೆಗೆ ಹೋದ ನೆನಪು ದಾಖಲಾಗಿದೆ. ಕುವೆಂಪು ಅವರು ತಮ್ಮ ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಮುಗಿಸಿಕೊಂಡು ಇತರ ಅನೇಕ ಬಂಧುಗಳೊಂದಿಗೆ ಶಿವಮೊಗ್ಗದಿಂದ ಎತ್ತಿನ ಗಾಡಿಯಲ್ಲಿ ಕುಪ್ಪಳಿಗೆ ವಾಪಸು ಹೋಗುತ್ತಿರುತ್ತಾರೆ. ಮಂಡಗದ್ದೆ ದಾಟಿದಮೇಲೆ ಕುಪ್ಪಳಿಗೆ ಒಂದು ಕಾಲುಹಾದಿಯಿತ್ತು. ಅದರಲ್ಲಿ ನಡೆದು ಹೋದರೆ ಸಂಜೆಯೊಳಗೆ ಕುಪ್ಪಳಿ ತಲುಪುವ ಸಾಧ್ಯತೆ ಇತ್ತು. ಆದರೆ ಮಧ್ಯಾಹ್ನದ ಊಟದ ಸಮಸ್ಯೆ. ಅದಕ್ಕೆ ಪರಿಹಾರವಾಗಿ ದಾರಿಯಲ್ಲಿ ಸಿಗುವ ಸೋಮವಾರಸಂತೆ ಶಂಕರಭಟ್ಟರ ಮನೆಯಲ್ಲಿ ಮಾಡಿದರಾಯಿತು ಎಂದು ಹಿರಿಯರು ಸೂಚಿಸಿದರು. ಶಂಕರಭಟ್ಟರಿಗೆ ದೇವಂಗಿ ಹಾಗೂ ಕುಪ್ಪಳಿಯ ಗೌಡರ ಜೊತೆಗೆ ಒಳ್ಳೆ ಸಂಬಂಧವಿತ್ತು. ಮಧ್ಯಾಹ್ನದ ಹೊತ್ತಿಗೆ ಈ ಗುಂಪು ಶಂಕರಭಟ್ಟರ ಮನೆಗೆ ಹೋಯಿತು. ಅಲ್ಲಿ ಈ ಅನಿರೀಕ್ಷಿತ ಅಭ್ಯಾಗತರನ್ನು ಆದರದಿಂದ ಸ್ವಾಗತಿಸಿ ಚೌಕಿಯಲ್ಲಿ ಕೆಳಜಗುಲಿಯಲ್ಲಿ ಕುಳ್ಳಿರಿಸಿ ಕಾಫಿ ನೀಡಿದರು. ಊಟಕ್ಕೆ ಬಹಳ ಹೊತ್ತು ಕಾದ ನಂತರ ಹೋಳಿಗೆ, ಪಾಯಸ, ಚಿತ್ರಾನ್ನ ಗಳಿಂದ ಕೂಡಿದ ಔತಣವನ್ನೇ ಅವರಿಗೆ ನೀಡಿದರು. ಶಂಕರಭಟ್ಟರು ಸ್ವತಃ ತಾವೇ ಬಂದು ಪ್ರತಿಯೊಬ್ಬರನ್ನೂ ಮಾತನಾಡಿಸಿ ಎಲ್ಲಾ ಕೇಳಿ ಹಾಕಿಸಿಕೊಳ್ಳುವಂತೆ ಉಪಚಾರ ಮಾಡಿದರು. ಪ್ರತಿಯೊಬ್ಬರ ಪರಿಚಯವನ್ನೂ ಮಾಡಿಕೊಂಡರು. ತಮ್ಮ ಜೊತೆಗೆ ಇದ್ದ ಒಬ್ಬ ಕಿರಿಸ್ತನನ್ನೂ ತಮ್ಮ ಬಂಧುವೆಂದು ಸುಳ್ಳು ಹೇಳಿ ಪರಿಚಯಿಸಿದ ಫಜೀತಿಯನ್ನೂ ಕುವೆಂಪು ದಾಖಲಿಸುತ್ತಾರೆ.

ಈ ಘಟನೆಯನ್ನು ಕಥಿಸುವಾಗ ಕುವೆಂಪು ಜಾತಿ ವ್ಯವಸ್ಥೆಯ ನಿರೂಪಣೆಯ ತರ್ಕವನ್ನು ಆಧರಿಸಿ ಅದನ್ನು ಗ್ರಹಿಕೆಗೆ ತಂದುಕೊಳ್ಳುತ್ತಾ ಹೋಗುತ್ತಾರೆ: ಶಂಕರಭಟ್ಟರ ಆದರಾತಿಥ್ಯಕ್ಕೆ ಕಾರಣವೇನು? ಬಹುಶಃ ರಾಮಣ್ಣಗೌಡರಂಥವರ ಬಂಧುಗಳು ತಮ್ಮ ಅತಿಥಿಗಳೆಂಬ ಕಾರಣಕ್ಕೆ ಅವರಿಗೆ ಒಂದು ದಾಕ್ಷಿಣ್ಯದ ಹಿಶ್ವಾಸವಿರಬಹುದು. ನಂತರ ಲೇಖಕರಿಗೆ ಜಾತಿ ತಾರತಮ್ಯವು ಕಾಣಿಸುತ್ತದೆ. ತಮ್ಮನ್ನು ಮೇಲು ಜಗುಲಿಗೆ ಕರೆಯದೇ ಕೆಳಜಗುಲಿಯಲ್ಲಿ ಕೂರಿಸಿದ್ದಾರೆ. ಮೇಲು ಜಗುಲಿ ಬ್ರಾಹ್ಮಣರಿಗೆ ಮಾತ್ರ ಮೀಸಲಾಗಿರುತ್ತದೆ. ಹೊಲೆಯ ಮಾದಿಗರಂಥ ಇನ್ನೂ ಕೆಳಜಾತಿಗಳ ಅಸ್ಪೃಶ್ಯರಿಗೆ ಈ ಒಳಜಗುಲಿಗೂ ಪ್ರವೇಶವಿಲ್ಲ. ನಂತರ ಆ ಮನೆಯ ಯಾವುದೇ ಬ್ರಾಹ್ಮಣ ಮಕ್ಕಳು ಜಗುಲಿಗೆ ಬರದಿರುವುದು ಕಾಣಿಸುತ್ತದೆ. ಅಲ್ಲಿ ಮಕ್ಕಳೇ ಇಲ್ಲವೊ ಅಥವಾ ಅವರು ಶೂದ್ರರ ಜೊತೆ ಸೇರಲು ಹಿಂಜರಿದು ಕಾಣಿಸಿಕೊಳ್ಳುತ್ತಿಲ್ಲವೊ? ನಂತರ ಊಟಕ್ಕೆ ಬಹಳ ತಡವಾದುದರ ಕುರಿತು ಪರ್ಯಾಲೋಚನೆ ನಡೆಯುತ್ತದೆ. ಅವರ ಪ್ರಕಾರ ಅದು ಸಹಜವಾಗಿಯೇ ಇದೆ, ಏಕೆಂದರೆ ಬ್ರಾಹ್ಮಣರು ತಾವು ಉಂಡ ಮೇಲೆಯೇ ಶೂದ್ರರಿಗೆ ಊಟ ಕೊಡುವುದು. ಇಲ್ಲದಿದ್ದರೆ ಶೂದ್ರರ ಉಚ್ಚಿಷ್ಟವನ್ನು ಉಂಡ ಹಾಗಾಗುತ್ತದೆ. ಕೊನೆಗೂ ಊಟ ಬರುತ್ತದೆ ಹಾಗೂ ವೈವಿಧ್ಯಪೂರ್ಣ ತಿನಸುಗಳನ್ನು ನೋಡಿ ಲೇಖಕರಿಗೆ ಆಶ್ಚರ್ಯವಾಗುತ್ತದೆ. ಈ ಮನೆಯಲ್ಲಿ ಇಂದು ಏನಾದರೂ ವಿಶೇಷವಿದೆಯೋ ಇಲ್ಲ ಶ್ರೀಮಂತ ಬ್ರಾಹ್ಮಣರು ಪ್ರತಿದಿನ ಇಂಥದ್ದೆ ಊಟ ಮಾಡುತ್ತಾರೊ ಎಂದುಕೊಳ್ಳುತ್ತಾರೆ. ತಮ್ಮ ಗುಂಪಿನ ಉಳಿದೆಲ್ಲರೂ ಇದೆಲ್ಲವೂ ತಮಗಾಗೇ ತಯಾರಿಸಿದ್ದು ಎಂಬ ಭ್ರಮೆಯಲ್ಲಿ ಇರುವುದನ್ನೂ ಅವರು ಗಮನಿಸುತ್ತಾರೆ.

ಉಳಿದವರಿಗೆ ಈ ಘಟನೆ ಹೇಗೆನ್ನಿಸಿತು ಎಂಬುದರ ಕುರಿತು ತಿಳಿದುಬರುವುದಿಲ್ಲ. ಇದೆಲ್ಲದರ ಜೊತೆಗೇ ಲೇಖಕರು ಶಂಕರಭಟ್ಟರು ಪಿತ್ರ ಸ್ವಭಾವದ ಸಾತ್ವಿಕರು ಎಂಬ ಪ್ರಶಂಸೆಯನ್ನೂ ಮಾಡುತ್ತಾರೆ ಹಾಗೂ ನೋಡಿದ್ದನ್ನೆಲ್ಲ ದಾಖಲಿಸುತ್ತಾರೆ. ಅವರ ವರ್ಣನೆಯಿಂದ ನಮಗೆ ಈ ಪ್ರದೇಶದ ಶ್ರೀಮಂತ ಒಕ್ಕಲಿಗರು ಹಾಗೂ ಬ್ರಾಹ್ಮಣರ ಒಡನಾಟದ ಸ್ವರೂಪದ ಕುರಿತು ಒಂದು ಕಲ್ಪನೆ ಸಿಗುತ್ತದೆ. ಸುಮಾರು ಹತ್ತುಹದಿನೈದು ಒಕ್ಕಲಿಗರು ಅನಿರೀಕ್ಷಿತವಾಗಿ ಮಧ್ಯಾಹ್ನ ಊಟದ ಹೊತ್ತಿಗೆ ಬಂದುದು ಆ ಬ್ರಾಹ್ಮಣರ ಮನೆಯಲ್ಲಿ ಯಾವುದೇ ಬೇಸರವನ್ನು ಹುಟ್ಟಿಸಿದಂತೆ ಕಾಣುವುದಿಲ್ಲ. ಅದಕ್ಕೆ ಬದಲಾಗಿ ಸಂತೋಷವೇ ಆದಂತಿದೆ. ಅವರ ಮನೆಯ ಹೆಂಗಸರೆಲ್ಲ ಅಡಿಗೆ ಮಾಡಲು ವಿಶೇಷ ಶ್ರಮ ವಹಿಸಿದ್ದು ಊಟದ ವೈವಿಧ್ಯತೆಯಲ್ಲೇ ವ್ಯಕ್ತವಾಗಿದೆ. ಕುಪ್ಪಳಿ ಮನೆಯ ಘನತೆ ಹಾಗೂ ಅವರ ಜೊತೆಗೆ ಶಂಕರಭಟ್ಟರ ಸಂಬಂಧವು(ದಾಕ್ಷಿಣ್ಯವೂ ಇರಬಹುದು) ಇಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿರುವ ಸಾಧ್ಯತೆಯೂ ಇರಬಹುದು. ಹಾಗೂ ಈ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದ ಜಾತಿ ಕಟ್ಟಳೆಗಳ ಚೌಕಟ್ಟಿನೊಳಗೇ ಈ ವ್ಯವಹಾರ ನಡೆದದ್ದೂ ಸ್ಪಷ್ಟ. ಆದರೆ ಅಭಿಜಾತ ನಿರೂಪಣೆಯು ಈ ವ್ಯವಹಾರದಲ್ಲಿನ ಕೆಲವು ಅಂಶಗಳು ಪ್ರಧಾನವಾಗುವಂತೆ ಮಾಡಿ ಆ ಮೂಲಕ ಉಳಿದ ವ್ಯವಹಾರಗಳನ್ನು ಗೌಣ ಮಾಡುವುದರಿಂದ ಅದರಲ್ಲಿ ತೊಡಗಿದ ಮನುಷ್ಯ ಭಾವನೆಗಳ ಕುರಿತು ಯಥಾರ್ಥವಾದ ಗ್ರಹಿಕೆಯು ಸಾಧ್ಯವಾಗದಂತೇ ಮಾಡುತ್ತದೆ.

ಇಂಥವೇ ಇನ್ನೂ ಕೆಲವು ಉದಾಹರಣೆಗಳಿವೆ. ಪುಟ ೯೪ ರಲ್ಲಿ ಅಸ್ಪೃಶ್ಯರನ್ನು ಶಾಲೆಗೆ ಸೇರಿಸಿದಾಗ ಒಕ್ಕಲಿಗರು ಅವರು ತಮ್ಮ ಮಕ್ಕಳ ಜೊತೆಗೆ ಕುಳಿತುಕೊಳ್ಳುವುದನ್ನು ಒಪ್ಪಲಿಲ್ಲ. ಅಂದರೆ ಒಂದೆಡೆ ಬ್ರಾಹ್ಮಣ ಮಕ್ಕಳು ಬೆಂಚಿನ ಮೇಲೆ ಕೂಡುತ್ತಾರೆ, ಅವರಿಗೇನೂ ಇದರಿಂದ ಅಷ್ಟು ತೊಂದರೆಯಿಲ್ಲ. ಆದರೆ ಅಸ್ಪೃಶ್ಯ ಮಕ್ಕಳು ಒಕ್ಕಲಿಗ ಮಕ್ಕಳ ಜೊತೆಗೆ ನೆಲದ ಮೇಲೆ ಕೂಡಬೇಕಾಗುತ್ತದೆ. ಹಾಗಾಗಿ ಒಕ್ಕಲಿಗರು ಅದನ್ನು ಪ್ರತಿಭಟಿಸುತ್ತಾರೆ. ಬ್ರಾಹ್ಮಣರೂ ಈ ಪ್ರತಿಭಟನೆಗೆ ಒಳಗಿಂದೊಳಗೇ ಬೆಂಬಲ ನೀಡುತ್ತಾರೆ ಎಂಬುದಾಗಿ ಲೇಖಕರ ಅಭಿಪ್ರಾಯ. ಆದರೆ ಒಕ್ಕಲಿಗರಿಗೂ ಅಸ್ಪೃಶ್ಯತೆಯ ಕಟ್ಟುಪಾಡು ಬ್ರಾಹ್ಮಣರಷ್ಟೇ ಇತ್ತು ಎಂಬುದು ಸ್ಪಷ್ಟ. ಹೀಗಿರುವಾಗ ಪುಟ. ೧೦೨೯ ರಲ್ಲಿ ಕುವೆಂಪು ಅವರ ಪರ್ಯಾಲೋಚನೆ ಹೀಗೆ ಇದೆ. ದೇಶಿಕಾನಂದ ಸ್ವಾಮಿ ಎಂಬವರು ಅಸ್ಪೃಶ್ಯ ಮಕ್ಕಳಿಗೆ ತಮ್ಮ ಆಶ್ರಮದ ಹೊರಗೆ ಊಟ ನೀಡುವಂತೆ ಆದೇಶಿಸುತ್ತಾರೆ. ದೇಶಿಕಾನಂದರು ಪೂರ್ವಾಶ್ರಮದಲ್ಲಿ ಕೊಡವರಾಗಿದ್ದರು. ಕುವೆಂಪು ಅವರು ಆಶ್ಚರ್ಯಪಡುವುದೆಂದರೆ ದೇಶಿಕಾನಂದರು ಹುಟ್ಟಿನಿಂದ ಶೂದ್ರರಾದರೂ ಅದು ಹೇಗೆ ಅಂಥ ತಾರತಮ್ಯವನ್ನು ಮಾಡಲು ಸಾಧ್ಯ? ಹಾಗಾಗಿ ಅದಕ್ಕೆ ಕಾರಣ ಬೇರೆಯೇನೋ ಇರಬೇಕು ಎಂಬುದಾಗಿ ಅವರು ತೀರ್ಮಾನಿಸುತ್ತಾರೆ. ಅಂದರೆ ಅಭಿಜಾತ ನಿರೂಪಣೆಯು ಜಾತಿ ತಾರತಮ್ಯವನ್ನು ಬ್ರಾಹ್ಮಣನ ಮೂದರಿಗೆ ಜೋಡಿಸುವುದರಿಂದ ಶೂದ್ರನ ಮಾದರಿಗೆ ಅದು ಅಸಂಗತವಾಗುತ್ತದೆ. ಅಂದರೆ ಆ ನಿರೂಪಣೆಯು ಶೂದ್ರರ ಅಸ್ಪೃಶ್ಯತೆಯ ಆಚರಣೆಯ ಯಥಾರ್ಥತೆಯನ್ನು ಒಳಗೊಳ್ಳುವಲ್ಲಿ ಸೋಲುತ್ತದೆ. ಅಂದರೆ ನೆನಪಿನ ದೋಣಿಯಲ್ಲಿನ ಜೀವನ ವೃತ್ತಾಂತದ ಸಂದರ್ಭದಲ್ಲಿ ಜಾತಿವ್ಯವಸ್ಥೆಯ ಕುರಿತ ಅಭಿಜಾತ ನಿರೂಪಣೆಯು ತನ್ನ ಮಿತಿಗಳನ್ನು ಈ ಮೇಲೆ ವಿವರಿಸಿದ ನಾಲ್ಕು ರೀತಿಗಳಲ್ಲಿ ನಿದರ್ಶಿಸುತ್ತದೆ. ತೀರ್ಥಹಳ್ಳಿ ಪ್ರದೇಶದ ಒಬ್ಬ ಒಕ್ಕಲಿಗರಾಗಿ ಲೇಖಕರಿಗೆ ತಮ್ಮ ಸಂಪ್ರದಾಯಸ್ಥ ಸಮಾಜದ ಒಂದು ಭಾಗವಾಗಿರುವ ಬ್ರಾಹ್ಮಣರ ಜೊತೆಗೆ ಕೆಲವು ವಿಶಿಷ್ಟವಾದ ಕಹಿ-ಸಿಹಿ ಅನುಭವಗಳಾಗುತ್ತವೆ.

ಹಳ್ಳಿಯ ಮನೆಯಲ್ಲಿ, ತೀರ್ಥಹಳ್ಳಿಯ ಶಾಲೆಯಲ್ಲಿ, ಮೈಸೂರಿನಲ್ಲಿ ಹಾಗೂ ಕನ್ನಡದ ಮೇರು ಸಾಹಿತಿಯಾಗಿ ಅವರು ವಿಭಿನ್ನ ರೀತಿಯ (ಜಾತಿಯ) ಬ್ರಾಹ್ಮಣರನ್ನು ಮುಖಾಮುಖಿ ಮಾಡುತ್ತಾರೆ. ಭಾರತೀಯ ಸಮಾಜದ ಲಕ್ಷಣವನ್ನು ಕಟ್ಟಿಕೊಡುವ ಜಾತಿ ವ್ಯವಸ್ಥೆಯ ಕುರಿತ ಅಭಿಜಾತ ನಿರೂಪಣೆಯು ಇದಕ್ಕೆಲ್ಲ ಚೌಕಟ್ಟಾಗಿ ಬರುತ್ತದೆ. ಆ ಚೌಕಟ್ಟಿನಲ್ಲಿ ಒಕ್ಕಲಿಗರು ಶೂದ್ರ ಮಾದರಿಯಲ್ಲಿ ಹಾಗೂ ಈ ಎಲ್ಲ ಥರಾವರಿ ಬ್ರಾಹ್ಮಣರು ಬ್ರಾಹ್ಮಣ ಪುರೋಹಿತನ ಮಾದರಿಯಲ್ಲಿ ಮಾತ್ರವೇ ಸ್ಥಾನ ಪಡೆದುಕೊಳ್ಳಬಹುದು. ಈ ಚೌಕಟ್ಟು ಈ ಬ್ರಾಹ್ಮಣ-ಶೂದ್ರ ಮಾದರಿಗಳ ನಡುವೆ ಒಂದು ನಿರ್ದಿಷ್ಟ ರೀತಿಯ ಸಂಬಂಧವನ್ನು ಕಲ್ಪಿಸುತ್ತದೆ. ಈ ನಿರೂಪಣೆಯ ಪ್ರಕಾರ ಬ್ರಾಹ್ಮಣರು ಪುರೋಹಿತರಾಗಿ ಜಾತಿ ತಾರತಮ್ಯವನ್ನು ರಚಿಸಿದವರಾಗಿದ್ದು, ಶೂದ್ರರು ಅದರ ಬಲಿಪಶುಗಳಾಗಿದ್ದಾರೆ. ಈ ವ್ಯವಸ್ಥೆಯು ಬ್ರಾಹ್ಮಣರ ಅನುಕೂಲತೆಗಾಗಿ ಇರುವುದರಿಂದ ಅವರು ಶೂದ್ರರನ್ನು ಹತ್ತಿಕ್ಕಿ ಕೆಳಗೇ ಇಟ್ಟಿರುತ್ತಾರೆ.

ಕುವೆಂಪು ಅವರು ಬಳಸುವ ಜಾತಿ ವ್ಯವಸ್ಥೆಯ ಸಿದ್ಧಾಂತವು ವಾಸ್ತವವನ್ನು ಪ್ರತಿಫಲಿಸುವ ಚೌಕಟ್ಟಲ್ಲ, ನಮ್ಮ ಹೊರ ಪ್ರಪಂಚದ ಜೊತೆಗೆ ಏಕಮುಖೀ ಸಂಬಂಧವನ್ನು ಕಲ್ಪಿಸುವ ಚೌಕಟ್ಟು. ಹಾಗಾಗಿಯೇ ಈ ಚೌಕಟ್ಟು ಕುವೆಂಪು ಅವರ ನೆನಪಿನಂಗಳದಲ್ಲಿ ಬರುವ ಒಕ್ಕಲಿಗರ ಹಾಗೂ ಬ್ರಾಹ್ಮಣರ ಜೀವನದಲ್ಲಿ ಕೆಲವೆಡೆ ಕಾಣಿಸಿದಂತಾಗುತ್ತದೆ, ಕೆಲವೆಡೆ ಕಾಣಿಸುವುದೇ ಇಲ್ಲ. ಶೂದ್ರರನ್ನು ಕೆಳಜಗುಲಿಗೆ ಮಾತ್ರವೇ ಸೀಮಿತಗೊಳಿಸುವ, ಶಾಲೆಯಲ್ಲಿ ನೆಲದ ಮೇಲೇ ಕೂಡಿಸುವ ಹಾಗೂ ಇಂಥ ಕೆಲವು ತಾರತಮ್ಯದ (ಬೇಕಾದರೆ ಅಮಾನವೀಯ ಎಂದೂ ಕರೆಯಿರಿ) ಘಟನೆಗಳು ಈ ಚೌಕಟ್ಟನ್ನು ರಚಿಸಲು ಸಾಕು ಎಂದಾದರೆ, ಅದೇ ಜಗುಲಿ ಹಾಗು ಶಾಲೆ ಹಾಗೂ ಸಮಾಜದಲ್ಲಿ ನಡೆಯುವ ಇತರ ಮನುಷ್ಯ ವ್ಯಾಪಾರಗಳ ಸಮಾಜವು ಆ ಚೌಕಟ್ಟಿನಿಂದ ಹೊರಗೇ ಉಳಿದುಬಿಡುತ್ತದೆ. ಹಾಗಾಗಿ ಈ ಚೌಕಟ್ಟಿನ ಶೂದ್ರ ಮಾದರಿಯು ಲೇಖಕರಿಗೆ ತಮ್ಮ ಅನುಭವಗಳನ್ನು ಪರ್ಯಾಲೋಚಿಸಲು ಒಂದು ಮಿತಿಯಿಂದ ಆಚೆಗೆ ನಿರುಪಯುಕ್ತವಾಗುತ್ತದೆ ಹಾಗೂ ಅಪ್ರಸ್ತುತವಾಗುತ್ತದೆ, ಹಾಗೂ ಆ ಮಟ್ಟಿಗೆ ಅಂಥ ಚಿತ್ರಣವು ಅವಾಸ್ತವಿಕವಾಗುತ್ತದೆ.

ರಾಜಾರಾಮ ಹೆಗಡೆ
ಪ್ರೊಫೆಸರ್, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ
ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ - ೫೭೭ ೪೫೧
ಶಿವಮೊಗ್ಗ : ೯೪೪೮ ೬೮೨೯೯೭



ಆದಿಕವಿ ಪಂಪನ ಆದಿಯ ಕುರಿತ ನಿರೂಪಣೆಗಳು

ಡಾ. ಜಯಪ್ರಕಾಶ್ ಶೆಟ್ಟಿ ಹೆಚ್

ಪ್ರತಿಯೊಂದಕ್ಕೂ ಚರಿತ್ರೆಯನ್ನು ಕಟ್ಟಿಕೊಳ್ಳುವುದು, ಮೂಲವನ್ನು ಹುಡುಕುವುದು ಪ್ರಾಯಶಃ ಮಾನವ ಪ್ರವೃತ್ತಿಗಳಲ್ಲೊಂದು. ಕಾಲದ ಒಡಲಿನೊಂದಿಗೆ ತನ್ನ ವರ್ತಮಾನವನ್ನು ಬೆಸೆದುಕೊಂಡು ನೋಡಿಕೊಳ್ಳುವುದು ಅಂತಹ ಪ್ರವೃತ್ತಿಯ ಭಾಗವೇ ಆಗಿದೆ. ಸೃಜನಶೀಲ ಜಗತ್ತು ಕೂಡ ಈ ಪ್ರವೃತ್ತಿಯ ವ್ಯಾಪ್ತಿಯಿಂದ ಹೊರತಾದುದಲ್ಲ. ಅಂತೆಯೇ ಕನ್ನಡದ ಕಾವ್ಯ ಜಗತ್ತು ಚರಿತ್ರೆಯನ್ನು ಕಥೆಮಾಡಿ ಹೇಳಿ ಕಾವ್ಯದೊಳಗಡೆ ಚಾರಿತ್ರಿಕತೆಯನ್ನು ಬೆರೆಸುವಲ್ಲಿ ಆಸಕ್ತಿ ತೋರಿದೆ. ಆದರೆ ಅದು ಕವಿಗಳ ಸ್ವಕೀಯ ಚರಿತ್ರೆಯ ನಿರೂಪಣೆಗೆ ಅದೇ ಲಕ್ಷ್ಯವನ್ನು ಕೊಟ್ಟಂತೆ ಕಾಣದು. ಜೈನಕವಿಗಳು ಈ ಮಾತಿಗೊಂದಿಷ್ಟು ಅಪವಾದದಂತೆಯೇ ಇದ್ದಾರೆ. ಅವರುಗಳಲ್ಲಿ ಕೊಂಚ ಮಟ್ಟಿಗಾದರೂ ಈ ಪ್ರವೃತ್ತಿ ವ್ಯಕ್ತವಾದುದಿದೆ. ಇದು ಅವರ ಚರಿತ್ರೆಯ ಕುರಿತಾದ ಜಾಗೃತಮನಸ್ಥಿತಿಯ ಪರಿಣಾಮವೋ ಅಥವಾ ತದನಂತರದ ಸಂಪ್ರದಾಯವೋ ಎನ್ನುವುದನ್ನು ಖಚಿತವಾಗಿ ಹೇಳಲಾಗದು. ಆದರೂ ಅಲ್ಲಿ ಕವಿಚರಿತೆಗೆ ಬೇಕಾದ ಕೆಲವು ಮೂಲ ಸರಕುಗಳೂ ಖಂಡಿತವಾಗಿಯೂ ಲಭ್ಯವಾಗುತ್ತವೆ. ಕಾವ್ಯವೇ ಒಳಗೊಂಡಿರುವ ಚರಿತ್ರೆಯಿಂದಾಚೆಗೆ ಕರ್ತೃವಿನ ಚರಿತ್ರೆಯಿಂದ ಕಾವ್ಯಕ್ಕೆ ಪ್ರಯೋಜನ? ಕಾವ್ಯವನ್ನು ಅರ್ಥೈಸುವಲ್ಲಿ ಕವಿಯ ಚರಿತ್ರೆಯ ಅಗತ್ಯವಿದೆಯೇ ಎನ್ನುವುದು ಬೇರೆಯದೇ ಮಾತು. ಈ ಉತ್ತರವಿಲ್ಲದ ಪ್ರಶ್ನೆಗಳ ನಡುವೆಯೂ ಕವಿಯ ಕಾಲದೇಶಗಳ ಅರ್ಥೈಸುವಿಕೆಯ ಮೂಲಕ

ಕಾವ್ಯವು ಪಡೆದುಕೊಳ್ಳುವ ಅರ್ಥಸಾಧ್ಯತೆಗಳನ್ನು ಕಡೆಗಣಿಸುವಂತಿಲ್ಲ. ಇದು ಕವಿಚರಿತೆಯ ಹಿಂದಿರುವ ಮಹತ್ವ. ಆದರೆ ಚರಿತ್ರೆಯೆಂಬುದು ಮೂಲತಃ ನಿರೂಪಣೆ. ಅದೊಂದು ಕಥನರೂಪೀ ಕಟ್ಟುವಿಕೆ. ಅಲ್ಲಿ ಅರ್ಥದ ಕಟ್ಟುವಿಕೆ, ಪ್ರತ್ಯರ್ಥದ ನಿರ್ಮಾಣವೆಂಬ ರಾಜಕಾರಣ ಹಾಗೂ ಪ್ರತಿರಾಜಕಾರಣಗಳೆರಡರ ಸರಣಿಯೂ ಇದೆ. ಹಾಗಾಗಿ ಚರಿತ್ರೆಯೂ ರಾಜಕಾರಣದಿಂದ ಮುಕ್ತವಾದುದಲ್ಲ. ಈ ದಿಸೆಯಲ್ಲಿ ಪಂಪನ ಕಾವ್ಯದ ಕೊನೆಯಲ್ಲಿ ದೊರೆಯುವ ವಂಶವಿಚಾರಗಳ ಸ್ವರೂಪ ಮತ್ತು ಆ ವಂಶವಿಚಾರಗಳನ್ನು ಕನ್ನಡದ ಓದುಗಳು ಅರ್ಥೈಸಿಕೊಂಡ ಬಗೆಯಲ್ಲಿನ ಸಾಂಸ್ಕೃತಿಕ ರಾಜಕಾರಣವು ಕುತೂಹಲಕಾರಿಯಾದುದು.

ಪಂಪನ ಸ್ವಕೀಯ ವಿಚಾರಗಳು ಮತ್ತು ಕನ್ನಡದ ಓದುಗಳ ಮತಗ್ರಹಿಕೆಗಳು

ಕನ್ನಡಕಾವ್ಯಗಳಲ್ಲಿ ಕವಿಗಳ ಸ್ವವಿಚಾರಗಳ ನಿರೂಪಣೆ ವಿರಳ. ಈ ಕವಿಗಳದು ಕಾವ್ಯದ ಪಕ್ಕುಸ್ವಾಮ್ಯಕ್ಕಾಗಿ ದಾವೆ ಹೂಡದ ಮನೋಭಾವ. ಆದರೆ ಪಂಪನಲ್ಲಿ ಇದು ಸ್ವಲ್ಪ ಬೇರೆಯಾಗುತ್ತದೆ. ಆತ ತನ್ನ ಸ್ವವಿಚಾರದ ಕುರಿತು ಒಂದಿಷ್ಟು ಹೇಳಿಕೊಂಡಿದ್ದಾನೆ. ಆದಿಪುರಾಣದ ಆರಂಭದಲ್ಲಿ ತನ್ನ ರೂಪ, ಗುಣ, ಪ್ರವೃತ್ತಿ ಹಾಗೂ ಜನನಕಾಲಗಳ ಕುರಿತು ಪ್ರಸ್ತಾಪಿಸುವ ಕವಿ, ವಿಕ್ರಮಾರ್ಜುನ ವಿಜಯದ ಕೊನೆಯಲ್ಲಿ ತನ್ನ ವಾಂಶಿಕ ಹಿನ್ನೆಲೆಯ ಕುರಿತು ಪ್ರಸ್ತಾಪಿಸಿದ್ದಾನೆ. ಭಾರತಕಾವ್ಯದ ಕೊನೆಯಲ್ಲಿ ಕವಿಯ ವಂಶಮಾಹಿತಿ ಇರುವ ಈ ಭಾಗವು ಪಂಪನಿಗೆ ಸಂಬಂಧಿಸಿದ ಚರಿತ್ರೆಯ ವಿವರವಾಗಿ ಬಳಕೆಗೊಳ್ಳುತ್ತಾ ಬಂದಿದೆ. ಸ್ವಯಂ ಕವಿಯೇ ಕಾವ್ಯದ ಕೊನೆಗಿರುವ ಈ ಮಾಹಿತಿಯನ್ನು ಹೇಳಿಕೊಂಡುದೇ? ಇದು ಅನಂತರದ ಸೇರ್ಪಡೆಯಾಗಿರದೇ? ಈ ಅನುಮಾನಗಳ ನಡುವೆಯೂ ಈ ವಿವರಗಳು ಪಂಪಕವಿಯ ಚರಿತ್ರೆಯ ಪುನಾರಚನೆಯ ಸಲುವಾಗಿ ಕೆಲವೊಂದು ಊಹೆ, ಪ್ರಮೇಯಗಳ ಕಟ್ಟುವಿಕೆಗೆ ಕಾರಣವಾಗಿವೆ. ಈ ವಿವರಗಳಲ್ಲಿರುವ ಕವಿಯವಂಶ, ವಂಶಸ್ಥರ ಆಚಾರಸ್ವರೂಪ, ಸ್ವತಾನುಸರಣೆಯ ಮತಶ್ರದ್ಧೆ, ನೆಲೆಸಿದ ನಾಡುಗಳ ಕುರಿತ ಮಾಹಿತಿಗಳನ್ನು ಕುರ್ಕ್ಯಾಲ ಶಾಸನದಂತಹ ಪೂರಕ ಲಿಖಿತ ದಾಖಲೆಗಳ ಜೊತೆಗಿಟ್ಟು ದೃಢೀಕರಿಸಿಕೊಳ್ಳುವ ಯತ್ನವೂ ನಡೆದಿದೆ. ಈ ಲಿಖಿತ ದಾಖಲೆಗಳ ಮೇಲಿನ ಚರ್ಚೆಗಳು ವ್ಯಕ್ತಿಗತವಾಗಿ ಪಂಪನ ಜೈನತ್ವವನ್ನು ಅಲ್ಲಗಳೆದಿಲ್ಲ. ಆದರೆ ಆ ಚರ್ಚೆಗಳು ಪಂಪನ ಜೈನೇತರ ಅಸ್ತಿತ್ವದ ಶೋಧದ ಕಡೆಗೆ ಆಸ್ಥೆ ವಹಿಸಿದ್ದಂತೂ ಸುಳ್ಳಲ್ಲ. ಯಾಕೆಂದರೆ ಅಲ್ಲಿನ ಅಧಿಕ ಒತ್ತು ಆತನ ಪೂರ್ವಿಕರನ್ನು ಕುರಿತ ಮಾಹಿತಿಗೇ ಸಿಕ್ಕಿದೆ. ಅದರಲ್ಲಿಯೂ ಮಾಧವ ಸೋಮಯಾಜಿಯನ್ನು ಅಭಿಪ್ರಾಯವಾಗಿಸಿಕೊಂಡ ಜೈನೇತರ ವೈದಿಕ ಹಿನ್ನೆಲೆಗೆ ಹೆಚ್ಚು ಒತ್ತು ಸಂದಿದೆ. ಆ ಮೂಲಕ ಪೂರ್ವಪುರಾಣವನ್ನು ಆಧರಿಸಿ ಆದಿಪುರಾಣವನ್ನು ಬರೆದ ಕವಿಯ ಸತ್ವದ ಕಾರಣವನ್ನು ಸಾಮಾಜಿಕವಲಯದ ಕುಲೀನ ಬ್ರಾಹ್ಮಣ್ಯದ ಜೊತೆಗೆ ಜೋತು ಹಾಕುವ ಯತ್ನ ನಡೆದುದಿದೆ.

ಪಂಪ ಜೈನನಾಗಿದ್ದುದಲ್ಲ, ಜೈನನಾದುದು. ಇದು ಕನ್ನಡದ ಓದುಗಳು ಕಟ್ಟುವ ಬಹುಮುಖ್ಯ ಪ್ರಮೇಯಗಳಲ್ಲೊಂದು. ಆದರೆ ಈ ಆಗುವಿಕೆಯ ಹಿಂದಣ ಅವಸ್ಥೆಯನ್ನು ಆಗುವಿಕೆಯ ಸರಣಿಯಲ್ಲಿ ಗುರುತಿಸದ ಈ ಓದುಗಳು ಅದನ್ನೊಂದು ಸ್ಥಿರ ಅವಸ್ಥೆಯಾಗಿಯೇ ಕಂಡಿವೆ. ಹೀಗಾಗಿ ಕಾವ್ಯದಲ್ಲಿ ಉಕ್ತವಾದ ಪಂಪನ ಪೂರ್ವಿಕರಲ್ಲಿ ಮೂರು ತಲೆಮಾರಿನ ಹಿಂದಿನ ಮಾಧವ ಸೋಮಯಾಜಿಯೇ ಹೆಚ್ಚು ಚರ್ಚೆಗೊಳಗಾಗುತ್ತಾನೆ. ಈ ಮಾಧವಸೋಮಯಾಜಿಗೆ

ಮರಿಮಗನಾಗಿದ್ದ ಭೀಮಪಯ್ಯನೇ ಜಾತಿಯೊಳುತ್ತಮದ ಜಾತಿಯ ವಿಪ್ರಕುಲದವನಾಗಿಯೂ ಜಿನಧರ್ಮವೇ ವಲಂ ಎಂದು ತಜ್ಜಾತಿಯನ್ ಉತ್ತರೋತ್ತರಮೆ ಮಾಡಿ ಖ್ಯಾತನಾದವನು ಎಂಬುದು ಕಾವ್ಯದಲ್ಲಿನ ಮುಖ್ಯ ಮಾತು. ಆದರೆ ಪಂಪನ ಕಾವ್ಯವು ಜಾತಿಯಿಂದ ಧರ್ಮದ ಕಡೆಗೆ ಒಲಿದು ತನ್ನ ಜಾತಿ(ಹುಟ್ಟು)ಯನ್ನು ಉತ್ತರೋತ್ತರವಾಗಿ ಮಾಡಿಕೊಂಡ ಭೀಮಪಯ್ಯನ ತೀರ್ಮಾನವು ಸಂಭವಿಸಿದ ಆತನ ವಯೋಮಾನದ ಬಗೆಗೆ ಮಾತನಾಡುವುದಿಲ್ಲ. ಅದು ಪಂಪನಿಗೆ ಅಗತ್ಯವಾಗಿರಲಿಲ್ಲವೋ ಏನೋ? ಆದರೆ ಅನುಮಾನ ಪ್ರಮಾಣಗಳನ್ನು ಬೆಂಬತ್ತುವ ಸಾಂಪ್ರದಾಯಿಕ ಮನಸ್ಸಿನ ಓದುಗಳು ಈ ರೂಪಾಂತರದ ಘಳಿಗೆಯ ಜೊತೆಗೆ ಪಂಪನ ಹೆಸರು ಮತ್ತು ಮನೋಭಾವವನ್ನು ಬೆಸೆಯುತ್ತವೆ. ತಂದೆ ಭೀಮಪಯ್ಯನಿಂದಾಗಿ ಪಂಪ ಜೈನನಾದುದು ಹುಟ್ಟಿನಿಂದಲೇ ಅಥವಾ ಜನನೋತ್ತರವಾಗಿಯೇ ಎಂಬುದನ್ನು ಚಿಂತಿಸುವ ಈ ಓದುಗಳಲ್ಲಿ ಪಂಪನನ್ನು ವೈದಿಕದಲ್ಲಿ ಮರಳಿ ನೆಲೆಗೊಳಿಸುವ ಯತ್ನವಿದೆ. ಪಂಪಪೂರ್ವಿಕರ ಗೋತ್ರಾದಿ ವಿವರಗಳ ಸಂಕಲನದಲ್ಲಿ ಈ ಸೂಚನೆಗಳಿವೆ. ಅಷ್ಟೇ ಅಲ್ಲದೆ, ಕವಿಸಂಬಂಧಿತ ವಿವರಗಳನ್ನು ವೈದಿಕವೆನ್ನುವ ಬದಲು ಹಿಂದು ಎನ್ನುವ ಆಧುನಿಕ ರಾಜಕೀಯ ಮತಪರಿಭಾಷೆಯೊಂದಿಗೆ ಬೆರೆಸಿಡುವಲ್ಲಿ ಕವಿಯನ್ನು ಒಂದು ದೊಡ್ಡ ಮತಪರಿಧಿಯೊಳಗೆ ಸ್ಥಾಪಿಸುವ ಮತೀಯ ಆಯಾಮವೂ ಇದೆ. ಅದೇ ವೇಳೆ ಇದಕ್ಕೆ ವಿರುದ್ಧವಾಗಿ ವಂಶಶೋಧದ ನೆಲೆಯಲ್ಲೇ, ಭೀಮಪಯ್ಯನ ಉಲ್ಲಂಘನೆಯನ್ನು ಪಂಪನಿಗೆ ದಕ್ಕಿದ ಬಿಡುಗಡೆಯಾಗಿ ವಿವರಿಸಿಕೊಳ್ಳುವ ವೈದಿಕನಿರಾಕರಣದ ಪ್ರತಿಚರಿತ್ರೆಯ ಮಾದರಿಗಳೂ ಇವೆ. ಹೀಗೆ ಈ ಪುನಾರಚನೆಯು ಸಿಗದಿತ ಮೂಲವೊಂದರ ಸ್ಥಾಪನೆ ಮತ್ತು ನಿರಾಕರಣೆಗಳೇ ಆಗಿವೆ. ಅಲ್ಲಿ ಸಮಕಾಲೀನ ಮತಾಂತರ ಸಂಕಥನದ ಜೊತೆಗೂ ತಮ್ಮದೇ ಆದ ಧಾಟಿಯ ಸಂವಾದವಿದೆ. ಹಾಗಾಗಿ ಇಡಿಯ ಚರ್ಚೆ ಕಾವ್ಯಕ್ಕೆ ಹಿನ್ನೆಲೆಯಾದ ಕವಿಚರಿತೆಯ ಶೋಧಕ್ಕಿಂತ ಕವಿಯ ವಾರಸುದಾರಿಕೆಯ ಪ್ರಶ್ನೆಯನ್ನೇ ಮುಖ್ಯವಾಗಿಸಿಕೊಳ್ಳುತ್ತವೆ.

ವಂಶಸ್ಥರ ಆಚರಣೆಗಳನ್ನು ಕುರಿತ ಕವಿಯ ಮಾತುಗಳು ಮತ್ತು ಓದಿನ ಗ್ರಹಿಕೆಗಳು

ಈ ಮೇಲೆ ಗುರುತಿಸಲಾದಂತೆ ಸಾಂಪ್ರದಾಯಿಕ ಓದುಗಳ ವಂಶಕಥನವು ಪಂಪನನ್ನು ಬ್ರಾಹ್ಮಣಮೂಲದಲ್ಲೇ ಇರಿಸಿದೆ. ವಂಶವೃಕ್ಷದ ಮೂಲಪುರುಷನಾದ ಕಮ್ಮೆಕುಲದ ವತ್ಸಗೋತ್ರದ ಮಾಧವಸೋಮಯಾಜಿಯ ಆಚರಣೆ, ವಿಶೇಷತೆ, ಪ್ರಸಿದ್ಧಿಗೆ ಸಂಬಂಧಿಸಿದ ಅಭಿಪ್ರಾಯಭೇದಗಳ ನಡುವೆಯೂ ಅಲ್ಲಿ ಕೆಲವು ಸ್ಥಾಪಿತ ಸತ್ಯಗಳನ್ನು ನೆಲೆಗೊಳಿಸಿದೆ. ಪಂಪ ಜೈನನಾಗಿಯೂ ಬ್ರಾಹ್ಮಣ್ಯದ ಬಗೆಗೆ ಅಭಿಮಾನವುಳ್ಳವನಾಗಿದ್ದ ಎಂಬುದು ಅಂತಹ ಸತ್ಯಗಳಲ್ಲೊಂದು. ಆದರೆ ಅದು ಹೋಮದ ಹೊಗೆಯಿಂದ ಮಾಧವಸೋಮಯಾಜಿಯ ಯಶಸ್ಸು ಕರಿದುಗೊಂಡಿತೆಂದುದನ್ನು ಪಂಪನ ಜೈನೀಯತೆಯ ಸಾಕ್ಷಿಯೆಂದೇ ಸ್ವೀಕರಿಸಿದೆ. ಇದನ್ನು ಪಿರಿದು ಎಂದಿರುವುದನ್ನೇ ಕರಿದು ಎಂದಾಗಿಸಿದ ಜೈನಮತಾಚಾರದ ಪಂಡಿತರ ಕೈಚಳಕವೆಂದು ವಾದಿಸಿದವರುಂಟು. ಈ ಕರಿದು ಎಂದಾಗಿಸಿದ ಜೈನಮತಾಚಾರದ ಪಂಡಿತರ ಕೈಚಳಕವೆಂದು ವಾದಿಸಿದವರುಂಟು. ಈ ಪಾಠಭೇದದ ಆಕ್ಷೇಪವನ್ನು ಬದಿಗೊತ್ತಿ ಕರಿದು ಎಂದಿರುವುದನ್ನೇ ಸ್ವೀಕರಿಸಿ, ಕಾರಣಶೋಧದಲ್ಲಿ ಮತೀಯವಾಗಿ ವೈದಿಕ ವಿರೋಧವನ್ನೇ ಗುರುತಿಸಲಾಗಿದೆ. ಆದರೆ ಇದನ್ನು ಆಯ್ದಕೆಲವೇ ಆಚರಣೆಗಳಿಗೆ ಸೀಮಿತವಾಗಿಸುವ ಈ ನಿರೂಪಣೆ, ಆ ವೈದಿಕ ವಿರೋಧವನ್ನು ಸರ್ವತ್ರವಲ್ಲವೆಂದೇ ವಾದಿಸುತ್ತದೆ. ಆ ಮೂಲಕ ಅದು ಪಂಪನಲ್ಲಿ ತನ್ನ ಪೂರ್ವಿಕರ ಕುರಿತ ಅಭಿಮಾನವನ್ನೇ

ಪ್ರತಿಪಾದಿಸುತ್ತದೆ. ಸಾಂಪ್ರದಾಯಿಕ ಓದುಗಳ ಈ ಔದಾರ್ಯ ಪಂಪನ ತಮ್ಮ ಜಿನವಲ್ಲಭನಿಗೆ ಸಿಕ್ಕಿಲ್ಲ! ಅಲ್ಲಿ ಜಿನವಲ್ಲಭ ಕಠೋರ ಜೈನಾನುಯಾಗಿಯೇ ಗುರುತಿಸಲ್ಪಡುತ್ತಾನೆ. ಪಂಪನ ಕಾವ್ಯಗಳು ಮತ್ತು ಕುರ್ಕ್ಯಾಲ ಶಾಸನ, ಕರೀಂನಗರ ಶಾಸನ: ಪ್ರೇರಣೆ, ಸಂಬಂಧ ಎನ್ನುವ ಎನ್.ಎಸ್.ತಾರಾನಾಥ ಅವರ ಲೇಖನವು ಈ ದಿಸೆಯಲ್ಲಿ ಗಮನಿಸಬೇಕಾದುದು. ಪಂಪನ ಕೃತಿಯಲ್ಲಿ ಉಲ್ಲೇಖಗೊಳ್ಳುವ ಪೂರ್ವಿಕರ ಅವೇ ಹೆಸರುಗಳು ಜಿನವಲ್ಲಭನ ಕುರ್ಕ್ಯಾಲಶಾಸನದಲ್ಲಿ ನಾಪತ್ತೆಯಾಗಿರುವುದನ್ನು ಈ ಲೇಖನವು ತೌಲನಿಕವಾಗಿ ಪ್ರಸ್ತಾಪಿಸುತ್ತದೆ. ಪಂಪನ ಪಾಲಿಗೆ ವೈದಿಕಮಯವಾಗಿದ್ದ ಧರ್ಮಪುರ, ಜಿನವಲ್ಲಭನ ಜೈನಕ್ಷೇತ್ರವಾಗಿರುವುದಷ್ಟೇ ಅಲ್ಲದೆ, ಕುರ್ಕ್ಯಾಲಶಾಸನದಲ್ಲಿ ಮತಾಂತರಿಯಾದ ತನ್ನ ತಂದೆ ಭೀಮಪಯ್ಯನನ್ನು ಮಾತ್ರ ಉಲ್ಲೇಖಿಸಿದ್ದಾನೆ (ರಾಧಾಕೃಷ್ಣ(ಸಂ), ಪಂಪಾಧ್ಯಯನ,ಪು.೮೦) ಎನ್ನುವ ಮೂಲಕ ಪಂಪನನ್ನು ವೈದಿಕಪರವಾಗಿಯೂ, ಜಿನವಲ್ಲಭನನ್ನು ವೈದಿಕವಿರೋಧಿಯಾಗಿಯೂ ವಿಭಜಿಸಿಕೊಳ್ಳುತ್ತದೆ. ಅದರೊಂದಿಗೆ ಮತಾಂತರಕ್ಕೊಳಗಾದ ಹೊಸಪೀಳಿಗೆಯ ಕುರಿತ ಮತಾಂತರ ಸಂಕಥವನ್ನೇ ಉಸಿರಾಡುತ್ತದೆ. ಕಾವ್ಯದಲ್ಲಿನ ಪೂರ್ವಿಕರ ಉಲ್ಲೇಖಕ್ಕಾಗಿ ಸಾಂಸ್ಕೃತಿಕ ವಕ್ತಾರನಾದ ಪಂಪನಲ್ಲಿ ವೈದಿಕತೆಯ ಅಭಿಮಾನವನ್ನು ಮೆಚ್ಚುಗೆಯಿಂದ ದಾಖಲಿಸುವ ಲೇಖನ, ಶಾಸನದಲ್ಲಿನ ವಂಶಾವಳಿಯ ನಾಪತ್ತೆಗಾಗಿ ಜಿನವಲ್ಲಭನನ್ನು ಮತಾಂಧನಾದ ವೈದಿಕ ವಿರೋಧಿಯಾಗಿ ವಿವರಿಸಿಕೊಳ್ಳುತ್ತದೆ. ಹೀಗೆ ಈ ಓದುಗಳೆಲ್ಲವೂ ವೈದಿಕತೆಯೊಂದಿಗೆ ಕವಿಗಿರುವ ಅನುರಾಗದ ಸಂಬಂಧವನ್ನೇ ಸ್ಥಾಪಿಸಿವೆ.

ಆದರೆ ಆಧುನಿಕ ಓದುಗಳಲ್ಲಿ ಪಂಪನ ಪೂರ್ವಿಕರ ಕುರಿತ ಇದೇ ಮಾತುಗಳ ಅವಧಾರಣೆಯ ನೆಲೆಗಳು ಭಿನ್ನವಾಗುತ್ತವೆ. ಮತನಿಷ್ಠೆಯ ಚರ್ಚೆಗಳ ಸ್ವರೂಪ ಬದಲಾಗುತ್ತವೆ. ಆದಿಪುರಾಣ: ಅನುಭವದ ವಿಭಿನ್ನ ನೆಲೆಗಳನ್ನು ತೆರೆಯುತ್ತ... ಎನ್ನುವ ಲೇಖನದಲ್ಲಿ ಬಸವರಾಜ ಕಲ್ಗುಡಿ ಅವರು ಅಧ್ವರ ಧೂಮದಿಂದ ಕರಿದು ಮಾಡಿಕೊಂಡ ಎಂಬ ಉಲ್ಲೇಖವನ್ನು ರೂಪಕವಾಗಿಯೇ ವಿವರಿಸಿಕೊಳ್ಳುತ್ತಾರೆ. ಅವರೆನ್ನುವಂತೆ ತಾತನ ಕಾಲದಲ್ಲಿ ಯಜ್ಞದ ಧೂಮವೇ ಬೆಳೆಬೆಳೆದು ಅವನ ವ್ಯಕ್ತಿತ್ವವನ್ನು ಕಪ್ಪುಗಟ್ಟಿಸಿತು. ಇಂತಹ ಕಪ್ಪುಗಟ್ಟಿದ ವ್ಯಕ್ತಿತ್ವವನ್ನು ಮತ್ತೆ ಬೆಳಗುವ ಬಗೆಯಾಗಿಯೇ ಅಥವಾ ಸಂಸ್ಕೃತಿಯ ಸ್ಥಗಿತ ವಿನ್ಯಾಸವನ್ನು ಮತ್ತೊಮ್ಮೆ ಉಜ್ಜಿನೋಡುವ ಬಗೆಯಾಗಿಯೇ ಆತನ ತಂದೆಯ ಮತಮುಕ್ತಿ/ಮತಾಂತರವು ಸಂಭವಿಸಿದೆ. ಹೀಗೆ ಹೋಮಧೂಮದ ನಿರೂಪಣೆಯನ್ನು ಅವರು ಮತಾಂತರದ ಕಾರಣವನ್ನು ವಿವರಿಸುವ ರೂಪಕವಾಗಿಯೇ ವಿವರಿಸಿಕೊಳ್ಳುತ್ತಾರೆ. ಇಲ್ಲಿ ಪಂಪನಿಗೆ ಬ್ರಾಹ್ಮಣಕರ್ಮಗಳ ಬಗೆಗೆ ಅಭಿಮಾನವಿತ್ತೆಂಬ ನೆಲೆಗಿಂತ, ಹಳತಾದುದರ ಮೇಲಿನ ಕೊಳೆಯನ್ನು ಗುರುತಿಸಿ ಅದರಿಂದ ಮುಕ್ತನಾಗುವ ಹಂಬಲವಿತ್ತೆಂಬ ಗ್ರಹಿಕೆಯೇ ಇದೆ. ಈ ಅಧ್ವರಧೂಮದ ಮಾತನ್ನೇ ಪ್ರಸ್ತಾಪಿಸುವ ಸಿ.ವೀರಣ್ಣ ಅವರು, ಧೂಮ ಕಪ್ಪಾಗಿದ್ದೂ ಯಶಸ್ಸನ್ನು ಬೆಳ್ಳಗೆ ಮಾಡಿತೆಂಬ ಬಾಣನ ಪದ್ಯದ ತಪ್ಪುಗ್ರಹಿಕೆ ಕಾರಣವಾಗಿ ಪಂಪ ಈ ರೀತಿ ಬರೆದಿರಬೇಕು (ರಾಧಾಕೃಷ್ಣ(ಸಂ),ಪಂಪಾಧ್ಯಯನ,ಪು.೨೯೯)ಎನ್ನುತ್ತಾರೆ. ಇಲ್ಲಿರುವುದು ತಾತ್ವಿಕವಾಗಿ ವೇದಪ್ರಮಾಣವನ್ನೊಪ್ಪದ ವೈದಿಕೇತರ ಧೋರಣೆಯನ್ನು ಮುಂದಿಡುವ ಕ್ರಮ. ಇದಕ್ಕೆ ಪೂರಕವಾಗಿಯೇ ಪಿ.ವಿ.ನಾರಾಯಣ ಅವರು, ತಂದೆಯ ಮತಾಂತರವನ್ನು ಕುರಿತ ಉತ್ತಮದಿಂದ ಉತ್ತಮಕ್ಕಾದ ನೆಗೆತವೆನ್ನುವ ಪಂಪನ ಅಭಿಪ್ರಾಯವು ಪ್ರಜ್ಞೆಯ ಮೇಲುಸ್ತರಕ್ಕಷ್ಟೇ ಸೀಮಿತವಾದುದೆನ್ನುತ್ತಾರೆ. ಅಷ್ಟೇ ಅಲ್ಲದೆ, ಅಂತರ್ಯದಲ್ಲಿ ಆತ ಕುಲವು

ಆಕುಲವನ್ನುಂಟುಮಾಡುತ್ತದೆ (ರಾಧಾಕೃಷ್ಣ(ಸಂ),ಪಂಪಾಧ್ಯಯನ, ಪು.೯೪) ಎನ್ನುವ ಸಾರ್ವಕಾಲಿಕಸತ್ಯದ ಅರಿವುಳ್ಳವನಾದುದರಿಂದ, ಬ್ರಾಹ್ಮಣ್ಯದ ಒಲವುಳ್ಳವನೆನ್ನಲಾಗದು ಎನ್ನುತ್ತಾರೆ. ಈ ಆಧುನಿಕ ಓದುಗಳಲ್ಲಿನ ಪಂಪ ಕುಲದ ಹೆಮ್ಮೆ, ಅಭಿಮಾನಗಳನ್ನು ದಾಟಿದ ವ್ಯಕ್ತಿತ್ವವುಳ್ಳವನು. ವೈದಿಕದ ಸ್ಥಗಿತವಿನ್ಯಾಸವನ್ನು ಮೀರಿದವನು. ವಂಶದ ಕುರಿತ ಹೇಳಿಕೆಗಳಿಂದ ದಾಟಿಕೊಂಡು, ಕಾವ್ಯದಲ್ಲಿ ಬಿಂಬಿತವಾಗುವ ವಿಶ್ವಮಾನವತೆಯ ಹಿನ್ನೆಲೆಯಲ್ಲಿ ಅಳೆಯಲ್ಪಟ್ಟವನು.

ಪಂಪನಿಗೆ ಸಂಬಂಧಿಸಿದ ಈ ಕವಿಚರಿತೆಯ ನಿರೂಪಣೆಗಳಲ್ಲಿ ಕನ್ನಡದ ಜಗತ್ತನ್ನು ಪ್ರಭಾವಿಸಿದ ಬೇರೆ ಬೇರೆ ಚಿಂತನಾ ಧಾರೆಗಳ ಸೆಳಕುಗಳಿವೆ. ಆ ಚಿಂತನಾಧಾರೆಗಳನ್ನು ಅನುಸರಿಸಿಕೊಂಡೇ ಕವಿಯನ್ನು ವಿವರಿಸಿಕೊಳ್ಳುವಲ್ಲಿ ಆತನ ವರ್ತಮಾನ ಮತ್ತು ಭೂತದ ಕುರಿತ ಆದ್ಯತೆಗಳು ಬದಲಾಗುತ್ತಿವೆ. ಮುಖ್ಯವಾಗಿ ಆರಂಭದ ಕನ್ನಡ ಸಂಶೋಧನೆಯ ಮೇಲೆ ಗಾಢವಾದ ಪ್ರಭಾವವನ್ನು ಬೀರಿದ ಓರಿಯೆಂಟಲ್ ಮಾದರಿಯ ಆಲೋಚನಾಕ್ರಮವು ದೇಶದ ಬೌದ್ಧಿಕಚರಿತ್ರೆಯನ್ನು ಸಂಸ್ಕೃತ ಅಥವಾ ವೈದಿಕಮೂಲವಾಗಿ ವಿವರಿಸಿಕೊಳ್ಳುವಲ್ಲಿ ಪ್ರೇರಣೆಯಾಗಿದೆ. ಅದು ಎಲ್ಲವನ್ನೂ ವೈದಿಕಗಂಗೋತ್ರಿಯಿಂದಾದುದಾಗಿಯೇ ನಿರೂಪಿಸುತ್ತದೆ. ಶ್ರೇಷ್ಠತೆಯ ಮೂಲನಿರೂಪಣೆಯ ಮೂಲಕ ಇದು ಸಾಧಿಸಿದ ಸಾಂಸ್ಕೃತಿಕರಾಜಕಾರಣದ ಯಶಸ್ಸು ಅಪಾರವಾದುದು. ಇದರ ಪರಿಣಾಮವಾಗಿ ವೈದಿಕಪರ ಹಾಗೂ ವಿರೋಧಿ ನೆಲೆಗಳೆರಡೂ ಚರ್ಚೆಯ ಕೇಂದ್ರದಲ್ಲಿ ವೈದಿಕವೇ ನೆಲೆಪಡೆದುಕೊಂಡಿತು. ಈ ಅಂಶ ಪಂಪನ ಕುರಿತ ವಂಶ ನಿರೂಪಣೆಯಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಹಾಗಾಗಿ ಒಂದು ಕಡೆಯಿಂದ ಜೈನಪಂಪನಿಗಿಂತ ವೈದಿಕ ಪಂಪ ಹುಡುಕಾಟದ ವಸ್ತುವಾಗುತ್ತಾನೆ. ವರ್ತಮಾನಕ್ಕಿಂತ ಗತದ ಭೂತದಲ್ಲಡಗಿದ್ದ ಕವಿಯ ವಾಂಶಿಕ ಪುನಾರಚನೆ ಆದ್ಯತೆಯಾಗುತ್ತದೆ. ಇದಕ್ಕೆ ಪ್ರತಿಚರಿತ್ರೆಯ ಮಾದರಿಯಲ್ಲಿ ಹೊರಡುವ ಧಾರೆಗೆ ಈ ಸ್ಥಾಪಿತ ಸಾಂಸ್ಕೃತಿಕ ವಿನ್ಯಾಸವನ್ನು ಅಲ್ಲಗಳೆಯುವ ಜರೂರತ್ತು ಮುಖ್ಯವಾಗುವ ಹಿನ್ನೆಲೆಯಲ್ಲಿ ಅಲ್ಲಿಯೂ ಒಂದಿಲ್ಲೊಂದು ನೆಲೆಯಲ್ಲಿ ವೈದಿಕದ ನಿರಾಕರಣವು ನೆಲೆಪಡೆದುಕೊಳ್ಳುತ್ತದೆ. ಮೇಲೆ ಸೀಮಿತವ್ಯಾಪ್ತಿಯಲ್ಲಿ ಚರ್ಚಿಸಲಾಗಿರುವ ಕವಿಯ ಮೂಲದ ಕುರಿತ ನಿರೂಪಣೆಗಳು ಒಂದಿಲ್ಲೊಂದು ಬಗೆಯಲ್ಲಿ ವೈದಿಕದ ಜೊತೆಗೇ ವ್ಯವಹರಿಸುತ್ತಿರುವುದರ ಹಿಂದೆ ಇಂತಹ ಕಾರಣಗಳಿರುವುದು ಸ್ಪಷ್ಟವಾಗಿಯೇ ಇದೆ. ಹೀಗಾಗಿ ಆದಿ ಕವಿಯ ಕುರಿತಾದ ಕವಿಪರಿಚಯವು ಆತನ ಕಾವ್ಯಕ್ಕೆ ಹಿನ್ನೆಲೆಯಾದ ಆತನ ವರ್ತಮಾನಕ್ಕಿಂತ ಗತವನ್ನೇ ಹೆಚ್ಚು ಬೆಂಬತ್ತುತ್ತದೆ ಎಂದೇ ಹೇಳಬೇಕು.


ತೆನೆ ಸರ್ವಪ್ರಕಾಶನಗರ ಅಂಕದಕಟ್ಟೆ
ಕೋಟೇಶ್ವರ ಕುಂದಾಪುರ.

ಚಿಂತನಾ ಕ್ರಮಕ್ಕೆ ಸ್ವಾತಂತ್ರ್ಯ ನೀಡಿದ ಗುರು

ಅಶ್ವಿನಿ ದೇಸಾಯಿ

ಅನಂತಮೂರ್ತಿಯವರನ್ನು ಕುರಿತು ಗಿರೀಶ್ ಕಾಸರವಳ್ಳಿಯವರು ಇತ್ತೀಚೆಗೆ ಡಾಕ್ಯುಮೆಂಟರಿ (ಸಾಕ್ಷ್ಯಚಿತ್ರ) ಒಂದನ್ನು ತಯಾರಿಸಿದ್ದರು. ಈ ಚಿತ್ರದ ಹೆಸರು Ananthamurthy not a personality but hypothesis ಎಂದು ಪತ್ರಿಕೆಗಳಲ್ಲಿ ಓದಿದ್ದೆ. ಈಗ ಅವರಿಲ್ಲದೇ ಇರುವಾಗ ನನಗೆ ಅವರು ಪರೀಕ್ಷಿಸಬಹುದಾದ ಊಹಾ ಸಿದ್ಧಾಂತದ (testable hypothesis) ಭಾಗವಾಗಿಯೇ ಕಾಣಿಸುತ್ತಾರೆ. ಅವರೊಂದಿಗಿನ ನನ್ನ ಅತ್ಯಲ್ಪ ಸಮಯದ ಒಡನಾಟದ ಬಗ್ಗೆ ಮತ್ತು ನಾನು ಅವರನ್ನು ಒಬ್ಬ Icon ಆಗಿ, ವ್ಯಕ್ತಿಯಾಗಿ, ಸಾರ್ವಜನಿಕ ವ್ಯಕ್ತಿಯಾಗಿ, ಬುದ್ಧಿಜೀವಿಯಾಗಿ - ಹೀಗೆ ನಾಲ್ಕಾರು ಆಯಾಮಗಳಲ್ಲಿ ನೋಡಿದ್ದನ್ನು ದಾಖಲಿಸಲು ಪ್ರಯತ್ನಿಸುತ್ತೇನೆ. ಇದು ಅವರಿಗೆ ನನ್ನ ಗೌರವಪೂರ್ವಕ ಶ್ರದ್ಧಾಂಜಲಿ.

ಮೊದಲಿಗೆ, ನಾನು ತೊಂಬತ್ತರ ದಶಕದ ಕೊನೆಯ ಭಾಗದಲ್ಲಿ ಮೈಸೂರು ವಿವಿಯ ಇಂಗ್ಲಿಷ್ ವಿಭಾಗದ ವಿದ್ಯಾರ್ಥಿಯಾಗಿದ್ದೆ. ಅಲ್ಲಿ ನಮಗೆ ಪಾಠ ಮಾಡುತ್ತಿದ್ದ ಬಹುತೇಕ ಪ್ರಾಧ್ಯಾಪಕರು, ಸಿ.ಡಿ.ನರಸಿಂಹಯ್ಯ, ಅನಂತಮೂರ್ತಿಯವರು ಕಟ್ಟಿಬೆಳೆಸಿದ್ದ ಆ ವಿಭಾಗದ ಪರಂಪರೆಯ ಮುಂದುವರಿಕೆಯ ಭಾಗವಾಗಿದ್ದರು. ಅವರ ಶಿಷ್ಯಂದಿರಂತೆಯೇ ನಾನು ಕೂಡ ಈ ಪರಂಪರೆಯ ಭಾಗವಾಗಿಯೇ ಐರೋಪ್ಯ ಕೇಂದ್ರಿತ ಪಠ್ಯಗಳಿಂದ ವಿಮುಖಳಾಗಿ



'ಕಾಮನ್ ವೆಲ್ತ್' ಸಾಹಿತ್ಯವನ್ನು ಆಯ್ದುಕೊಂಡೆ. ಒಂದು ಕಡೆ ಪರಂಪರೆಯ ಭಾಗವಾಗಿದ್ದ ನಮ್ಮ ಮೇಷ್ಟ್ರುಗಳಿಂದ ಅನಂತಮೂರ್ತಿಯವರ ಬಗ್ಗೆ ಬಹಳಷ್ಟು ಕೇಳಿದ್ದೆ. ಅನಂತಮೂರ್ತಿಯವರು 'ಮಾಡರ್ನಿಟಿಯ' ಮೇರುಗಳಾದ ಯೇಟ್ಸ್, ಎಲಿಯಟ್, ಎಜ್ರಾಪೌಂಡ್ ಮೊದಲಾದ ಕವಿಗಳ ಬಗ್ಗೆ, ಅಸ್ತಿತ್ವವಾದಿಗಳಾದ ನೀಶೆ, ಸಾರ್ತ್ರ, ಕಮೂ, ವಾಲ್ಟರ್ ಬೆಂಜಮಿನ್ ಮುಂತಾದವರ ಬಗ್ಗೆ ಎಷ್ಟು ತೀವ್ರತೆಯಿಂದ ಮಾತನಾಡುತ್ತಿದ್ದರೋ ಅದೇ ತೀವ್ರತೆಯಿಂದ ಪಂಪ, ಕುಮಾರವ್ಯಾಸರಂಥ ಮಹಾಕವಿಗಳ ಬಗ್ಗೆ ಮತ್ತು ರಾಮಾಯಣ ಮಹಾಭಾರತಗಳಂಥ ಮಹಾಕಾವ್ಯಗಳ ಬಗ್ಗೆಯೂ ಮಾತನಾಡುತ್ತಿದ್ದರು; ಹಾಗೆಯೇ ಅವರು 'ನವ್ಯ ಚಳವಳಿ'ಯ ಮುಖ್ಯ ಹುರಿಕಾರರಲ್ಲಿಯೂ ಒಬ್ಬರಾಗಿದ್ದರು. ಅವರು ಸಾಹಿತ್ಯ ವಿದ್ಯಾರ್ಥಿಯಾಗಿದ್ದುಕೊಂಡೇ ರಾಜಕೀಯ, ಸಾಮಾಜಿಕ, ಆರ್ಥಿಕ ಹೀಗೆ ಎಲ್ಲ ಬಗೆಯ ವಿಚಾರಗಳಿಗೆ ಸೂಕ್ಷ್ಮವಾಗಿ ಸ್ಪಂದಿಸುತ್ತಿದ್ದರು. ನಾನು ಓದುವಾಗಿನ ಸಂದರ್ಭಕ್ಕಾಗಲೇ ಇಂಗ್ಲಿಷ್ ವಿಭಾಗಗಳಲ್ಲಿ ಯುರೋಪ್ ನ ಸಾಹಿತ್ಯವನ್ನು ಮೀರಿ ಕಾಮನ್ ವೆಲ್ತ್, ಇಂಡಿಯನ್ ರೈಟಿಂಗ್ ಇನ್ ಇಂಗ್ಲಿಷ್ ನಂತಹ ವಿಷಯಗಳನ್ನು ಪರಿಚಯಿಸಿ ಈ ವಿಭಾಗದ ವ್ಯಾಪ್ತಿಯನ್ನು ವಿಸ್ತರಿಸಿದ ಕೀರ್ತಿ ಅನಂತಮೂರ್ತಿ ಹಾಗೂ ಸಮಕಾಲೀನ ಮತ್ತು ಅವರ ನಂತರ ಬಂದ ಪ್ರಾಧ್ಯಾಪಕರುಗಳಿಗೆ ಸಲ್ಲುತ್ತದೆ ಎಂದು ಕೇಳಿದ್ದೆ. ಇನ್ನೊಂದು ಕಡೆ ಪತ್ರಿಕೆಗಳಲ್ಲಿ ಸಾರ್ವಜನಿಕ ಬದುಕಿನಲ್ಲಿ ಅವರು ಸಮಯಕ್ಕೊಂದು ಹೇಳಿಕೆ ಕೊಡುವಂತಹವರು, ಬ್ರಾಹ್ಮಣ ಮತ್ತು ಸಂಪ್ರದಾಯ ವಿರೋಧಿಗಳು ಎಂದೆಲ್ಲಾ ಟೀಕೆಗೊಳಗಾಗಿದ್ದರು. ಈ ತರಹದ ದ್ವಂದ್ವಗಳಿಂದಲೇ ಅನಂತಮೂರ್ತಿಯವರ ಬಗ್ಗೆ ಒಂದು ವಿಶೇಷ ಕುತೂಹಲ ನನ್ನಲ್ಲೂ ಬೆಳೆದಿತ್ತು.

ನಾನು ಸ್ನಾತಕೋತ್ತರ ಪದವಿ ಮುಗಿಸಿದ ಮೇಲೆ ನನ್ನ ಗುರುಗಳೊಬ್ಬರು (ಅನಂತಮೂರ್ತಿಯವರ ಶಿಷ್ಯ) ಅನಂತಮೂರ್ತಿಯವರು ಭಾರತದ ವಿವಿಧ ಭಾಷೆಗಳ

ಇತಿಹಾಸದ ಕುರಿತಾಗಿ ಸರ್ಕಾರಿ ಸಂಸ್ಥೆಯೊಂದಕ್ಕೆ ಪ್ರಾಜೆಕ್ಟ್ ಮಾಡುತ್ತಿದ್ದಾರೆ. ಅವರಿಗೆ ಸಹಾಯ ಮಾಡಲು, ಬೇರೆ ಬೇರೆ ಸಾಹಿತಿಗಳ ಜೊತೆ ಈ ಕುರಿತು ಸಂವಹನ, ಸಂವಾದ ಮಾಡಲು ಕೆಲವು ದಿವಸಗಳ ಕಾಲ ಸಹಾಯಕರೊಬ್ಬರ ಅಗತ್ಯವಿದೆ. ನಿನಗೆ ಮಾಡಲು ಸಾಧ್ಯವೇ? ಎಂದು ಕೇಳಿದರು. ನನಗೆ ಒಂದು ಕಡೆ ಇಂತಹ ವ್ಯಕ್ತಿಯೊಬ್ಬರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿತಲ್ಲಾ ಎಂದು ಸಂತೋಷ. ಇನ್ನೊಂದೆಡೆಗೆ ನನಗಿದೆಲ್ಲಾ ಸಾಧ್ಯವಾಗುತ್ತದೆಯೋ ಹೇಗೆ ಎಂಬ ಭಯ. ಇವೆಲ್ಲ ಗೊಂದಲಗಳೊಂದಿಗೆ ನನ್ನ ಗುರುಗಳೊಂದಿಗೆ ಅವರನ್ನು ಭೇಟಿಯಾದೆ. ಗೊಂದಲ, ಭಯ ಎಲ್ಲವೂ ಒಮ್ಮೆಲೆ ಮಂಜಿನಂತೆ ಕರಗಿಹೋದವು. ಅವರ ಸ್ನೇಹಮಯ ವ್ಯಕ್ತಿತ್ವ ಮತ್ತು ಯುವಕರ ಬಗ್ಗೆ ಇದ್ದ ಕಾಳಜಿ ನನಗೆ ಬಹಳ ಇಷ್ಟವಾದವು. ಒಮ್ಮೆ ಅವರು ದಲಿತ ಹಾಗೂ ಬಂಡಾಯ ಚಳವಳಿ 'ನವ್ಯ' ಚಳವಳಿಯ ಅತ್ಯಂತ ಮುಖ್ಯ ಹಾಗೂ ಧ್ವನಿಪೂರ್ಣ ಟಿಸಿಲು ಎಂದು ನಾನು ಕೇಳಿದ ಯಾವುದೋ ಪ್ರಶ್ನೆಗೆ ಸುದೀರ್ಘವಾಗಿ ವಿವರಿಸಿದ್ದನ್ನು ಬಿಟ್ಟರೆ ನಾನು ಅವರೊಡನೆ ಈ ತರಹದ ಬೌದ್ಧಿಕ ಸಂವಾದಗಳನ್ನು ಮಾಡಿದ್ದು ಬಹಳ ಕಡಿಮೆ. ಆದರೆ ಈ ಸಮಯದಲ್ಲಿ ನಾನು ಕಂಡಿದ್ದು ಅವರ ಮನೆಗೆ ಆಗಾಗ ಅವರ ಸಲಹೆ, ಸೂಚನೆಗಳನ್ನು ತೆಗೆದುಕೊಂಡು ಹೋಗಲು ಬರುತ್ತಿದ್ದ ಅನೇಕ ಉದಯೋನ್ಮುಖ ಯುವ ಕವಿಗಳು, ಬರಹಗಾರರನ್ನು. ಅವರಲ್ಲೊಬ್ಬರಾಗಿ ಬೆನ್ನು ಚಪ್ಪರಿಸಿ ನಂತರ ನಿರ್ಭಿಡೆಯಿಂದ ಅವರ ಕಾವ್ಯಗಳ ಬಗ್ಗೆ, ಬರಹಗಳ ಬಗ್ಗೆ ವಿಮರ್ಶೆ ಮಾಡುವುದನ್ನು, ಇವರ ಜೊತೆಗೆ ಅವರು ತಮ್ಮೊಡನೆ ಭಿನ್ನಾಭಿಪ್ರಾಯ ಇರುವವರನ್ನು ನಡೆಸಿಕೊಳ್ಳುವ ರೀತಿ ಮತ್ತು ಅವರೊಡನೆ ಸಂವಾದ ಮಾಡುವ ಪರಿಯನ್ನೂ ಕಂಡಿದ್ದೇನೆ. ಉದಾಹರಣೆಗೆ ಕೆಲವೊಂದು ವಿಷಯಗಳಲ್ಲಿ ಮೈಸೂರಿನ ಶ್ರೀ ರಾಮದಾಸ್ ಅವರಿಗೆ ಅನಂತಮೂರ್ತಿಯವರ ಜೊತೆ ತಾತ್ತ್ವಿಕ ಭಿನ್ನಾಭಿಪ್ರಾಯಗಳಿದ್ದವು. ಆದರೆ ಅನಂತಮೂರ್ತಿಯವರು ಬೆಳಿಗ್ಗೆ ವಾಕಿಂಗ್ ಹೋದಾಗ ಬಹಳಷ್ಟು ಸಲ ಅವರ ಮನೆಗೆ ಹೋಗಿ ಚಹಾದೊಂದಿಗೆ ಅವರೊಂದಿಗೆ ಮಾತುಕತೆ ಆಡಿಯೇ ಬರುತ್ತಿದ್ದರು. ಇನ್ನೊಂದು ಉದಾಹರಣೆ ಹೇಳುವುದಾದರೆ, ಆಗ ವಾಜಪೇಯಿ ನೇತೃತ್ವದ ಸರ್ಕಾರವಿತ್ತು. ಅನಂತಮೂರ್ತಿಯವರಿಗೆ ಬಿಜೆಪಿಯ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯಗಳಿದ್ದವು. ಆದರೂ ಅವರು ಕೇಂದ್ರ ಸರ್ಕಾರದ ಅಧೀನದ ಪುಣೆಯ ಎಫ್.ಟಿ.ಐ.ಐ.ಯ ಅಧ್ಯಕ್ಷರಾಗಿದ್ದರು. ಹೀಗಿದ್ದರೂ ಅವರು ತಮ್ಮ ಭಿನ್ನಾಭಿಪ್ರಾಯವನ್ನು ಬಹಳ ತೀವ್ರತೆಯಿಂದಲೇ ಮಂಡಿಸುತ್ತಿದ್ದರು. ಆದರೆ ಅವರು ವಾಜಪೇಯಿಯವರು ಮಾಡಿದ ಒಳ್ಳೆಯ ಕೆಲಸಗಳ ಬಗ್ಗೆ ಬಹಳ ಮುಕ್ತವಾಗಿಯೇ ಹೊಗಳುತ್ತಿದ್ದರು (ಅನಂತಮೂರ್ತಿಯವರು ವಿರೋಧಿಸುತ್ತಿದ್ದ ಬಿಜೆಪಿ ಅಥವಾ ಆರ್.ಎಸ್. ಎಸ್.ಗೆ ವಾಜಪೇಯಿಯವರು ಸೇರಿದ್ದವರಾಗಿದ್ದರೂ). ಇದನ್ನು 'ದ್ವಂದ್ವ' ಎನ್ನುವುದಾದರೆ ನನಗೆ ನಾವು ಬದುಕುವ ರೀತಿಯೇ ಹೀಗೆ ಎಂದೆನಿಸುತ್ತದೆ. ಎಂದೂ ಅನಂತಮೂರ್ತಿಯವರು ಸಂವಾದ ಮಾಡುವುದರಿಂದ ಹಿಂದೆಗೆದದ್ದು ನನ್ನ ಅನುಭವಕ್ಕೆ ಬಂದಿಲ್ಲ. ಹಾಗೆಯೇ ಹಿಂದುತ್ವ ಅಥವಾ ಬಲಪಂಥೀಯರ ಬಗ್ಗೆ ಅವರಿಗಿದ್ದ ಅಸಮಾಧಾನವನ್ನು ತೋರಿಸಿ ಬರೆದರೂ ಅವರು ಯಾವುದೇ ಚಿಂತನೆಗಳ ಬಗ್ಗೆ ದ್ವೇಷದಿಂದ ಮಾತನಾಡಿದ್ದು ಇಲ್ಲವೆಂದೇ ಹೇಳಬಹುದು.

ಕೆಲವು ದಿನಗಳ ನಂತರ ಕೆಲವು ಕಾರಣಗಳಿಂದ ಈ ಪ್ರಾಜೆಕ್ಟ್ ಮುಂದುವರೆಯಲಿಲ್ಲ. ಹಾಗಾಗ ನಾನೂ ಕೆಲಸ ಬಿಟ್ಟೆ. ಇದಾದ ಮೇಲೆ ಹೆಗ್ಗೋಡಿನಲ್ಲಿ ನಡೆಯುವ ವಾರ್ಷಿಕ ಸಂಸ್ಕೃತಿ ಶಿಬಿರದಲ್ಲಿ ಅವರನ್ನು ಭೇಟಿಯಾಗಿದ್ದೆ. ಆಗ ನಾನು ಸಂಶೋಧನಾ ವಿದ್ಯಾರ್ಥಿಯಾಗಿದ್ದೆ. ನನ್ನ

ಸಂಶೋಧನೆಯ ಬಗ್ಗೆ ವಿಚಾರಿಸಿ ಕೆಲವು ಸಲಹೆಗಳನ್ನೂ ಅವರು ಕೊಟ್ಟರು.

ನಂತರ ಬಹಳ ವರ್ಷಗಳ ಕಾಲ ನಾನು ಅವರ ಸಂಪರ್ಕದಲ್ಲಿರಲಿಲ್ಲ. ಈ ಕಾಲಘಟ್ಟದಲ್ಲಿಯೇ ನಾನು ಅನಂತಮೂರ್ತಿಯವರನ್ನು ಬೌದ್ಧಿಕವಾಗಿ ಕಂಡುಕೊಂಡಿದ್ದು, ಅವರ ಸಂಪರ್ಕವಿಲ್ಲದೆಯೇ ಅವರ ವಿಚಾರಗಳೊಂದಿಗೆ ಆತ್ಮೀಯತೆ ಬೆಳೆಸಿಕೊಂಡಿದ್ದು. ಅವರ ಬಹುಪಾಲು ಕಾದಂಬರಿಗಳಲ್ಲಿ, ಕಥೆಗಳಲ್ಲಿ, ಸಂಸ್ಕೃತಿ ಹಾಗೂ ಸಮಾಜದ ಕುರಿತ ಬರಹಗಳಲ್ಲಿ ಇದ್ದದ್ದು ಪರಂಪರೆ ಹಾಗೂ ಆಧುನಿಕತೆಯ ಮುಖಾಮುಖಿ. ಈ ಗೊಂದಲದಲ್ಲಿಯೇ ಬಹುಶಃ ಅವರ ಎಲ್ಲಾ ವಾದಗಳು 'ವಿವಾದಾತ್ಮಕ'ವಾಗಿದ್ದು. ಅವರನ್ನು 'ದ್ವಂದ್ವಮೂರ್ತಿ' ಎಂದು ಕನ್ನಡ ಕೆಲ ಪ್ರಸಿದ್ಧ ವಿಮರ್ಶಕರು, ಬರಹಗಾರರು ಕರೆದರು. ನನಗೆ ಕಂಡದ್ದು ಅವರಲ್ಲಿ ಒಟ್ಟೊಟ್ಟಿಗೆ ಇದ್ದ ಆಧುನಿಕತೆಯ ಬಹುಮುಖ್ಯ ಅಂಶವಾಗಿದ್ದ Rationality ಬಗ್ಗೆ ಇರುವ ಅತೀವ ಕುತೂಹಲ,ನಂಬಿಕೆ, ಮತ್ತು ನಮ್ಮ ಪರಂಪರೆಯ ಜ್ಞಾನದ, ಆಚರಣೆಗಳ ಬಗೆಗಿನ ಅವರ ಅನುಮಾನಪೂರಿತ ಗೌರವ,ಪ್ರೀತ್ಯಾದರಗಳು. ಇವೆರಡೂ ಅವರಲ್ಲಿ ಮಿಳಿತವಾಗಿದ್ದರಿಂದ ಅವರನ್ನು ಅವರೇ 'ಒಳಗಿನ ವಿಮರ್ಶಕ' (Critical Insider) ಎಂದು ಕರೆದುಕೊಂಡರು. ಅವರೆಂದೂ ಪರಂಪರೆಯ, ಸಂಪ್ರದಾಯದ ಸಂರಚನೆಗಳನ್ನು ಹಳಿಯಲಿಲ್ಲ, ದ್ವೇಷಿಸಲಿಲ್ಲ. ಬದಲಾಗಿ ಅತೀವ ಚಿಕಿತ್ಸಕ ನೋಟದಿಂದ ವಿಮರ್ಶಿಸಿದರು (ಈ ಚಿಕಿತ್ಸಕ ದೃಷ್ಟಿಕೋನದಲ್ಲಿರುವ ಸಮಸ್ಯೆಗಳ ಕುರಿತಾದ ನಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು) ಬೌದ್ಧಿಕವಾದ ಭಿನ್ನಾಭಿಪ್ರಾಯ ಹೊಂದಿಯೂ ಸಂವಾದ ಸಾಧ್ಯವಾಗಬಹುದಾದ ಪ್ರಜಾಪ್ರಭುತ್ವವಾದಿ ನಿಲುವು ಅವರಿಗಿತ್ತು. ಈ ಚಿಕಿತ್ಸಕ ದೃಷ್ಟಿಕೋನಕ್ಕೆ ಅವುಗಳದೇ ಆದ ಮಿತಿ ಇವೆ ಅನ್ನುವುದನ್ನು ನಾವು ಗಮನಿಸಬಹುದು.

ಹಾಗೆಯೇ ಆಧುನಿಕ ಸಂರಚನೆಗಳನ್ನೂ ಅವರು ತೀವ್ರ ವಿಮರ್ಶೆಗೆ ಒಳಪಡಿಸಿದರು. ಹೀಗೆ ಮಾಡುವಾಗ ಅವರಿಗೆ ತೀವ್ರವಾಗಿ ಕಾಡಿದ ವಿಷಯಗಳನ್ನು ಹೇಗೆ ಅನಿಸಿತೋ ಹಾಗೆಯೇ ಹೇಳಿದರು. ಜನರ ದೃಷ್ಟಿಯಲ್ಲಿ ಅವಕಾಶವಾದಿ ಎನಿಸಿಕೊಂಡರೂ ನಿಲುವನ್ನು ಬದಲಿಸಿಕೊಳ್ಳಲಿಲ್ಲ. ಕೊನೆಯವರೆಗೂ ಅವರು ವಿವಾದಾತ್ಮಕ ವ್ಯಕ್ತಿಯಾಗಿಯೇ ಉಳಿದರು. ಈ ದ್ವಂದ್ವಗಳನ್ನು ಬಿಡಿಸಿ ಭಾರತೀಯ ಸಂಪ್ರದಾಯಗಳನ್ನು ನೋಡುವ ಪರಿ ಹೇಗೆ ಎನ್ನುವ ಕೆಲಸವನ್ನು ಅವರು ಮಾಡಬಹುದಿತ್ತೇನೋ, ಅವರ ಸಮಕಾಲೀನರಲ್ಲಿ ಅವರಿಗೆ ಅದು ಹೆಚ್ಚು ಸಾಧ್ಯವಾಗುತ್ತಿತ್ತೇನೋ ಅನಿಸುತ್ತದೆ. ಈ ಸಾಧ್ಯತೆಗಳ ಬಗ್ಗೆ ಅವರಿಗಿದ್ದ ಮುಕ್ತ ಮನಸ್ಸು ನನ್ನನ್ನು ಅವರ ವ್ಯಕ್ತಿತ್ವದೆಡೆಗೆ ಸೆಳೆಯಿತು. ಕಳೆದೆರಡು ವರ್ಷಗಳಲ್ಲಿ ಈ ಸಾಧ್ಯತೆಗಳ ಬಗ್ಗೆ ತೀವ್ರವಾದ ವೈಚಾರಿಕ ಭಿನ್ನಾಭಿಪ್ರಾಯ ಕಾಣಿಸಿದ್ದು, ಇದನ್ನೂ ಗೌರವಿಸುವ ಮುಕ್ತತೆ ಅವರಲ್ಲಿತ್ತು.

ಪ್ರಸ್ತುತ ನಾನು ಭಾರತೀಯ ಸಂಪ್ರದಾಯಗಳು ಪಶ್ಚಿಮದೊಂದರೊಡನೆ ವ್ಯವಹರಿಸುವ ವಿವಿಧ ರೀತಿ ಮತ್ತು ಈಗ ನಮ್ಮ ಮಧ್ಯದಲ್ಲಿರುವ ಸಾಹಿತ್ಯ ವಿಮರ್ಶೆ ಇವುಗಳ ನಡುವಿನ ಭಿನ್ನತೆಯನ್ನು, ಸಾಂಸ್ಕೃತಿಕ ಭಿನ್ನತೆಯ ಹಿನ್ನೆಲೆಯಲ್ಲಿ ಅರ್ಥೈಸುವ ಚೌಕಟ್ಟೊಂದನ್ನು ರೂಪಿಸುವ ಸಂಶೋಧನೆಯಲ್ಲಿ ತೊಡಗಿದ್ದೇನೆ. ಈ ವಿಧವಾದ ಸಂಶೋಧನೆಯನ್ನು ಕೈಗೆತ್ತಿಕೊಳ್ಳುವ ಪ್ರಚೋದನೆಯನ್ನು ನೀಡಿದ್ದು ಅನಂತಮೂರ್ತಿಯವರಂಥ ವಸಾಹತೋತ್ತರ ಚಿಂತಕರೇ. ಆದರೆ ಇಂಥ ದ್ವಂದ್ವವನ್ನು ವಸಾಹತು ಪ್ರಜ್ಞೆಯಿಂದ ಬಿಡಿಸಿಕೊಳ್ಳುವ ತಾತ್ವಿಕ ಸಿದ್ಧಾಂತದ ಚೌಕಟ್ಟನ್ನು ನೀಡಿದ್ದು ಎಸ್.ಎನ್ .ಬಾಲಗಂಗಾಧರ ಮತ್ತವರ 'ಸಂಸ್ಕೃತಿಗಳ ತೌಲನಿಕ ವಿಜ್ಞಾನ' (Comparative science of

cultures) .ಹಾಗಾಗಿ ನನಗೆ ಅನಂತಮೂರ್ತಿ ಮತ್ತು ಬಾಲಗಂಗಾಧರ ಅವರು ವಿರೋಧಿ ಬಣಗಳ ನಾಯಕರಂತೆ ಕಾಣದೇ ಕನ್ನಡ ಓದುಗಳಾಗಿ ಮತ್ತು ಸಂಶೋಧನಾ ವಿದ್ಯಾರ್ಥಿಯಾಗಿ ಒಂದು ಬೌದ್ಧಿಕ ಪರಂಪರೆಯ ಬಿಂದುಗಳಾಗಿ, ಮುಂದುವರಿಕೆಯಾಗಿ ಕಾಣುತ್ತಿದ್ದಾರೆ.

ಅಂದಹಾಗೆ ಕೆಲವು ವರ್ಷಗಳ ಹಿಂದೆ ಅನಂತಮೂರ್ತಿಯವರು, ಕೆ.ವಿ.ಅಕ್ಷರರೊಂದಿಗೆ ಹೆಗ್ಗೋಡಿನಲ್ಲಿ ವಚನಗಳ ಓದಿನ ಬಗ್ಗೆ ಬಾಲಗಂಗಾಧರರೊಡನೆ ಸಂವಾದ ನಡೆಸಿದ್ದರು. ತೀವ್ರ ಭಿನ್ನಾಭಿಪ್ರಾಯ ಹಾಗೂ ವಾಗ್ವಾದದಲ್ಲಿಯೂ ಸಂವಾದ ಮುಂದುವರೆಯಿತು. ಈಗಿನ ಅವರ ಶಿಷ್ಯ ಪರಂಪರೆಯವರು ವರ್ಷಗಳ ಹಿಂದೆ ದಿನಪತ್ರಿಕೆಯೊಂದರಲ್ಲಿ ನಡೆಸಿದ ವಚನಗಳ ಕುರಿತ ಚರ್ಚೆಯಲ್ಲಿ ಬಳಸಿದ ಭಾಷೆಯನ್ನು ಅನಂತಮೂರ್ತಿಯವರು ಅಂದು ಬಳಸಲಿಲ್ಲ. ಯಾವ ಹುನ್ನಾರದ ಆರೋಪವನ್ನೂ ಮಾಡದೇ 'ಮೌನಿ'ಯಾದರು. ಕನ್ನಡ ಸಾರಸ್ವತ ಲೋಕಕ್ಕೆ ಒಂದು ಸಾಂಸ್ಕೃತಿಕ ನೆಲೆಗಟ್ಟನ್ನು ಒದಗಿಸಲು ಪ್ರಯತ್ನಿಸಿದರು. ದಲಿತ-ಬಂಡಾಯ ಸಾಹಿತಿಗಳು, ಆಧುನಿಕತೆಯ ಪ್ರಭಾವಕ್ಕೆ ಒಳಗಾದ ಬರಹಗಾರರು ಮತ್ತು ಚಿಂತಕರೆಲ್ಲರೊಡನೆ ಸ್ನೇಹವಿಟ್ಟುಕೊಂಡಿದ್ದ ಅನಂತಮೂರ್ತಿಯವರು ಯಾರ ಬೆಂಬಲಕ್ಕೂ ಕಾಯದೇ ತಮಗನ್ನಿಸಿದ್ದನ್ನು ನೇರವಾಗಿ ಹೇಳಿದರು. ತಮ್ಮ ನಿಲುವಿನಿಂದ ಎಂದೂ ಹಿಂದೆಗೆಯಲ್ಲಿಲ್ಲ. ಅದಕ್ಕಾಗಿಯೇ ಅನಂತಮೂರ್ತಿಯವರು ಚಳವಳಿಗಿಂತ ಸಂಸ್ಥೆಗಳನ್ನು ಕಟ್ಟುವುದರಲ್ಲಿ ಆಸಕ್ತರಾಗಿದ್ದರು ಅನಿಸುತ್ತದೆ.

ಇತ್ತೀಚಿಗೆ ನಡೆದ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಕನ್ನಡದ ಖ್ಯಾತ ವಿಮರ್ಶಕರೊಬ್ಬರು ಅವರನ್ನು 'ಮೂರನೇ ಜಗತ್ತಿನ ಬೌದ್ಧಿಕ ಚಹರೆ' ಎಂದು ಕರೆದರೆ ತಪ್ಪಾಗಲಾರದು ಎಂದಿದ್ದಾರೆ. ಇದು ಹೌದೋ ಅಲ್ಲವೋ ಗೊತ್ತಿಲ್ಲ, ಹೀಗೆ ಕರೆಯಬಹುದೋ ಏನೋ ಅದೂ ಗೊತ್ತಿಲ್ಲ. ಆದರೆ ಒಂದಂತೂ ಸ್ಪಷ್ಟ, ಅವರ ನಿರ್ಗಮನದ ನಿರ್ವಾತ ತುಂಬಲು ಈಗ ಕನ್ನಡ ಲೋಕದಲ್ಲಿ ಉಲ್ಲೇಖಿಸಬಹುದಾದ ಹೆಸರುಗಳಿವೆ ಎಂದೂ ಅನಿಸುತ್ತಿಲ್ಲ.

ಆರೋಹಿ, ೧೯೨, ೭ನೇ ಮೇನ್, ೪ನೇ ಬ್ಲಾಕ್,
ಜಯನಗರ, ಬೆಂಗಳೂರು - ೫೬೦ ೦೧೧
ashwini.b.desai@gmail.com

ಪ್ರತಿಕ್ರಿಯೆ

೨೦೧೪ರ ಚಂದಾ ಹಣ ತಡವಾಗಿ ಕಳುಹಿಸುತ್ತಿದ್ದೇನೆ. ಕ್ಷಮೆ ಇರಲಿ. ಸರಳ ಗ್ರಹಿಕೆಗಳ ವಿಶ್ಲೇಷಣೆ, ಪೂರ್ವಗ್ರಹದ ವಿಮರ್ಶೆ-ಇವುಗಳಿಂದ ದೂರವಿದ್ದು ಕೃತಿಗೆ ಹಾಗೂ ಕೃತಿಯ ಸೃಷ್ಟಿಗೆ ಕಾರಣವಾದ ಕಾಲಧರ್ಮಕ್ಕೆ ಬದ್ಧವಾಗಿ ವಿಶ್ಲೇಷಣೆಗಳನ್ನು ಆರಿಸಿ ಪ್ರಕಟಿಸುತ್ತಿದ್ದೀರಿ. ಲೇಖಕ, ಲೇಖನ ಸಿಗುವುದೆಷ್ಟು ಕಷ್ಟವೋ, ಅಂತಹ ಲೇಖನಗಳಿಗೆ ಬದ್ಧವಾಗಿರುವ ಪತ್ರಿಕೆ ನಡೆಸುವುದೂ ಕಷ್ಟ. ಆದರೂ ನಿಲ್ಲಿಸಬೇಡಿ.

■ **ಗಿರೀಶ ಕಾಸರವಳ್ಳಿ, ಬೆಂಗಳೂರು**

ನನ್ನ ಜೀವಕೊರಳ ಗೆಳೆಯ ದೇಶಕುಲಕರ್ಣಿಯ ಕತೆ ಕಣ್ಣೀರು ಮಿಡಿಸಿತು. (ವಿ.ಕ. ಸಾ.ಪು. ೨೭.೦೭.೧೪) ಲೇಖನದ ಪ್ರತಿಯೊಂದು ವಾಕ್ಯವೂ ನನ್ನ ಅನುಭವವೇ ಅಭಿವ್ಯಕ್ತಿ ಪಡೆದಂತಿತ್ತು. ಲೇಖಕರಿಗೆ ಧನ್ಯವಾದಗಳು. ದೇಶ ವಿಜಯಾ ಕಾಲೇಜು ವಿದ್ಯಾರ್ಥಿಯಾಗಿ ಬಿಎಸ್ಸಿಯಲ್ಲಿ ನನಗಿಂತ ಒಂದು ತರಗತಿ ಮುಂದಿದ್ದ (೧೯೫೭). ಕಾಲೇಜು ಕಡತದಲ್ಲಿ ಅವನ ಹೆಸರು ಜಿ.ಎಲ್. ಉಪೇಂದ್ರ ಎಂದಷ್ಟೆ, ಎರಡೂ ವರುಷಗಳು ವರಸೆಯಾಗಿ, ಕಾಲೇಜಿನ ವಾರ್ಷಿಕ ಸಂಚಿಕೆಗಾಗಿ ಪ್ರೀ ಯೂನಿವರ್ಸಿಟಿ ವಿದ್ಯಾರ್ಥಿಯ ಡೈರಿಯಿಂದ ಮತ್ತು ಘಳಿಗೆಗೊಂದು ಗುಳಿಗೆ ಎಂಬ ಶೀರ್ಷಿಕೆ ಹೊತ್ತ ನಗೆಬರಹಗಳನ್ನು ಬರೆದ. ಆಗ ನವೋದಯದ ಸಂಕ್ರಮಣ ಕಾಲ. ಕನ್ನಡ ಸಾರಸ್ವತ ಬಾನಂಗಳ ನವ್ಯಾಕ್ರಾಂತವಾಗಿ, ಅಡಿಗರ ವರ್ಚಸ್ಸು ಮಿನುಗುತ್ತಿದ್ದ ದಿನಗಳು. ನಾವುಗಳೆಲ್ಲ ಇನ್ನೂ ಕುವೆಂಪು, ಬೇಂದ್ರೆ ಗುಂಗಿನಲ್ಲೆ ಇದ್ದು ಕಳಚಿಕೊಂಡು ಬರಲಾಗದಷ್ಟು ಮೋಹಗೊಂಡಿದ್ದೆವು. ಜೊತೆಗೆ ನವ್ಯದಲ್ಲಿ ಕಾವ್ಯಶಿಲ್ಪದ ತೀವ್ರ ಕೊರತೆಯಿದೆ ಎಂಬ ಮಾತು ಕೇಳಿ, ಅತ್ತ ಬೆನ್ನು ತೋರಿಸಿದ್ದೆ. ಕೀಟ್ಸ್‌ನ 'ode to autumn' ಗೀತೆಯನ್ನ ಕನ್ನಡಕ್ಕೆ ತಂದು ಋತುವೈಭವ ಎಂಬ ಚೌಪದಿಯನ್ನು ಕಾಲೇಜು ಸಂಚಿಕೆಗೆ ಕೊಟ್ಟೆ. ಪ್ರೊ. ಜಿ.ವಿ. ಕವನವನ್ನ ಮೆಚ್ಚಿ ಪ್ರಕಟಿಸಿದ್ದಷ್ಟೆ. ಮತ್ತೆ ಪದ್ಯರಚನೆಯತ್ತ ಮುಖ ಮಾಡಲಿಲ್ಲ, ಈ ದೇಶನ ಲಲಿತ ಪ್ರಬಂಧದ ಪ್ರಭಾವ ನನ್ನ ಮೇಲೆ ಎಷ್ಟು ಗಾಢವಾಗಿತ್ತೆಂದರೆ, ಆ ಪ್ರಕಾರಕ್ಕೆ ಹೊರಳಿದೆ. ದಾರಿ ಸುಗಮವೆನಿಸಿತು. ಮುನ್ನಡೆದೆ. ಅಂತೆಯೇ ನನ್ನ ಗೆಳೆಯನೂ ಆ ನಿಟ್ಟಿನಲ್ಲೆ ಕ್ರಮಿಸಿದ್ದರೆ ಇಂದು ನಮಗೆಲ್ಲ ದಾರಿದೀಪವಾಗುತ್ತಿದ್ದ. ಅಡಿಗರ ನೆರಳಲ್ಲಿ ನವ್ಯಕವಿಯಾಗಲು ಹೊರಟ. ಆಲದ ಮರದ ಬುಡದಲ್ಲಿ ಬೇರೊಂದು ಸಸಿ ಬೆಳೆದಿದ್ದುಂಟೆ? ದೇಶ ನವ್ಯಕವಿಯಾಗಿಯೂ ಮಿಂಚಲಿಲ್ಲ, ವಿಮರ್ಶಕನಾಗಿಯೂ ಮೆರೆಯಲಿಲ್ಲ, ಮಾಧ್ಯಮಗಳಲ್ಲಿ ಮಿನುಗಲಿಲ್ಲ.

ಸದರಿ ಲೇಖನದಲ್ಲಿ ಡಿ.ವಿ. ಪ್ರಹ್ಲಾದ್ ಪ್ರಸ್ತಾಪಿಸಿರುವ ಸಭೆಯಲ್ಲಿ ನಾನೂ ಹಾಜರಿದ್ದೆ. ದೇಶ ಕುಲಕರ್ಣಿ, ಭೈರಪ್ಪನವರ ಕಾದಂಬರಿಗಳನ್ನು ವಿಮರ್ಶಿಸಲು ಹೊರಟ. ದನಿಯಲ್ಲಿ ಸೋಲಿತ್ತು.

(ದನಿ ಮೊದಲಿನಿಂದಲೂ ಸೌಮ್ಯ). ಜೊತೆಗೆ ಬೆನ್ನತ್ತಿದ್ದ ಉಬ್ಬಸ. ಅವನ ಭಾಷಣ ಕ್ಲಿಕ್ ಆಗಲಿಲ್ಲ, ಧರ್ಮದ ಕುರಿತ ನನ್ನ ಪ್ರಶ್ನೆಗೆ ಭೈರಪ್ಪನವರಿಂದ ಸಮಾಧಾನಕರ ಉತ್ತರವೂ ಸಿಗಲಿಲ್ಲ. ಆವರಣ ಜಗಮಗಿಸಿತಷ್ಟೆ.

ಈ ನಡುವೆ ಒಂದು ಅಚಾತುರ್ಯ ನಡೆಯಿತು. ದೇಶನ ಲಲಿತಪ್ರಬಂಧದ ಶೀರ್ಷಿಕೆಯನ್ನು ಅವನ ಅನುಮತಿಯಿಲ್ಲದೆ ಅನಾಮತ್ತಾಗಿ ಹೈಜಾಕ್ ಮಾಡಿ ನನ್ನ ಪ್ರಬಂಧಸಂಕಲನಕ್ಕೆ ನಾಮಕರಣ ಮಾಡಿ, ಪುಸ್ತಕ ಲೋಕಾರ್ಪಣವಾಗಲು ಒಂದು ವಾರ ಮುಂಚೆ ಗೆಳೆಯನಿಗೆ ಫೋನಾಯಿಸಿ ಕ್ಷಮೆ ಕೋರಿದೆ. ಅದರ ಅಗತ್ಯವಿಲ್ಲ, ಮನೆಗೆ ಬಾ. ನಿನ್ನ ನೋಡಬೇಕು ಎಂದ ಅಷ್ಟೆ. ವಿಜಯನಗರಕ್ಕೆ ಹೋದೆ. ಆ ಉಪೇಂದ್ರ ಇವನೆ (!?) ಅನ್ನುವಷ್ಟು ಜರ್ಝರೀಭರಿತ ದೇಹ. ಉಸಿರಾಟದಲ್ಲಿ ತೊಡಕು. ಯಕೃತ್ತಿನ ಬಾಧೆ. ಮನದಾಳದಲ್ಲಿ ಹೇಳಿಕೊಳ್ಳಲಾಗದ ತೊಳಲು. ಮಾತಿನಲ್ಲಿ ಅಭೂತಪೂರ್ವ ಕಹಿ. ಸಮಾಕಾಲೀನ ಕವಿಗಳನ್ನು (ಯಾರು ಎದುರಿಗೆ ಜೇನುಮಳೆ ಸುರಿಸಿ, ಮರೆಯಲ್ಲಿ ಬೆನ್ನಿಗೆ ಚೂರಿ ಇರಿದರೋ ಕಾಣೆ) ವಾಚಾಮಗೋಚರ ಬೈದ. ಕಾಳಿದಾಸ ಬೌದ್ಧಿಕವಾಗಿ ದಿವಾಳಿಯಾದದ್ದು ರಘುವಂಶದಲ್ಲಿ ಎಂದು ಅವನಾಡಿದ್ದ ಮಾತುಗಳನ್ನ ಹಿಂದೊಮ್ಮೆ ಕೇಳಿದ್ದೆ. ತಟಾಕದಲ್ಲಿ ಜಲಕ್ರೀಡೆಯಾಡುತ್ತಿದ್ದ (ಹದಿನೆಂಟು/ಹತ್ತೊಂಬತ್ತನೆ ಸರ್ಗ ಎಂದು ನೆನಪು) ಲಲನೆಯರ ಕಂಚುಕಕ್ಕೆ ಅಂಟಿಕೊಂಡಿದ್ದ ಕಮಲದ ಪರಾಗಗಳ ಮೇಲೆ ನೇಸರನ ಹೊಂಗಿರಣ ತಾಕಿ ಪರಾಗಕಣಗಳು ಚಿನ್ನದ ಕಣಗಳಂತೆ ಥಳಥಳಿಸುತ್ತಿದ್ದುದನ್ನು ಬಾಲಿಶ ಉಪಮೆ ಎಂದು ಕರೆದಿದ್ದ. ಆ ಬಗ್ಗೆ ಚರ್ಚಿಸಲು ಹೋದವ (ದೇಶ ಬಿಎಸ್ಸಿಯಲ್ಲಿ ಸಂಸ್ಕೃತದಲ್ಲಿ ಮೊದಲ ರ್‍ಯಾಂಕ್ ಪಡೆದವ) ಗಪ್‌ಚುಪ್ ಆದೆ. ಮಾತೆಲ್ಲ ಅವನದೆ. ಅವನಿಗೆ ವಿದಾಯ ಹೇಳಿ ಹೊರಬೀಳುವ ಮುನ್ನ ಅವನ ಕವನ ಸಂಕಲನವೊಂದನ್ನ ನನ್ನ ಕೈಗಿಟ್ಟ. (ಕೃತಿ: ಪದ್ಯಗಂಧ, ಮುನ್ನುಡಿ: ಡಾ। ಎಚ್.ಎಲ್. ಪುಷ್ಪ, ಬೆನ್ನುಡಿ: ಡಿ.ವಿ. ಪ್ರಹ್ಲಾದ್)

ಮನೆಗುಂಟ ದೇಶನದೆ ಗುಂಗು. ಆಳುವರಸರ ಬಾಯ್ದಾಂಬೂಲಕೆ ಕೈಯಾಗುವ ಕುಕವಿಗಳಿಗೆ ಸಿಗುವ ಮಾನ್ಯತೆ ಈ ಸುಕವಿಗೆ ದೊರೆಯಲಿಲ್ಲವೆಂಬ ಕೊರಗು ಕಾಡಿತು. ಎಂಥ ಕಾಲಘಟ್ಟದಲ್ಲಿದ್ದೇವೆ! ಉಷ್ಟ್ರಾಣಾಂ ವಿವಾಹೇತು ಗಾರ್ದಭಾಃ ಪಾರ್ಶ್ವ ಗಾಯಕಾಃ । ಪರಸ್ಪರಂ ಪ್ರಶಂಸಂತಿ ಅಹೋರೂಪಂ ಅಹೋಧ್ವನಿಃ ನಮ್ಮದಲ್ಲಿ ಕೆತ್ತಿದ್ದು ಸಾಕಾಯಿತೇನೋ! ಈಗ ಕುಮಾರವ್ಯಾಸ, ಪಂಪರು ಗೋರಿಯಿಂದ ಎದ್ದುಬರುತ್ತಿದ್ದಾರೆ! ನಮ್ಮರ ಕಣ್ಣು ಕೋರೈಸುತ್ತಿದೆ!

ಮತ್ತೆ ದೇಶಕುಲಕರ್ಣಿಯ ಮನೆಗೆ (ಅದೇ ಕೊನೆಯ ಬಾರಿ) ಹೋಗುವ ಮುನ್ನ ಸುರಭಿ ಎಂಬ ಜೇರಿಗೆ, ಹಣ್ಣಿನ ರಸದ ಮಿಶ್ರಣದ ಐದು ಲೀಟರ್ ಡಬ್ಬ ಹೊತ್ತು ಹೊರಟೆ. ಅವನಿಗೆ ಆಗ ದ್ರವಾಹಾರವಷ್ಟೆ. ಇದೊಂದು ಚೇತೋಹಾರಿ ಪೇಯ. ಡಬ್ಬ ನೋಡಿ– ಈ ಸಿರಪ್ ನೀನು sponsor ಮಾಡ್ತೀಯಾ ಸಿ.ಎನ್. ಕೆ? ಎಂದು ಕೇಳಿದ. ಒಂದು ಗುಟುಕು ಕುಡಿದು ಥ್ಯಾಂಕ್ಸ್ ಎಂದ. ಕರುಳು ಚುರ್ರೆನಿಸಿತು. ನನ್ನ ಘಳಿಗೆಗೊಂದು ಗುಳಿಗೆ ಪ್ರಬಂಧ ಸಂಕಲನಕ್ಕೆ ಪ್ರತಿಕ್ರಿಯಿಸುತ್ತ ಕಾಲೇಜು ದಿನಗಳಲ್ಲಿ ನಾನು ಹಾಡುತ್ತಿದ್ದ ದೋ ಆಂಖೇ ಬಾರಾ ಹಾತ್ ಹಾಡನ್ನು ನೆನಪು ಮಾಡಿಕೊಂಡ. ಕೊನೆಗೆ ಮನ್ನಾ ಡೇ ಹಾಡಿದ ಗೀತೆಯೊಂದರಿಂದ ತನ್ನ ಪ್ರತಿಕ್ರಿಯೆಯನ್ನು ಉಪಸಂಹರಿಸಿದ–ನಿರ್ಬಲ್ ಕೀ ಲಡಾಯಿ ಬಲಿದಾನ್ ಕೀ। ಯೇ ಕಹಾನೀ ಹೈ ದಿಯೇ ಕೀ ಔರ್ ತೂಫಾನ್ ಕೀ ಈ ಸಾಲು ದೇಶನ ವಿಷಯದಲ್ಲಿ ಎಷ್ಟು ಪ್ರಸ್ತುತ! ನನಗೆ ವಿಜಯ ಕರ್ನಾಟಕ ಆಪ್ತವಾಗುವುದು ಇಂತಹ ರಸಕ್ಷಣಗಳನ್ನು ಪ್ರಸಾದಿಸುವ ಅದರ ಔದಾರ್ಯದಿಂದ.

■ **ಸಿ.ಎನ್.ಕೃಷ್ಣಮಾಚಾರ್,**
೩, ಕ್ಲಾಸಿಕ್ ಆರ್ಚರ್ಡ್ಸ್, ಮೀನಾಕ್ಷಿ ದೇವಾಲಯ ಹಿಂಭಾಗ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು–೭೬, ಮೊಬೈಲ್: ೯೯೪೫೫೧೭೦೧೪೬೨

(ವಿಜಯಕರ್ನಾಟಕ ಪತ್ರಿಕೆಯಲ್ಲಿ ಪ್ರಕಟಗೊಂಡಿದ್ದ ಬರಹಕ್ಕೆ ಬಂದ ಪ್ರತಿಕ್ರಿಯೆ.
ಈ ಪತ್ರ ಒದಗಿಸಿದ ಗೆಳೆಯ ಜೆ.ಪಿ.ಗೆ ವಂದನೆ.)



ಬಳ್ಳಾರಿಯ ಭೂ ದೃಶ್ಯ

ಸಂಚಿಕೆಯ ಗ್ಯಾಲರಿ



ಸಾವಿರ ಕಂಬದ ಬಸದಿ
ಮೂಡುಬಿದಿರೆ

ಕನ್ನಡ ಪ್ರಕಟಣೆಗಳು



JOURNALS

INDIAN LITERATURE
Bi-monthly in English
Annual subscription Rs. 250
Three years subscription Rs. 650
Each copy Rs. 50

SAMKALEENA BHARATIYA SAHITYA
Bi-monthly in Hindi
Annual subscription Rs. 125
Three years subscription Rs. 350
Each copy Rs. 25

ಸಾಹಿತ್ಯ ಅಕಾದೆಮಿ
ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560 001
ದೂ : 22245152 / ಫ್ಯಾಕ್ಸ್ : 22121932 email : sahityakademi@gmail.com

SANCHAYA (Bi-Monthly), MAG(2) PRB-DECL: 309/94-95
Edited, Printed & Published by: D.V. PRAHLAD, No. 100, 2nd Main, 6th Block,
3rd Stage, 3rd Phase, Banashankari, Bangalore - 560 085, Ph: 080-2679 1925